ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ



ತ್ರಿಪುರಾದ ಹಿರಿಯ
ಸಿಪಿಐ(ಎಂ) ಮುಖಂಡ
ಬಜುಬನ್ ರಿಯನ್ ನಿಧನ

ಸಂಪುಟ 14 | ಸಂಚಿಕೆ 10 | ಮಾರ್ಚ್ 2-8, 2020 | ಪುಟ 16 | ರೂ.10/-

Web : www.janashakthi.co.in e-mail : janashakthi2007@gmail.com



ದಿಲ್ಲಿಯಲ್ಲಿ "ಗುಜರಾತ್ ಮಾದರಿ" ಧ್ವಂಸಕೃತ್ಯ: 42 ಪ್ರಾಣಬಲಿ

ಸಹಯಾನ ಸಾಹಿತ್ಯೋತ್ಸವ 10 : "ಸಿನೆಮಾ : ಹೊಸ ತಲೆಮಾರು" ಮಹತ್ವದ ಸಂವಾದ





ಬಿಜೆಪಿ ಶಾಸಕ ಯತ್ನಾಳ್‌ರಿಂದ ಸ್ವಾತಂತ್ರ್ಯ ಹೋರಾಟಗಾರ ದೊರೆಸ್ವಾಮಿ ಅವಹೇಳನ: ವ್ಯಾಪಕ ಖಂಡನೆ



ಭಾರತದಲ್ಲಿ ಟ್ರಂಪ್ ಮೋದಿ ಸರಕಾರದ ಅಡಿಯಾಳುತನದ ಪ್ರದರ್ಶನ

ಜನಗಳ ದನಿಗೆ ಕಿವಿಗೊಡಿ, ಅಮೆರಿಕಾದ ಒತ್ತಡಗಳನ್ನು ಪ್ರತಿರೋಧಿಸಿ ಬಿಜೆಪಿ ಸರಕಾರಕ್ಕೆ ಸಿಪಿಐ(ಎಂ) ಪೊಲಿಟ್ ಬ್ಯುರೊ ಆಗ್ರಹ

ಅಮೆರಿಕ ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ರವರು ಭಾರತ ಭೇಟಿಯ ಏಕಪಕ್ಷೀಯ ಅಜೆಂಡಾಕ್ಕೆ ಬಲಿಬೀಳಬಾರದು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಮೋದಿ ಸರಕಾರಕ್ಕ ಕರೆ ನೀಡಿದೆ. ಅಮೆರಿಕನ್ ಆಡಳಿತದ ಏಕಮೇವ ಆಶಯವೆಂದರೆ ಅಮೆರಿಕನ್ ಕಾರ್ಪೊರೇಟ್ ಹಿತಗಳಿಗೆ ಉತ್ತೇಜನೆ ನೀಡಲು ಭಾರತದ ಅರ್ಥವ್ಯವಸ್ಥೆಯನ್ನು ಇನ್ನಷ್ಟು ತೆರೆಸುವುದು, ಈ ಮೂಲಕ ಟ್ರಂಪ್ ರವರ ಮರು ಚುನಾವಣೆಯ ಪ್ರಯತ್ನಕ್ಕೆ ನೆರವಾಗುವುದು ಎಂದು ಫೆಬ್ರುವರಿ 24 ರಂದು ನೀಡಿದ ಹೇಳಿಕೆಯಲ್ಲಿ ಪೊಲಿಟ್‌ಬ್ಯುರೊ ಹೇಳಿದೆ.

ಅಮೆರಿಕಾದ ಅಜೆಂಡಾ ಭಾರತೀಯ ರೈತರ, ನಮ್ಮ ಕೃಷಿಯ, ನಿರ್ದಿಷ್ಟವಾಗಿ, ಹೈನುಗಾರಿಕೆ ಮತ್ತು ಕೋಳಿ ಸಾಕಣೆ ಉದ್ಯಮವನ್ನು ಅತ್ಯಂತ ಪ್ರತಿಕೂಲಕರವಾಗಿ ತಟ್ಟುತ್ತದೆ. ಅಮೆರಿಕ ಸಂಯುಕ್ತ ಸಂಸ್ಥಾನ 867 ಬಿಲಯನ್ ಡಾಲರುಗಳ ಭಾರೀ ಸಬ್ಸಿಡಿಯ ಮೂಲಕ ತನ್ನ ಕೃಷಿವ್ಯಾಪಾರ ಕ್ಷೇತ್ರ ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೆಲೆಗಳನ್ನು ವಿಕೃತಗೊಳಿಸಿ, ಅಭಿವೃದ್ಧಿಶೀಲ ದೇಶಗಳ ಸ್ಥಳೀಯ ರೈತರು ಅವರೊಂದಿಗೆ ಸ್ಪರ್ಧಿಸಲಾರದಂತೆ ಮಾಡಿದೆ. ಟ್ರಂಪ್ ಈಗ ಭಾರತ, ತನ್ನ ರೈತರನ್ನು ಸಂರಕ್ಷಿಸಲು, ಜನಗಳ ಆಹಾರ ಭದ್ರತೆಗೆ ಆಹಾರ ಸಂಗ್ರಹವನ್ನು ಸಾಧ್ಯಗೊಳಿಸಲು, ಮತ್ತು ರೈತರಿಗೆ ಕನಿಷ್ಟ ಬೆಂಬಲ ಬೆಲೆಯನ್ನು ಕೊಡಲು ಒಂದು ಧೋರಣಾ ಸಾಧನವಾಗಿ ಕೆಲಸ ಮಾಡುತ್ತಿರುವ ಆಮದು ಸುಂಕಪಟ್ಟಿಯ ತಡೆಯನ್ನು ತೆಗೆದು ಹಾಕಬೇಕು ಎಂದು ಬಯಸುತ್ತಿದ್ದಾರೆ. ಇದು ಭಾರತೀಯ ಕೃಷಿಯನ್ನು ಮತ್ತು ನಮ್ಮ ಕೋಟ್ಯಂತರ ಜನಗಳ ಜೀವನಾಧಾರಗಳನ್ನು ಧ್ವಂಸಮಾಡುತ್ತದೆ.

ಟ್ರಂಪ್, ಈಗ ಜನಗಳ ಕೈಗೆಟಕುವ ಬೆಲೆಗಳಲ್ಲಿ ಸಾಮಾನ್ಯ ಬಳಕೆಯ ಔಷಧಿಗಳನ್ನು ಉತ್ಪಾದಿಸಿ ಒಂದು ನಿರ್ಣಾಯಕ ಪಾತ್ರ ವಹಿಸುತ್ತಿರುವ ಭಾರತದ ಆರೋಗ್ಯಪಾಲನೆ ವಲಯದ ಮೇಲೆಯೂ ಗುರಿಯಿಟ್ಟಿದ್ದಾರೆ. ಭಾರತ ಕಡ್ಡಾಯ ಲೈಸೆನ್ಸಿಂಗ್ ವ್ಯವಸ್ಥೆಯನ್ನು ತೆಗೆದು ಹಾಕಿ ಅಮೆರಿಕನ್ ಔಷಧಿ ಕಾರ್ಪೊರೇಟ್‌ಗಳಿಗ ಅನುಕೂಲ ಮಾಡಿಕೊಡಬೇಕು ಎಂದೀಗ ಅಮೆರಿಕ ಸಂಯುಕ್ತ ಸಂಸ್ಥಾನ ಆಗ್ರಹಿಸುತ್ತಿದೆ.

ಅಮೆರಿಕಾದ ಕಾರ್ಪೊರೇಟ್‌ಗಳ ಇ-ವಾಣಿಜ್ಯ ಅಜೆಂಡಾ ಕೂಡ ಇದೇ ರೀತಿಯಲ್ಲಿ ಅತಿಕ್ರಮಣಕಾರಿಯಾಗಿದೆ. ಅದು ವಿಶ್ವ ವ್ಯಾಪಾರ ಸಂಘಟನೆ(ಡಬ್ಲ್ಯುಟಿಒ)ಯಲ್ಲಿ ಒಂದು ಡಿಜಿಟಲ್ ವ್ಯಾಪಾರ ವ್ಯವಸ್ಥೆಗೆ ಭಾರತ ಸಹಿ ಹಾಕುವಂತೆ ಪುಸಲಾಯಿಸಲು ಪ್ರಯತ್ನಿಸುತ್ತಿದೆ. ಈ ವ್ಯಾಪಾರ ವ್ಯವಸ್ಥೆ ಅಮೆರಿಕನ್ ದೊಡ್ಡ-ತಂತ್ರಜ್ಞಾನ ವಲಯಕ್ಕೆ ಭಾರತದ ಅರ್ಥವ್ಯವಸ್ಥೆ ಮತ್ತು ರಾಜಕೀಯ ಪ್ರಕ್ರಿಯೆಯ ಮೇಲೆ ತನ್ನ ಹತೋಟಿಯನ್ನು ಹೆಚ್ಚಿಸಲು ಮತ್ತು ದತ್ತಾಂಶಗಳು ಗಡಿಗಳಾಚೆ ಯಾವುದೇ ಪರಿಹಾರ ನೀಡದೆ ಮುಕ್ತವಾಗಿ ಹರಿದಾಡಲು ಅನುಕೂಲ ಮಾಡಿ ಕೊಡುತ್ತದೆ. ಅದೇ ವೇಳೆಗೆ ಹೆಚ್1 ಬಿ ವೀಸಾಗಳನ್ನು ಕುರಿತಂತೆ ಅಮೆರಿಕಾದ ನಿರ್ಬಂಧಗಳ ಧೋರಣೆ ಭಾರತೀಯ ಐಟಿ ಉದ್ಯಮಕ್ಕೆ ಪ್ರತಿಕೂಲವಾಗಿದೆ. ಈ ಬಗ್ಗೆ ಭಾರತೀಯ ಸರಕಾರ ಒತ್ತು ನೀಡಬೇಕು ಎಂದು ಪೊಲಿಟ್ ಬ್ಯುರೊ ಹೇಳಿದೆ.

ಭಾರತದ ಸಣ್ಣ ಉತ್ಪಾಧಕರಿಗೆ, ವಿಶೇಷವಾಗಿ, ಸೌರಶಕ್ತಿ ಸೆಲ್‌ಗಳು ಮುಂತಾದ ರಂಗಗಳಲ್ಲಿನ ಸಣ್ಣ ಉತ್ಪಾದಕರಿಗೆ ನೀಡುತ್ತಿರುವ ರಫ್ತು ಸಬ್ಸಿಡಿಗಳ ಬಗ್ಗೆಯೂ ಒತ್ತಡಗಳನ್ನು ಹಾಕಲಾಗುತ್ತಿದೆ.

ಅಮೆರಿಕ ಸಂಯುಕ್ತ ಸಂಸ್ಥಾನವು ವಿಶ್ವಸಂಸ್ಥೆ ಹವಾಮಾನ ಬದಲಾವಣೆ ಚೌಕಟ್ಟು ಅಧಿನಿರ್ಣಯ ಕುರಿತ ಪ್ಯಾರಿಸ್ ಒಪ್ಪಂದದಿಂದ ಏಕಪಕ್ಷೀಯವಾಗಿ ಹೊರಬಂದಿದೆ, ಪರಿಹಾರ ನೀಡಲು, ಹವಾಮಾನ ಬದಲಾವಣೆಯನ್ನು ಶಮನಗೊಳಿಸುವ ನಿಧಿಗೆ ಹಣಕಾಸು ನೀಡಲು ನಿರಾಕರಿಸುತ್ತಿದೆ. ಭಾರತ ಪ್ರಮುಖ ಪರಿಸರ ಮಾಲಿನ್ಯ ಮತ್ತು ಹವಮಾನ ಬದಲಾವಣೆಯ ಸವಾಲುಗಳನ್ನು ಎದುರಿಸುತ್ತಿರುವುದರಿಂದ ಭಾರತ ಸರಕಾರ ಈ ಹವಾಮಾನ ಏಕಪಕ್ಷೀಯತೆಯನ್ನು ಪ್ರತಿರೋಧಿಸಬೇಕಾಗಿದೆ ಮತ್ತು ಅಮೆರಿಕ ಪರಿಸರ ಮಾಲಿನ್ಯ ಉಂಟುಮಾಡುವ ಗ್ರೀನ್ ಹೌಸ್ ಅನಿಲಗಳನ್ನು ಬಹಳ ಕಾಲದಿಂದ ಅತಿ ಹೆಚ್ಚು ಪ್ರಮಾಣದಲ್ಲಿ ವಾತಾವರಣಕ್ಕೆ ಬಿಡುತ್ತಿರುವ ದೇಶವಾಗಿರುವುದರಿಂದ ಅದರ ಹೊಣೆಗಾರಿಕೆಯನ್ನು ಒಪ್ಪಿಕೊಳ್ಳುವಂತೆ ಮಾಡಲು ಪ್ರತಿರೋಧವನ್ನು ಕಟ್ಟಿ ಬೆಳೆಸಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಆಗ್ರಹಿಸಿದೆ.

ಇಂದು ಅಮೆರಿಕ ಸಂಯುಕ್ತ ಸಂಸ್ಥಾನವು ಒಂದು ನಿಯಮ-ಆಧಾರಿತ ವ್ಯಾಪಾರ ಪದ್ಧತಿ ಮತ್ತು ಅಂತರ್ರಾಷ್ಟ್ರೀಯ ವ್ಯವಸ್ಥೆಗೆ ಅತಿ ದೊಡ್ಡ ಬೆದರಿಕೆಯ ಪ್ರತಿನಿಧಿಯಾಗಿದೆ, ಜೀವನಾಧಾರಗಳ ಭದ್ರತೆ ಮತ್ತು ಭಾರತದಂತಹ ದೇಶಗಳ ಸಾರ್ವಭೌಮತೆಯನ್ನು ಬುಡಮೇಲು ಮಾಡುತ್ತಿದೆ. ಅದರ ಸುಂಕಪಟ್ಟಿ ಏಕಪಕ್ಷೀಯತೆಯಿಂದಾಗಿ ಈಗಾಗಲೇ ಕಳೆದ ಒಂದು ವರ್ಷದಲ್ಲೇ ಉಕ್ಕು ಉತ್ಪನ್ನಗಳ ರಫ್ತಿನಲ್ಲಿ 46ಶೇ. ಇಳಿಕೆಯಾಗುವಂತಾಗಿದೆ. ಭಾರತವನ್ನು ಒಂದು ಅಭಿವೃದ್ಧಿ ಹೊಂದಿರುವ ದೇಶ ಎಂದು ಏಕಪಕ್ಷೀಯವಾಗಿ ಮರು ವರ್ಗೀಕರಣ ಮಾಡುವುದರಿಂದ ಬದ್ಧತೆಗಳನ್ನು ಪರಿಸ್ಥಿತಿಗಳಿಗನುಗುಣವಾಗಿ ಹೊಂದಿಸಿಕೊಳ್ಳಲು ಮತ್ತು ದೀರ್ಘಾವಧಿ ಅನುಷ್ಠಾನಕ್ಕೆ ಅಗತ್ಯವಾದ ವಿಶೇಷ ಮತ್ತು ಭಿನ್ನ ಪ್ರಕಾರದ ಅವಕಾಶಗಳು ಇಲ್ಲವಾಗುತ್ತವೆ ಎಂಬ ಸಂಗತಿಯತ್ತ ಪೊಲಿಟ್ ಬ್ಯುರೊ ಗಮನ ಸೆಳೆದಿದೆ.

ಹಲವು ಮಿಲಿಟರಿ ಮತ್ತು ಭದ್ರತಾ ಒಪ್ಪಂದಗಳು ಹಾಕುತ್ತಿರುವ ಒತ್ತಡಗಳು ಮತ್ತು ಅಮೆರಿಕಾದ ಸಾಮರಿಕ ಹಿತಗಳನ್ನು ಭದ್ರಗೊಳಿಸಿಕೊಳ್ಳಲಿಕ್ಕಾಗಿ ಹಾಗೂ ಶಸ್ತಾಸ್ತ್ರಗಳ ಮಾರಾಟವನ್ನು ಉತ್ತೇಜಿಸಲಿಕ್ಕಾಗಿ ಅನುಷ್ಠಾನಗೊಳಿಸಬೇಕು ಎಂದು ಒತ್ತಾಯ ಹಾಕುವುದು ಭಾರತದ ಸಾರ್ವಭೌಮ ಹಿತಗಳಿಗೆ ಮತ್ತು ಭದ್ರತಾ ಕಾಳಜಿಗಳಿಗೆ ಮಾರಕವಾಗುತ್ತದೆ.

ಆದ್ದರಿಂಧ ಬಿಜೆಪಿ ಸರಕಾರ ಭಾರತದ ಆರ್ಥಿಕ ಮತ್ತು ಭದ್ರತಾ ಕಾಳಜಿಗಳನ್ನು ಶಿಥಿಲಗೊಳಿಸುವ ಅಮೆರಿಕಾದ ಒತ್ತಡಗಳನ್ನ ಪ್ರತಿರೋಧಿಸಬೇಕು ಎಂದು ಕರೆ ನೀಡಿದೆ. ಭಾರತ, ಈ ಬಿಜೆಪಿ ಸರಕಾರದ ಅಡಿಯಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿಯ ಒಂದು ಅಡಿಯಾಳು ಮಿತ್ತನ ಸ್ಥಾನಕ್ಕೆ ಇಳಿಸಲ್ಪಟ್ಟಿದೆ. ಇದು ಭಾರತದ ಹಿತಗಳಿಗೆ ಮತ್ತು ಜಗತ್ತಿನಲ್ಲಿ ಅದರ ಸ್ವತಂತ್ರ ಉನ್ನತ ಸ್ಥಾನಕ್ಕೆ ವಿರುದ್ಧವಾಗಿರುವಂತದ್ದು ಎಂದು ಪೊಲಿಟ್ ಬ್ಯುರೊ ಹೇಳಿದೆ.

ಅಮೆರಿಕಾದ ಅಧ್ಯಕ್ಷ ಟ್ರಂಪ್‌ರವರ ಭೇಟಿಯ ವಿರುದ್ಧ ಪ್ರತಿಭಟನೆಗಳನ್ನು ಪ್ರಶಂಸಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ, ಬಿಜೆಪಿ ಸರಕಾರ ಜನಗಳ ಜನಗಳ ದನಿಗೆ ಕಿವಿಗೊಡಬೇಕು, ಅಮೆರಿಕಾದ ಒತ್ತಡಗಳಿಗೆ ಬಲಿಬೀಳಬಾರದು ಎಂದು ಹೇಳಿದೆ.



ತ್ರಿಪುರಾದ ಹಿರಿಯ ಕಮ್ಯುನಿಸ್ಟ್ ಮುಖಂಡ ಬಜುಬನ್ ರಿಯನ್ ನಿಧನ

ತ್ರಿಪುರಾದ ಹಿರಿಯ ಸಿಪಿಐ(ಎಂ) ಮುಖಂಡ ಹಾಗೂ ಮಾಜಿ ಕೇಂದ್ರ ಸಮಿತಿ ಸದಸ್ಯ ಬಜುಬನ್ ರಿಯನ್ ಫೆಬ್ರುವರಿ 21ರಂದು ಅಗರ್ತಲಾದಲ್ಲಿ ನಿಧನರಾಗಿದ್ದಾರೆ. ಅವರಿಗೆ 79 ವರ್ಷವಾಗಿತ್ತು.

ಅವರು 1973ರಲ್ಲಿ ಪಕ್ಷದ ತ್ರಿಪುರಾ ರಾಜ್ಯ ಸಮಿತಿಗೆ ಚುನಾಯಿತರಾಗಿದ್ದರು, 2002ರಲ್ಲಿ ರಾಜ್ಯ ಕಾರ್ಯದರ್ಶಿ ಮಂಡಳಿಗೆ ಚುನಾಯಿತರಾದರು. 2008ರಲ್ಲಿ 19ನೇ ಮಹಾಧಿವೇಶನದಲ್ಲಿ ಅವರು ಕೇಂದ್ರ ಸಮಿತಿಗೆ ಆಯ್ಕೆಗೊಂಡರು. 2018ರ ವರೆಗೆ ಅವರು ಕೇಂದ್ರ ಸಮಿತಿ ಸದಸ್ಯರಾಗಿ ಮುಂದುವರೆದರು.

ಬಜುಬನ್ ರಿಯನ್ ಒಬ್ಬ ಗಣ್ಯ ಸಂಸತ್ ಸದಸ್ಯರಾಗಿದ್ದರು. ತ್ರಿಪುರಾ ಪೂರ್ವ ಲೋಕಸಭಾ ಕ್ಷೇತ್ರದಿಂದ ಅವರು ಸತತ ಏಳು ಬಾರಿ ಆಯ್ಕೆಯಾದವರು. ಯುಪಿಎ-1 ಸರಕಾರದ ಅವಧಿಯಲ್ಲಿ ಅರಣ್ಯ ಹಕ್ಕುಗಳ ಕಾಯ್ದೆಯನ್ನು ರೂಪಿಸುವಲ್ಲಿ ಅವರು ಕೊಡುಗೆ ಗಮನಾರ್ಹ. ಇದು ಬುಡಕಟ್ಟು ಜನಗಳಿಗೆ ಅರಣ್ಯ ಭೂಮಿಯ ಹಕ್ಕು ನೀಡಿದ ಕಾಯ್ದೆ. ಇದಕ್ಕೆ ಮೊದಲು ಅವರು ಎರಡು ಬಾರಿ ತ್ರಿಪುರಾ ವಿಧಾನಸಭೆಗೆ ಆಯ್ಕೆಯಾಗಿದ್ದರು ಮತ್ತು ತ್ರಿಪುರಾ ಎಡರಂಗ ಸರಕಾರದಲ್ಲಿ ಕೃಷಿ ಮಂತ್ರಿಯಾಗಿ ಸೇವೆ ಸಲ್ಲಿಸಿದರು.

ಅವರು ಆದಿವಾಸಿ ಅಧಿಕಾರ್ ರಾಷ್ಟ್ರೀಯ ಸಮಿತಿಯ ಸ್ಥಾಪಕ ಮುಖಂಡರು ಮತ್ತು ಅಖಿಲ ಭಾರತ ಕಿಸಾನ್ ಸಭಾ ಹಾಗೂ ಗಣಮುಕ್ತಿ ಪರಿಷದ್‌ನ ಉನ್ನತ ಮುಖಂಡರಲ್ಲಿ ಒಬ್ಬರಾಗಿದ್ದರು.

ಅವರ ನಿಧನದಿಂದ ಪಕ್ಷ ಮತ್ತು ತ್ರಿಪುರಾದಲ್ಲಿ ಕಮ್ಯುನಿಸ್ಟ್ ಆಂದೋಲನಕ್ಕೆ ದೊಡ್ಡ ನಷ್ಟವಾಗಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಅವರ ಕುಟುಂಬದ ಸದಸ್ಯರಿಗೆ ಹಾರ್ದಿಕ ಸಂತಾಪಗಳನ್ನು ವ್ಯಕ್ತಪಡಿಸಿದೆ.

ಬೆಳೆ ವಿಮಾ ಯೋಜನೆಯಲ್ಲಿ ತೀವ್ರ ಬದಲಾವಣೆಗಳು ಸರಕಾರದ ಹೊಣೆಯಿಂದ ನುಣುಚಿಕೊಳ್ಳಲಿಕ್ಕಾಗಿ -ಎಐಕೆಎಸ್ ಖಂಡನೆ

ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನಾ (ಪಿಎಂಎಫ್‌ಬಿವೈ)ದಲ್ಲಿ ತೀವ್ರ ಬದಲಾವಣೆಗಳನ್ನು ಮಾಡಿದೆ. ಕೃಷಿ ಆದಾಯಗಳು ಫಲದಾಯಕ ವಾಗಿರದಿರುವ ಸಮಯದಲ್ಲಿ, ಬೆಳೆ ಮತ್ತು ಆದಾಯ ನಷ್ಟಗಳಾದಾಗ ಈ ಯೋಜನೆ ಒಂದು ಸುರಕ್ಷಿತತೆಯ ಭಾವನೆಯನ್ನು ಒದಗಿಸುತ್ತಿತ್ತು. ಈ ಸೌಲಭ್ಯ ಎಲ್ಲ ರೈತರಿಗೂ ಭೂಹೀನರು ಮತ್ತು ಗೇಣಿ ರೈತರಿಗೂ ಲಭ್ಯವಾಗುವಂತೆ ಮಾಡುವ ಬದಲು ಈ ಸರಕಾರ ಯೋಜನೆಯ ಈಗಿರುವ ಸೌಲಭ್ಯಗಳನ್ನು ಕೂಡ ಮೂಲೆಗುಂಪು ಮಾಡುತ್ತಿದೆ. ಈ ಯೋಜನೆ ರೈತರ ಖರ್ಚಿನಲ್ಲಿ ವಿಮಾ ಕಂಪನಿಗಳ ಲಾಭಕೋರತನಕ್ಕೆ ಅವಕಾಶ ಕೊಡುವ ಬದಲು ರೈತರಿಗೆ ಅನುಕೂಲವಾಗುವಂತೆ ಬದಲಾವಣೆಗಳನ್ನು ತರಬೇಕು ಎಂದು ರೈತಾಪಿಗಳ ಸಂಘಟನೆಗಳು ಆಗ್ರಹಿಸುತ್ತ ಬಂದಿವೆ. ಆದರೆ ಈಗ ಬಿಜೆಪಿ ಸರಕಾರ ಇದು ಕಡ್ಡಾಯವಾಗಿರುವದಿಲ್ಲ ಎಂದಿದೆ, ಸಾಲ ಪಡೆಯುವ ರೈತರು ಬ್ಯಾಂಕುಗಳಿಂದ ಬೆಳೆ ಸಾಲ ಪಡೆಯುವಾಗ ಈ ವಿಮಾ ಯೋಜನೆಗೆ ಸದಸ್ಯರಾಗಿರಬೇಕಿಲ್ಲ ಎಂದು ಹೇಳಿದೆ. ಇದು ಮೇಲ್ನೋಟಕ್ಕೆ ರೈತರಿಗೆ ಒಳ್ಳೆಯದು ಎಂದು ಅನಿಸಿದರೂ, ವಾಸ್ತವವಾಗಿ ಬಿಜೆಪಿ ಸರಕಾರ ರೈತರ ಬಗ್ಗೆ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳು ಮಾಡಿರುವ ಬದಲಾವಣೆಯಾಗಿದೆ ಎಂದು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಇದನ್ನು ಖಂಡಿಸಿದೆ.

ಪಿಎಂಎಫ್‌ಬಿಐ ಅಡಿಯಲ್ಲಿ ಕೇಂದ್ರ ಸರಕಾರದ ಸಬ್ಸಿಡಿಯನ್ನು ನೀರಾವರಿಯಿಲ್ಲದ ಪ್ರದೇಶ/ಬೆಳೆಗಳ ಪ್ರೀಮಿಯಂ ದರಗಳಿಗೆ 30ಶೇ.ವರೆಗೆ ಮತ್ತು ನೀರಾವರಿ ಇರುವ ಪ್ರದೇಶ/ಬೆಳೆಗಳಿಗೆ 25ಶೇ.ಕ್ಕೆ ಸೀಮಿತಗೊಳಿಸಲು ಕೇಂದ್ರ ಸಂಪುಟ ನಿರ್ಧರಿಸಿದೆ. ಹಾಗೆಯೇ 2020ರ ಮುಂಗಾರಿನಿಂದ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನಾ ಮತ್ತು ಪುನರ್‌ರಚಿತ ಹವಾಮಾನ ಆಧಾರಿತ ಬೆಳೆ ವಿಮಾಯೋಜನೆ(ಆರ್‌ಡಬ್ಲ್ಯುಬಿಸಿಐಎಸ್) ಅಡಿಯಲ್ಲಿ ರೈತರು ಬೇಕೆನಿಸಿದರೆ ಮಾತ್ರವೇ ನೋಂದಾಯಿಸಿಕೊಳ್ಳಬಹುದು ಎಂದೂ ಸಂಪುಟ ನಿರ್ಧರಿಸಿದೆಯಂತೆ. ಅಂದರೆ ಪ್ರೀಮಿಯಂ ದರಗಳು 30ಶೇ/25ಶೇ.ಕ್ಕಿಂತ ಹೆಚ್ಚಿದ್ದರೆ, ಕೇಂದ್ರ ಸರಕಾರ ಯಾವುದೇ ಸಬ್ಸಿಡಿಯನ್ನು ಕೊಡುವ ಹೊಣೆಯನ್ನು ವಹಿಸುವುದಿಲ್ಲ. ಸಂಪೂರ್ಣವಾಗಿ ರಾಜ್ಯಸರಕಾರಗಳೇ ಈ ಹೊಣೆ ಹೊರಬೇಕು. ಈಗಾಗಲೇ ಹಲವು ರಾಜ್ಯಸರಕಾರಗಳಿಗೆ ತಮ್ಮ ಪಾಲಿನ ಪ್ರೀಮಿಯಂ ಕೊಡಲು ಕೂಡ ಆಗದಿರುವ ಸನ್ನಿವೇಶ ಉಂಟಾಗಿರುವಾಗ ಈ ನಿರ್ಧಾರ ಮಾಡಲಾಗಿದೆ.

ಈಗ ರೈತರು ಮುಂಗಾರಿನ ಎಲ್ಲ ಆಹಾರಧಾನ್ಯಗಳು ಮತ್ತು ಎಣ್ಣೆಬೀಜಗಳಿಗೆ ಒಟ್ಟು ವಿಮಾ ಮೊತ್ತದ 2ಶೇ. ದಷ್ಟು, ಹಿಂಗಾರಿನಲ್ಲಿ 1.5ಶೇ.ದಷ್ಟು ಪ್ರೀಮಿಯಂಗಳನ್ನು ತೆರಬೇಕಾಗಿದೆ. ಎಲ್ಲ ತೋಟಗಾರಿಕಾ ಬೆಳೆಗಳಿಗೆ ಇದು 5ಶೇ. ಒಟ್ಟು ಪ್ರೀಮಿಯಂ ದರದ ಉಳಿದ ಭಾಗವನ್ನು ಕೇಂದ್ರ ಮತ್ತು ರಾಜ್ಯ ಸರಕಾರಗಳು ಸಮ-ಸಮವಾಗಿ ತೆರಬೇಕು. ಇದನ್ನು ಸಾಮಾನ್ಯ ಪ್ರೀಮಿಯಂ ಸಬ್ಸಿಡಿ ದರ ಎನ್ನಲಾಗುತ್ತದೆ. ಈ ಪ್ರೀಮಿಯಂ ದರ ಗುಜರಾತಿನ ರಾಜಕೋಟ್‌ನಲ್ಲಿ ಮುಂಗಾರಿನ ನೆಲಗಡಲೆಗೆ 49ಶೇ. ಮತ್ತು ತಮಿಳುನಾಡಿದ ರಾಮನಾಥಪುರಂನಲ್ಲಿ ಹಿಂಗಾರು ಭತ್ತಕ್ಕೆ 42ಶೇ. ತಲುಪಿದೆ ಎಂದು ವರದಿಯಾಗಿದೆ. ಇಂತಹ ಸಂದರ್ಭಗಳಲ್ಲಿ ಇನ್ನು ಮುಂದೆ ಕೇಂದ್ರ ಸರಕಾರದ ಸಬ್ಸಿಡಿ ಇರುವುದಿಲ್ಲ.

ಇದು 2016ರಲ್ಲಿ ಫಸಲ್ ಬಿಮಾ ಯೋಜನೆಯನ್ನು ಆರಂಭಿಸಿದಾಗ ಹೇಳಿದ್ದಕ್ಕೆ ತದ್ವಿರುದ್ಧವಾಗಿದೆ ಎಂದು ಎಐಕೆಎಸ್ ಹೇಳಿದೆ. ಬಾಕಿ ಪ್ರೀಮಿಯಂ 90ಶೇ. ವಾದರೂ ಸರಕಾರ ಅದನ್ನು ತೆರುತ್ತದೆ ಎಂದು ಆಗ ಹೇಳಲಾಗಿತ್ತು. ಈಗಿನ ಪ್ರಕಟಣೆಯ ಪ್ರಕಾರ ಮೋದಿ ಸರಕಾರ ಪ್ರೀಮಿಯಂ ದರ 30ಶೇ.ಕ್ಕಿಂತ ಹೆಚ್ಚಿದ್ದಲ್ಲಿ ಶೂನ್ಯ ಸಬ್ಸಿಡಿಯತ್ತ ಸಾಗುತ್ತಿದೆ ಎಂದು ತೋರಿಸುತ್ತದೆ. ಭಾರೀ ಹೆಚ್ಚು ಪ್ರೀಮಿಯಂ ದರ ಇರುವ ಪ್ರದೇಶ/ಬೆಳೆಗಳಿಗೆ ಪರ್ಯಾಯ ರಿಸ್ಕ್ ಶಮನ ಕಾರ್ಯಕ್ರಮವನ್ನು ಸಂಬಂಧಪಟ್ಟ ಭಾಗೀದಾರರು ಮತ್ತು ಏಜೆನ್ಸಿಗಳೊಂದಿಗೆ ಸಮಾಲೋಚಿಸಿ ನಿರ್ದಿಷ್ಟ ರಾಜ್ಯಗಳಿಗೆ ಸಂಬಂಧಪಟ್ಟಂತೆ ತಯಾರಿಸಲಾಗುವುದು ಅಥವ ರೂಪಿಸಲಾಗುವುದು ಎಂದು ಮೋದಿ ಸರಕಾರದ ಫೆಬ್ರುವರಿ 19ರ ಪ್ರಕಟಣೆ ಹೇಳಿದೆ. ಇದರಿಂದ ಈಗ ವಿಮಾ ರಕ್ಷಣೆ ಲಭ್ಯವಿದ್ದ ರೈತರ ಒಂದು ದೊಡ್ಡ ವಿಭಾಗಕ್ಕೆ ಈ ರಕ್ಷಣೆ ಇಲ್ಲವಾಗುತ್ತದೆ, ಹವಾಮಾನ ಬದಲಾವಣೆ ಮತ್ತು ಕಠಿಣ ಹವಾಮಾನ ಪರಿಸ್ಥಿತಿಗಳಿಂದಾಗಿ ಹೆಚ್ಚೆಚ್ಚು ಬೆಳೆ ನಷ್ಟವಾಗುತ್ತಿರುವಾಗ ಇಂತಹ ಕ್ರಮವನ್ನು ಒಪ್ಪಲು ಸಾಧ್ಯವಿಲ್ಲ ಎಂದು ಎಐಕೆಎಸ್ ಹೇಳಿದೆ.

ಕೇಂದ್ರ ಸರಕಾರ ಈ ನಿರ್ಧಾರವನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು, ಫಸಲ್ ಬಿಮಾ ಯೋಜನೆಯನ್ನು ಭೂಹೀನ ಗೇಣಿ ರೈತರಿಗೂ ಲಭ್ಯಗೊಳಿಸಿ ಇದನ್ನು ನಿಜಕ್ಕೂ ಸಾರ್ವತ್ರಿಕಗೊಳಿಸಬೇಕು, ಕೇಂದ್ರ ಸರಕಾರ ಹೆಚ್ಚಿನ ಪ್ರೀಮಿಯಂ ಭಾಗವನ್ನು ಹೊರಬೇಕು ಎಂದೂ, ಕೆಲವು ಕಾರ್ಪೊರೇಟ್ ಕಂಪನಿಗಳ ಲಾಭಕೋರತನಕ್ಕೆ ಅವಕಾಶ ಕೊಡದೆ, ಸಾರ್ವಜನಿಕ ವಲಯದ ವಿಮಾ ಕಂಪನಿಗಳು, ಸಹಕಾರಿಗಳ ಮೂಲಕ ಈ ಸೇವೆಯನ್ನು ಒದಗಿಸಬೇಕು ಎಂದೂ ಎಐಕೆಎಸ್ ಆಗ್ರಹಿಸಿದೆ.

ಸಂಪಾದಕೀಯ

ಯಾವುದು ದೇಶದ್ರೋಹ

ಸ್ವದೇಶದ ಹಿತಕ್ಕೆ ವಿರುದ್ಧವಾಗಿ ಮಾತನಾಡುವುದಾಗಲಿ, ಚಟುವಟಿಕೆಗಳನ್ನು ನಡೆಸುವುದಾಗಲಿ, ಅದು ದೇಶದ್ರೋಹ. ಇದು ಸಹ ತಾತ್ಕಾಲಿಕ. ಎಲ್ಲಿಯ ವರೆಗೆ ದೇಶಗಳು ಇರುತ್ತವೆಯೋ, ಎಲ್ಲಿಯ ವರೆಗೆ ದೇಶಗಳ ಗಡಿಗಳು ಇರುತ್ತವೆಯೋ ಅಲ್ಲಿಯ ವರೆಗೆ ಸ್ವದೇಶಗಳು ಇರುತ್ತವೆ, ಸ್ವದೇಶಹಿತ ಇರುತ್ತದೆ. ಆದರೆ ದೇಶ ದೇಶಗಳ ನಡುವಿನ ಗಡಿಗಳು ಮಾಯವಾಗಿ, ವಿಶ್ವವೇ ಒಂದು ದೇಶ, ವಿಶ್ವವೇ ಒಂದು ಕುಟುಂಬ, ವಿಶ್ವವೇ ಒಂದು ಮನೆ ಎಂದಾದರೆ ಆಗ ಸ್ವದೇಶ ವಿದೇಶ ಎಂಬ ವೈತ್ಯಾಸ ಇರಲಾರದು. ಅದುವೇ ವಿಶ್ವ ಮಾನವರ ಆಶಯ. ಅದುವೇ ಪೃಥ್ವಿಯ ಮೇಲಿನ ಸ್ವರ್ಗ !

ಆದರೆ, ಕೆಲವು ಶಕ್ತಿಗಳು ವಿಶ್ವವನ್ನು ಸ್ವರ್ಗವಾಗಿಸುವ ಬದಲು ಅದನ್ನು ನರಕ ಮಾಡಲು ಶ್ರಮಿಸುತ್ತಿದ್ದಾರೆ. ಅವರು ಗಡಿಗಳನ್ನು ಉಳಿಸಬಯಸುತ್ತಾರೆ. ಗೋಡೆಗಳನ್ನು ಕಟ್ಟಬಯಸುತ್ತಾರೆ. ಇದು ನಮ್ಮ ದೇಶ, ಅದು ಪರರ ದೇಶ. ನಮ್ಮ ದೇಶ ಉಳಿಯಲಿ, ಬೆಳೆಯಲಿ. ಅವರ ದೇಶ ಹಾಳಾಗಲಿ, ನಾಶವಾಗಲಿ ಎಂಬ ದ್ವೇಷದ ಕಿಚ್ಚನ್ನು ಹಚ್ಚುತ್ತಾರೆ. ಮತ್ತು ಆ ಕಿಚ್ಚು ಅವರನ್ನು ಸುಟ್ಟುಹಾಕುವುದನ್ನು ಕಂಡು ವಿಕೃತ ತೃಪ್ತಿ ಪಡೆಯಲು ಕಲಿಸಿ ಕೊಡುತ್ತಾರೆ.

"ಪಾಕಿಸ್ತಾನ ಜಿಂದಾಬಾದ್" ಎಂದಾಕ್ಷಣ ಅದು ಹೇಗೆ ದೇಶದ್ರೋಹವಾಗುತ್ತದೆ? ಒಬ್ಬ ಕ್ರಿಕೆಟ್ ಅಭಿಮಾನಿ, ಪಾಕಿಸ್ತಾನ ತಂಡ ಚೆನ್ನಾಗಿ ಆಟ ಆಡಿ ದಾಖಲೆ ನಿರ್ಮಿಸಿದಾಗ "ಪಾಕಿಸ್ತಾನ ಜಿಂದಾಬಾದ್" ಎಂದು ಪಾಕಿಸ್ತಾನ ತಂಡಕ್ಕೆ ಶುಭಕೋರಿದರೆ ತಪ್ಪೇನು? ಕಳಪೆ ಆಟ ಆಡಿದ ಭಾರತದ ತಂಡವನ್ನು ಅದು ನಮ್ಮ ದೇಶದ ತಂಡ ಎಂಬ ಕಾರಣಕ್ಕಾಗಿ ಹೊಗಳಬೇಕೆ? ಭಾರತದ ತಂಡ ಉತ್ತಮ ಸಾಧನೆ ಮಾಡಿ ಜಯಗಳಿಸಿದಾಗ ನಮ್ಮ ತಂಡವನ್ನು ಹೊಗಳುವಂತೆ ಪಾಕಿಸ್ತಾನ ತಂಡ ಗೆದ್ದಾಗಲೂ ಅದನ್ನು ಅಭಿನಂಧಿಸುವುದು ಆಟ ಪಂದ್ಯಾಟಗಳಲ್ಲಿ ಇರಬೇಕಾದ ಸ್ವರ್ಧಾ ಮನೋಭಾವ.

ಯಾವುದಾದರೊಂದು ದೇಶ ಬಾಹ್ಯಾಕಾಶದಲ್ಲಿ ಏನಾದರೂ ಒಂದು ಸಾಧನೆಯನ್ನು ಗೈದಾಗ ನಾವು ಆ ದೇಶದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುವುದು ತಪ್ಪಲ್ಲ. ಆದರೆ ನಮ್ಮ ದೇಶದ ಹಿತಕ್ಕೆ ವಿರುದ್ಧವಾಗಿ ಪ್ರಜ್ಞಾಪೂರ್ವಕವಾಗಿ ಮಾತನಾಡುವುದು, ಆಥವ ದೇಶದ ಹಿತಕ್ಕೆ ವಿರುದ್ಧವಾಗಿ ನಡೆದುಕೊಂಡು ದೇಶಕ್ಕೆ ಅಂದರೆ ದೇಶ ವಾಸಿಗಳಿಗೆ ಕೇಡನ್ನು ಉಂಟು ಮಾಡುವುದು ದೇಶದ್ರೋಹವಾಗುತ್ತದೆ.

ಗಡಿಗಳು ಇರುವ ತನಕ ಗಡಿ ವಿವಾದಗಳು ಇರುತ್ತವೆ. ಗಡಿ ರಕ್ಷಣೆಗಾಗಿ ಯೋಧರನ್ನು ನೇಮಿಸಬೇಕಾಗುತ್ತದೆ. ಗಡಿ ರಕ್ಷಣಾ ಕಾರ್ಯದಲ್ಲಿ ತೊಡಗಿದ ಯೋಧರು ದೇಶ ರಕ್ಷಣೆಗಾಗಿ ಪ್ರಾಣ ಬಲಿದಾನ ಮಾಡಬೇಕಾಗುತ್ತದೆ. ಇದು ಅತಿ ಶ್ರೇಷ್ಠವಾದ ದೇಶಪ್ರೇಮ. ಭಾರತದ ಪರ ಗಡಿಕಾಯುವ ಯೋಧನು ದೇಶ ಪ್ರೇಮಿ ಆಗಿರುತ್ತಾನೆ. ಪಾಕಿಸ್ತಾನದ ಪರ ಗಡಿಕಾಯುವ ಯೋಧನೂ ದೇಶಪ್ರೇಮಿ ಆಗಿರುತ್ತಾನೆ. ಆದರೆ ಭಾರತದ ಗಡಿಯೊಳಗೆ ಪಾಕಿಸ್ತಾನದ ಯೋಧರನ್ನು ನುಸುಳಿಕೊಂಡು ಬರಲು ಸಹಾಯ ಮಾಡುವ ಭಾರತದ ಯೋಧನು ದೇಶದ್ರೋಹಿ ಆಗಿರುತ್ತಾನೆ. ಹಾಗೆಯೇ ಭಾರತದ ಯೋಧರನ್ನು ಪಾಕಿಸ್ತಾನದ ಗಡಿಯೊಳಗೆ ನುಸುಳಿಕೊಂಡು ಬರಲು ನೆರವು ನೀಡುವ ಪಾಕಿಸ್ತಾನದ ಯೋಧನು ದೇಶ ದ್ರೋಹಿ ಆಗುತ್ತಾನೆ. ದೇಶ ದ್ರೋಹದ ಮಾನದಂಡ ಭಾರತದವನಿಗೂ ಪಾಕಿಸ್ತಾನದವನಿಗೂ ಒಂದೇ ಆಗಿರುತ್ತದೆ.

ಒಬ್ಬ ಭಾರತದ ಪ್ರಜೆ, ತನ್ನ ದೇಶದ ರಕ್ಷಣಾ ಮಾಹಿತಿಗಳನ್ನು ಬೇರೊಂದು ದೇಶಕ್ಕೆ ಕೊಡುವುದು ದೇಶದ್ರೋಹ. ಅವನಿಗೆ ಶಿಕ್ಷೆಯಾಗಬೇಕು. ಅದರಂತೆಯೆ ಒಬ್ಬ ಪಾಕಿಸ್ತಾನಿ ಪ್ರಜೆ, ತನ್ನ ದೇಶದ ರಕ್ಷಣಾ ವ್ಯವಸ್ಥೆಯ ಮಾಹಿತಿಗಳನ್ನು ಭಾರತಕ್ಕೆ ಕೊಟ್ಟರೆ ಅದು ದೇಶಪ್ರೇಮವಾಗುದಿಲ್ಲ. ಅದೂ ಸಹ ದೇಶ ದ್ರೋಹವಾಗಿರುತ್ತದೆ. ಅಂತಹ ದೇಶದ್ರೋಹಿಗೆ ಶಿಕ್ಷೆಯಾಗಬೇಕು. ಸ್ವಾತಂತ್ರ್ಯಕ್ಕಾಗಿ ಆಜಾದಿಗಾಗಿ ಕೂಗೆಬ್ಬಿಸುವುದು ದೇಶದ್ರೋಹವಲ್ಲ. ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯ ದೊರಕಿರುವುದು ನಿಜ. ಆದೆರ ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಧ್ವನಿ ಎತ್ತುವುದು, ಹೋರಾಟ ಮಾಡುವುದು ದೇಶದ್ರೋಹವಾಗದು. ಸಂಪೂರ್ಣ ಸ್ವಾತಂತ್ರ್ಯದ ಗುರಿ ಮುಟ್ಟುವ ವರೆಗೂ ದೇಶದ ಪೌರರಿಗೆ ಹೋರಾಡುವ ಹಕ್ಕು ಇರಲೇ ಬೇಕು. ಈ ಹಕ್ಕನ್ನು ನಿರಾಕರಿಸುವ ದೇಶ ಅದೊಂದು ಸರ್ವಾಧಿಕಾರಿ ಪ್ರಭುತ್ವ. ಅಂತಹ ಸರ್ವಾಧಿಕಾರಿ ಪ್ರಭುತ್ವದ ವಿರುದ್ಧವೂ ಹೋರಾಡಬೇಕಾಗುತ್ತದೆ.

ದಾರಿದ್ರ್ಯ ರಹಿತ ಭಾರತ, ನಿರುದ್ಯೋಗರಹಿತ ಭಾರತ, ಹಸಿವುರಹಿತ ಭಾರತ, ಜಾತಿ ದಮನರಹಿತ ಭಾರತ, ಮತಧರ್ಮ ತಾರತಮ್ಯರಹಿತ ಭಾರತ, ವರ್ಗ ಶೋಷಣೆ ರಹಿತ ಭಾರತಕ್ಕಾಗಿ ಧ್ವನಿ ಎತ್ತುವುದು, ಹೋರಾಟ ಮಾಡುವುದು ದೇಶಪ್ರೇಮ. ಈ ಅನಿಷ್ಟಗಳಿಂದ ಬಿಡುಗಡೆ ಬಯಸುವುದು ದೇಶಪ್ರೇಮ. ಎಲ್ಲ ಪೌರರ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಹಿತಸಾಧನೆಯನ್ನು ಬಯಸುವುದು ಪವಿತ್ರವಾದ ದೇಶಪ್ರೇಮ.

ಒಂದು ದೇಶದ ಪೌರರಿಗೆ ತಮ್ಮ ದೇಶದ ಆಡಳಿತ ವ್ಯಸ್ಥೆಯನ್ನು, ಆಡಳಿತ ನಡೆಸುವವರ ಕಾರ್ಯ ವೈಖರಿಯನ್ನು ಟೀಕಿಸುವ, ಖಂಡಿಸುವ, ಪರ್ಯಾಯ ನೀತಿಗಳಿಗಾಗಿ ಒತ್ತಾಯಿಸುವ ಹಕ್ಕಿದೆ. ಅದು ಅವರಿಗೆ ದೇಶದ ಸಂವಿಧಾನ ನೀಡಿದ ಹಕ್ಕು. ಇಂತಹ ಹಕ್ಕನ್ನು ನಿರಾಕರಿಸುವುದೆಂದರೆ ಪ್ರಜಾಪ್ರಭುತ್ವದ ಕತ್ತು ಹಿಸುಕಿದಂತೆ. ಅಂತಹ ಪ್ರವೃತ್ತಿಯ ವಿರುದ್ಧ ಹೋರಾಡುವುದು ಸಹಜವಾಗಿಯೇ ದೇಶಪ್ರೇಮದ ಕೆಲಸ.

ನಾಟಕಗಳಲ್ಲಿ, ಚಲನಚಿತ್ರಗಳಲ್ಲಿ ರಾಜಕೀಯ ವ್ಯಕ್ತಿಗಳನ್ನು, ಅಧಿಕಾರ ನಡೆಸುತ್ತಿರುವವವರನ್ನು ಖಂಡಿಸುವ, ಟೀಕಿಸುವ, ಬೈಯುವ, ಹಲ್ಲೆ ಮಾಡುವ ಪ್ರಸಂಗಗಳು ಬರಬಹುದು. ಪ್ರಧಾನ ಮಂತ್ರಿ ಸ್ಥಾನದಲ್ಲಿ ಇರುವವನನ್ನು ಅಥವ ಮುಖ್ಯ ಮಂತ್ರಿ ಪಾತ್ರ ಮಾಡುತ್ತಿರುವವನ್ನು ಚಪ್ಪಲಿಯಿಂದ ಹಲ್ಲೆ ಮಾಡಬಹುದು. ನಾಟಕದ ಪಾತ್ರದಲ್ಲಿ ಆಡಿದ ಮಾತನ್ನು, ಎಸಗಿದ ಕೃತ್ಯವನ್ನು ಅಪರಾಧ ಎಂದು ಪರಿಗಣಿಸಲು ಸಾಧ್ಯವಿಲ್ಲ. ನಾಟಕ ನಾಟಕವೇ. ಅದು ವಾಸ್ತವಲ್ಲ. ಆ ಪಾತ್ರಧಾರಿ ಆ ಪ್ರಸಂಗವನ್ನು ಏಷ್ಟು ನೈಜತೆಯಿಂದ ಅಭಿನಯಿಸಿದ ಎನ್ನುವುದೇ ಮುಖ್ಯ, ದೇಶದ ಪ್ರಧಾನಿಯನ್ನು ಅಷ್ಟು ಕೆಟ್ಟದಾಗಿ ಪ್ರತಿಬಿಂಬಿಸಿದರಲ್ಲಾ ಎಂದು ದೋಷಾರೋಪಣೆ ಮಾಡುವುದಲ್ಲ. ಅಂತಹ ಒಂದು ಕ್ಲಿಷ್ಟ ಸನ್ನಿವೇಶವನ್ನು ಎಷ್ಟು ನೈಜತೆಯಿಂದ ಮಾಡಿತೋರಿಸಿದರಲ್ಲಾ ಎಂದು ಆ ಕಲಾವಿದನ ಅಭಿನಯನಕ್ಕೆ ಮೆಚ್ಚುಗೆ ವ್ಯಕ್ತಪಡಿಸಬೇಕು.

'ಫ್ರೀ ಕಾಶ್ಮಿರ್' (ಕಾಶ್ಮಿರವನ್ನು ಬಿಡುಗಡೆಗೊಳಿಸಿರಿ) ಎಂದು ಒಬ್ಬ ವಿದ್ಯಾರ್ಥಿನಿ ಫಲಕವನ್ನು ಹಿಡಿದದ್ದು ದೇಶದ್ರೋಹ ಆಗಲಿಕ್ಕಿಲ್ಲ. ಸಂವಿಧಾನದ 370 ನೇ ಕಲಂ ರದ್ದುಗೊಳಿಸಿದ ನಂತರ ಜಮ್ಮ ಕಾಶ್ಮೀರ ಪ್ರದೇಶ ಬಹುತೇಕ ಬಹಿರಂಗ ಜೈಲು ಆಗಿದೆ ಎಂಬ ವರದಿಗಳಿವೆ. ಅಲ್ಲಿನ ಪ್ರಮುಖ ರಾಜಕೀಯ ಪಕ್ಷಗಳ ಮುಖಂಡರು ಒಂದೇ ಗೃಹ ಬಂಧನದಲ್ಲಿ ಅಥವ ಜೈಲಿನಲ್ಲಿ ಇದ್ದಾರೆ. ಅಲ್ಲಿನ ಜನತೆಗೂ ಸ್ವತಂತ್ರವಾಗಿ ಒಡಾಡುವ, ಸ್ವತಂತ್ರವಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸುವ ಸ್ವಾತಂತ್ರ್ಯವಿಲ್ಲ. ಕಾಶ್ಮೀರವನ್ನು ಮುಕ್ತಗೊಳಿಸಿರಿ ಎಂಬ ಮಾತಿನಲ್ಲಿ ಆ ಕಾಳಜಿ ಇದ್ದಿರಬಹುದು. ಕಾಶ್ಮೀರವನ್ನು ಬಿಡುಗಡೆ ಮಾಡಿ ಪಾಕಿಸ್ತಾನಕ್ಕೆ ಸೇರಿಸಿರಿ ಎಂದೇನು ಅವಳು ಹೇಳಿರಲಿಲ್ಲ.

ಇನ್ನೊಬ್ಬ ವಿದ್ಯಾರ್ಥಿನಿ "ಪಾಕಿಸ್ತಾನ ಜಿಂದಾಬಾದ್" ಎಂದು ಕೂಗಿದ್ದಾಳೆ ಎಂಬ ಕಾರಣಕ್ಕಾಗಿ ದೇಶ ದ್ರೋಹದ ಆರೋಪಕ್ಕೆ ಒಳಗಾಗಿದ್ದಾಳೆ. ಅವಳು ಅಷ್ಟೇ ಹೇಳಿದಳೋ, ಅಥವ ಇನ್ನೇನು ಹೇಳುವದರಲ್ಲಿದ್ದಳೋ, ತಿಳಿಯದು. ಅವಳ ಹೇಳಿಕೆಯ ಸಂದರ್ಭವೂ ಮುಖ್ಯವಾಗುತ್ತದೆ. ಪಾಕಿಸ್ತಾನ ಜಿಂದಾಬಾದ್ ನಂತರ ಹಿಂದುಸ್ತಾನ್ ಜಿಂದಾಬಾದ್ ಎಂದು ಅವಳು ಹೇಳಲು ಉದ್ದೇಶಿಸಿದ್ದರೆ, ಮತ್ತು ಹಾಗೇ ತನ್ನ ಮಾತುಗಳಿಗೆ ಅಗತ್ಯ ವಿವರಣೆ ನೀಡಲು ಅವಳಿಗೆ ಅವಕಾಶ ನಿರಾಕರಿಸಲಾಗಿದ್ದರೆ, ಅವಳ ವಿರುದ್ಧ ಕ್ರಮ ಜರಗಿಸಲು ಅವಸರ ಪಟ್ಟುದ್ದು ಯೋಗ್ಯವಾಗದು. ಆವೇಶದ ಭರದಲ್ಲಿ ಹೇಳಿರಬಹುದಾದ ಮಾತು ಶಿಕ್ಷಾರ್ಹ ಅಪರಾಧವಾಗದು.

ಒಬ್ಬ ವ್ಯಕ್ತಿಯ ವಿರುದ್ಧ ದೇಶದ್ರೋಹದ ಆರೋಪ ಹೊರಿಸಿ ಎಫ್ಐಆರ್ ದಾಖಲು ಮಾಡಿದ ಮಾತ್ರಕ್ಕೆ ಆ ವ್ಯಕ್ತಿ ದೇಶದ್ರೋಹಿ ಆಗುವುದಿಲ್ಲ. ನ್ಯಾಯಾಲಯದ ವಿಚಾರಣೆ ಹಾಗೂ ತೀರ್ಪಿನ ಬಳಿಕವೇ ಆತನ ಬಗ್ಗೆ ತೀರ್ಮಾನಕ್ಕೆ ಬರಬಹುದು. ಆತನಿಗೆ ತನ್ನ ವಿರುದ್ಧ ಮಾಡಲಾದ ಆರೋಪವನ್ನು ಸತ್ಯಕ್ಕೆ ದೂರುವಾದದ್ದು ಎಂದು ಸಾಬೀತು ಪಡಿಸುವ ಹಕ್ಕಿದೆ. ವಕೀಲರು ಸಹ ಆತನ ಪರವಾಗಿ ನ್ಯಾಯಾಲಯದಲ್ಲಿ ವಾದಿಸುವ ಹಕ್ಕನ್ನು ಹೊಂದಿರುತ್ತಾರೆ. ಒಬ್ಬ ಕೊಲೆಗಾರನಿಗೆ ವಕಾಲತು ಒದಗಿಸುವ ವಕೀಲರು ಪಾಕಿಸ್ತಾನ ಪರ ಘೋಷಣೆ ಕೂಗಿದ್ದಾರೆ ಎಂಬ ಆರೋಪ ಹೊತ್ತಿರುವ ಕಾಶ್ಮೀರದ ವಿದ್ಯಾರ್ಥಿಗಳಿಗೆ ವಕಾಲತು ನಿರಾಕರಿಸುವುದು ಯಾವ ನ್ಯಾಯ?

ಹಾಗಾದರೆ ದೇಶದ್ರೋಹಿ ಅಂದರೆ ಯಾರು? ದೇಶಕ್ಕೆ ದ್ರೋಹ ಬಗೆಯುವ ದೇಶ ವಾಸಿ! ದೇಶದ ಐಕ್ಯತೆಗೆ, ಸಮಗ್ರತೆಗೆ ಧಕ್ಕೆ ತರುವವನು ದೇಶದ್ರೋಹಿ. ದೇಶದಲ್ಲಿ ಕೋಮು ಸಾಮರಸ್ಯಕ್ಕೆ ಬೆದರಿಕೆವೊಡ್ಡುವವನು ದೇಶದ್ರೋಹಿ. ದೇಶದ ಸಂಪತ್ತನ್ನು ಲೂಟಿ ಮಾಡುವವನು ದೇಶದ್ರೋಹಿ. ಸರ್ಕಾರದ ಹಣವನ್ನು ಕಬಳಿಸುವ ರಾಜಕಾರಣಿ ದೇಶದ್ರೋಹಿ. ತನ್ನ ಸ್ವಂತ ಅಕ್ಕತಂಗಿಯಂತಿರುವ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ಮಾಡಲು ಹೇಸದವನು ದೇಶದ್ರೋಹಿ. ದೇಶದಲ್ಲಿ ಜಾತಿ ಪದ್ಧತಿ, ಅಸ್ಪ್ರಶ್ಯತೆ ಪ್ರತಿಪಾದಿಸುವವನು ದೇಶದ್ರೋಹಿ. ಒಟ್ಟಾರೆಯಾಗಿ ನಮ್ಮ ದೇಶದ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ನಡೆಯುವವನು ದೇಶದ್ರೋಹಿ. ನಮ್ಮ ದೇಶದ ಸಮಸ್ತ ನಾಗರಿಕರ, ಅವರ ಜಾತಿ, ಧರ್ಮ, ಬಣ್ಣ, ಭಾಷೆಗಳನ್ನು ಪರಿಗಣಿಸದೆ, ಎಲ್ಲರ ಹಿತವನ್ನು ಬಯಸುವವನು ದೇಶ ಪ್ರೇಮಿ! ನಿಜವಾದ ದೇಶ ಪ್ರೇಮಿ! ದೇಶದ ಕಾರ್ಮಿಕರಿಗಾಗಿ, ರೈತರಿಗಾಗಿ, ಶೋಷಿತರಿಗಾಗಿ, ದಮನಿತರಿಗಾಗಿ ಸ್ವಾರ್ಥವಿಲ್ಲದೆ ಹೋರಾಡುವವನು ದೇಶಪ್ರೇಮಿ! ನಿಜವಾದ ದೇಶ ಪ್ರೇಮಿ! ದೇಶದ ಕಾರ್ಮಿಕರ, ರೈತರ, ಶೋಷಿತರ, ದಮನಿತರ ಬಿಡುಗಡೆಗಾಗಿ ಸ್ವಾರ್ಥವಿಲ್ಲದೆ ಹೋರಾಡುವವನು ನಿಜವಾದ ದೇಶಪ್ರೇಮಿ. ಪಾಕಿಸ್ತಾನವಾಗಲಿ, ಬಾಂಗ್ಲಾದೇಶವಾಗಲಿ, ಶ್ರೀಲಂಕಾವಾಗಲಿ, ಚೀನಾ, ಜಪಾನ್, ರಶಿಯಾ ಅಮೇರಿಕಾ ಆಸ್ಟ್ರೇಲಿಯಾ, ಇಂಗ್ಲೆಂಡ್, ಜರ್ಮನಿ, ಫ್ರಾನ್ಸ್, ಇಟಲಿ, ಹಾಗೂ ಅರಬ್ ದೇಶಗಳು, ಆಫ್ರಿಕಾದ ದೇಶಗಳು, ಲ್ಯಾಟಿನ್ ಅಮೇರಿಕದ ದೇಶಗಳು, ಕ್ಯೂಬಾ, ಉತ್ತರ ಕೊರಿಯಾ, ವಿಯೆಟ್ನಾಮ್ ಮೊದಲಾದ ಸಮಾಜವಾದಿ ದೇಶಗಳ ಜನ ನಾವೆಲ್ಲರೂ ಒಂದೇ. ನಮ್ಮ ನಡುವೆ ಒಡಕನ್ನು ಉಂಟುಮಾಡುವವರೇ ನಮ್ಮ ಶತ್ರುಗಳು. ನೆರೆಹೊರೆಯ ದೇಶಗಳೊಂದಿಗೆ ನಮಗೆ ಇರುವ ಗಡಿ ವಿವಾದಗಳನ್ನು ಮತ್ತು ಇತರ ವ್ಯಾಪಾರ ವಾಣಿಜ್ಯದ ವಿವಾದಗಳನ್ನು ಚರ್ಚೆ, ಪರಸ್ಪರ ಮಾತುಕತೆಯಿಂದ ಬಗೆಹರಿಸಿಕೊಳ್ಳೋಣ.

ಜನರ ನೆಮ್ಮದಿಯ ಬದುಕು ಕಸಿಯುವ ಜೂಜು ಕೇಂದ್ರ ಆರಂಭಿಸುವ ನಿರ್ಧಾರದಿಂದ ಕರ್ನಾಟಕ ಸರಕಾರ ಹಿಂದೆ ಸರಿಯಬೇಕು

ಹಾವೇರಿ: ವಿದೇಶಿ ಪ್ರವಾಸಿಗರನ್ನು ಸೆಳೆಯುವ ನಿಟ್ಟಿನಲ್ಲಿ ಶ್ರೀಲಂಕಾ ಮತ್ತಿತರ ದೇಶ/ರಾಜ್ಯಗಳ ಮಾದರಿಯಲ್ಲಿ ಕರ್ನಾಟಕದಲ್ಲಿ ಜೂಜು ಕೇಂದ್ರ ಆರಂಭಿಸಲು ಮುಂದಾಗಿರುವುದಾಗಿ ಪತ್ರಿಕೆಗಳಲ್ಲಿ ವರದಿಯಾಗಿದೆ. ರಾಜ್ಯ ಸರಕಾರ ಈ ಆಲೋಚನೆ ಮಾಡಿದ್ದರೆ ಕಂಡಿತ ಅದು ನಮ್ಮ ಜನರ ಬಾಳನ್ನು ಹಾಳು ಮಾಡುವುದರಲ್ಲಿ ಸಂಶಯವಿಲ್ಲ ಹಾಗಾಗಿ ಕೂಡಲೆ ಇಂತಹ ಮನೆಹಾಳು ನಿರ್ಧಾರದಿಂದ ಕರ್ನಾಟಕ ಸರಕಾರ ಹಿಂದೆ ಸರಿಯಬೇಕೆಂದು ಡಿವೈಎಫ್ಐ ರಾಜ್ಯ ಕಾರ್ಯದರ್ಶಿ ಬಸವರಾಜ ಪೂಜಾರ ರಾಜ್ಯ ಸರಕಾರವನ್ನ ಒತ್ತಾಯಿಸಿದ್ದಾರೆ. ಮದ್ಯಪಾನವನ್ನು ಸರಕಾರ ಕೊನೆಗಾಣಿಸುವ ಬದಲು ಹೆಚ್ಚಿನ ಆದಾಯದ ನೆಪದಲ್ಲಿ ವ್ಯಾಪಕಗೊಳಿಸರುವ ಪರಿಣಾಮ ಜನರ ಪರಿಸ್ಥಿತಿ ಏನಾಗುತ್ತಿದೆಂಬುದರ ಅರಿವಿನಿಂದಾದರೂ ಈ ಜೂಜು ಕೇಂದ್ರ ತೆರೆಯುವ ನಿರ್ಧಾರ ಬದಲಾಯಿಸಬೇಕಿದೆ.

ರಾಜ್ಯದಲ್ಲಿರುವ ಪ್ರತಿಯೋರ್ವರಿಗೂ ಶಿಕ್ಷಣ, ಉದ್ಯೋಗ, ಅನ್ನ, ವಸತಿ, ಘನತೆ ಬದುಕು ಖಾತ್ರಿ ಇಲ್ಲ. ಪ್ರಜೆಗಳಿಗೆ ಈ ಕನಿಷ್ಠ ಸೌಲಭ್ಯಗಳನ್ನು ಒದಗಿಸಲು ನಮ್ಮ ರಾಜ್ಯ ಸರಕಾರಕ್ಕೆ ಸಾಧ್ಯವಾಗುತ್ತಿಲ್ಲ. ಆದರೆ ವಿದೇಶಿಯರಿಗಾಗಿ ಜೂಜು ಕೇಂದ್ರ ತೆರೆಯಲು ಹೊರಟ ಪ್ರವಾಸೋದ್ಯಮ ಇಲಾಖೆ ಸಚಿವ ಸಿ.ಟಿ ರವಿಯವರ ಮನಸ್ಥಿತಿ ದಿವಾಳಿ ಕೋರತನದ್ದಲ್ಲವೇ?

ಪ್ರವಾಸೋದ್ಯಮವನ್ನು ಉತ್ತೇಜಿಸಲಿಕ್ಕೆ ಜೂಜು ಕೇಂದ್ರ ಆರಂಭಿಸುವುದೊಂದೆ ಪರಿಹಾರವಲ್ಲ. ದೇಶಿ, ಕಲೆ, ಸಂಸ್ಕೃತಿ, ಐತಿಹಾಸಿಕ, ಪ್ರಾಕೃತಿಕ, ಸಾಂಸ್ಕೃತಿಕವಾಗಿ ಬಹಳ ಶ್ರೀಮಂತವಾಗಿರುವ ನಮ್ಮ ರಾಜ್ಯವನ್ನು ಪ್ರವಾಸಿಗರಿಗೆ ಪರಿಚಯಿಸಲು ಸರಕಾರ ಬೇರೆ ವಿಧಾನಗಳಲ್ಲಿ ಆಲೋಚಿಸಬೇಕಿದೆಯೇ ವಿನಃ ಜನರನ್ನು ದಾರಿ ತಪ್ಪಿಸಿ ಜೂಜಾಡಲು ಪ್ರಚೋದಿಸುವುದಲ್ಲ ಎಂದರು. ಸರಕಾರವೇ ಮುಂದೆ ನಿಂತು ಜನರನ್ನು ಜೂಜು ಆಡುವ ಮೂಲಕ ಅವರ ಬದುಕನ್ನು ಹಾಳು ಮಾಡುವುದಾಗಿದ್ದು ಪ್ರಜ್ಞಾವಂತರೆಲ್ಲ ಈ ಕುರಿತು ಪ್ರತಿರೋಧದ ಧ್ವನಿ ಎತ್ತಬೇಕಿದೆ ಎಂದು ಡಿವೈಎಫ್ಐ ಕರೆ ನೀಡಿದೆ.

ಸರಕಾರ ತನ್ನ ಈ ನಿರ್ಧಾರದಿಂದ ಹಿಂದೆ ಸರಿಯಬೇಕು. ಪ್ರವಾಸೋದ್ಯದಿಂದ ನಮ್ಮ ರಾಜ್ಯಕ್ಕೆ ಮುಖ್ಯವಾಗಿ ಇಲ್ಲಿ ಯಜನರ ಬದುಕು ಹಸನಾಗುವತ್ತ ಚಿತ್ತ ಹರಿಸಬೇಕು. ಆ ನಿಟ್ಟಿನಲ್ಲಿ ಪರಿಣತರ ಅಭಿಪ್ರಾಯ, ಸಲಹೆ ಪಡೆಯಬೇಕು ಎಂದು ಆಗ್ರಹಿಸಿದ್ದಾರೆ.

ಬಸವರಾಜ ಪೂಜಾರ



ಹಾಸನದಲ್ಲಿ ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪ್ರತಿಕೃತಿ ದಹನ

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಫೆಬ್ರವರಿ 24ರಂದು ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ಆಹ್ವಾನದ ಮೇರೆಗೆ ಬಾರತಕ್ಕೆ ಬೇಟಿ ನೀಡುತ್ತಿದ್ದಾರೆ. ಇದಕ್ಕಾಗಿ ಗುಜರಾತಿನ ಸ್ಲಂಗಳು ಕಾಣದಂತೆ ಅಡ್ಡಲಾಗಿ ಗೋಡೆ ನಿರ್ಮಿಸಿ ಅದ್ದೂರು ಸ್ವಾಗತ ಮತ್ತು 'ನಮಸ್ತೆ ಟ್ರಂಪ್' ಎಂಬ ಬೃಹತ್ ಕಾರ್ಯಕ್ರಮಕ್ಕೆ ಮೋದಿ ಸರ್ಕಾರ ಸಜ್ಜಾಗಿದೆ. ಸಾಮ್ರಾಜ್ಯಶಾಹಿ, ಯುದ್ಧೋನ್ಮಾದಿ ಹಾಗೂ ಜನಾಂಗವಾದಿ ಡೊನಾಲ್ಡ್ ಟ್ರಂಪ್ ಬೇಟಿಯನ್ನು ಹಾಸನ ಜಿಲ್ಲೆಯ ಜನಪರ ಮತ್ತು ಪ್ರಜಾಸತ್ತಾತ್ಮಕ ಸಂಗಟನೆಗಳು ಒಟ್ಟಾಗಿ ವಿರೋಧಿಸುತ್ತವೆ.

ಇದೇ ಸಂದರ್ಭದಲ್ಲಿ ಮೋದಿ ಸರ್ಕಾರ ಹೈನುಗಾರಿಕೆ ಮತ್ತು ಕುಕ್ಕುಟೋಧ್ಯಮದ ಮುಕ್ತ ವ್ಯಾಪಾರಕ್ಕೆ ಅಮೇರಿಕಾದೊಂದಿಗೆ ಒಪ್ಪಂದಗಳಿಗೆ ಸಹಿ ಹಾಕುವುದನ್ನು ನಾವು ವಿರೋಧಿಸುತ್ತೇವೆ. ಈ ಒಪ್ಪಂದ ಜಾರಿಯಾದರೆ ಭಾರತಕ್ಕೆ ವಾರ್ಷಿಕ ಅಂದಾಜು 42,000 ಕೋಟಿ ರೂಪಾಯಿಗಳ ಹೈನು ಉತ್ಪನ್ನಗಳು, ಕೋಳಿ ಉತ್ಪನ್ನಗಳು, ಟರ್ಕಿ ಮತ್ತಿತರ ಕೃಷಿ ಉತ್ಪನ್ನಗಳ ವಸ್ತುಗಳು ಆಮದಾಗುತ್ತವೆ. ಸುಮಾರು ನೂರು ಮಿಲಿಯನ್ ಹೈನುಗಾರಿಕಾ ರೈತರು, ಅದರಲ್ಲೂ ಮಹಿಳೆಯರು ಮತ್ತು ಬಡ ರೈತರು ಸರ್ಕಾರದ ಈ ನಡೆಯಿಂದ ತೊಂದರೆಗೆ ಒಳಗಾಗುತ್ತಾರೆ. ಹೈನುಗಾರಿಕೆ ಮತ್ತು ಕುಕ್ಕಟ ಉದ್ಯಮದಲ್ಲಿ ತೊಡಗಿರುವ ಕಾರ್ಮಿಕರು ಕೂಡ ತಮ್ಮ ಜೀವನೋಪಾಯದಿಂದ ವಂಚಿತರಾಗುತ್ತಾರೆ. ಸೇಬು, ಚೆರ್ರಿ, ಬಾದಾಮಿ, ಸೋಯಾಬಿನ್, ಗೋಧಿ, ಜೋಳ ಮೊದಲಾದ ಹಣ್ಣು ಕಾಳುಗಳ ಮೇಲಿನ ಆಮದು ತೆರಿಗೆಯನ್ನು ಶೇಕಡ ನೂರರಿಂದ ಶೇಕಡ ಹತ್ತಕ್ಕಿಂತ ಕೆಳಕ್ಕೆ ಇಳಿಸಿದರೆ ನಮ್ಮ ದೇಶದ ರೈತರ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತದೆ. ಭಾರತದ ರೈತರ ಪ್ರತಿಭಟನೆಗಳಿಗೆ ಮಣಿದು ಆರ್‌ಸಿಇಪಿ ಒಪ್ಪಂದಕ್ಕೆ ನಾವು ಸಹಿ ಹಾಕಿಲ್ಲ ಎಂದು ಹೇಳಿಕೊಂಡ ಬಿಜೆಪಿ ಸರ್ಕಾರ ಈಗ ಈ ಹೊಸ ಒಪ್ಪಂದದ ಮೂಲಕ ಆರ್‌ಸಿಇಪಿ ಗಿಂತ ಆಘಾತಕಾರಿ ಪರಿಣಾಮವನ್ನು ಉಂಟುಮಾಡುತ್ತದೆ.

ಭಾರತದಲ್ಲಿ ಹೈನುಗಾರಿಕೆಯು ಸುಮಾರು ಹತ್ತು ಕೋಟಿ ರೈತಾಪಿ ಕುಟುಂಬಗಳಿಗೆ ಜೀವನೋಪಾಯವಾಗಿದೆ. ಅನೇಕ ವರ್ಷಗಳಿಂದ, ಸಹಕಾರಿ ಜಾಲದ ಮೂಲಕ ಕಟ್ಟಿ ಬೆಳೆಸಿದ ಹೈನುಗಾರಿಕೆ ಉದ್ಯಮದಲ್ಲಿ ಹಾಲಿನ ಬೆಲೆಯ ಶೇಕಡ 71 ರಷ್ಟು ಹಣ ರೈತಾಪಿ ಕುಟುಂಬಗಳಿಗೆ ವಾಪಸ್ಸಾಗುತ್ತಿತ್ತು. ಆದರೆ ಈಗ ಅಮೆರಿಕದ ಬೇಡಿಕೆಯಂತೆ ಹೈನುಗಾರಿಕೆ ಉತ್ಪನ್ನಗಳ ಆಮದಿನ ಮೇಲಿನ ಶೇಕಡ 64 ರ ತೆರಿಗೆಯನ್ನು ಕಡಿತಗೊಳಿಸಿದರೆ ಭಾರತದ ಹಾಲಿನ ಆಂತರಿಕ ಮಾರುಕಟ್ಟೆ ತೀವ್ರವಾಗಿ ನೆಲ ಕಚ್ಚುತ್ತದೆ. ಭಾರತದಲ್ಲಿ ಕುಕ್ಕುಟೋದ್ಯಮವು ಸುಮಾರು 48 ದಶಲಕ್ಷ ಜನರ ಜೀವನೋಪಾಯವಾಗಿದೆ. ಈ ವಲಯದ ಸಂಘಟಿತ ಮತ್ತು ಅಸಂಘಟಿತ ರೂಪದ ಆದಾಯ ಸುಮಾರು 80,000 ಕೋಟಿ ರೂಪಾಯಿ. ಈಗ ಅಮೆರಿಕಾದಿಂದ ಕಡಿಮೆ ದರದ ಕುಕ್ಕುಟ ಉತ್ಪನ್ನಗಳು ಭಾರತವನ್ನು ಪ್ರವೇಶಿಸುವುದು ಎಂದರೆ ಭಾರತದ ಆಂತರಿಕ ಕುಕ್ಕುಟ ಮಾರುಕಟ್ಟೆಗೆ ಮರಣ ಶಾಸನ ಬರೆದಂತೆಯೇ ಸರಿ. ಈ ಮೂಲಕ ಮಿಲಿಯಾಂತರ ಸಣ್ಣ ಮತ್ತು ಮಧ್ಯಮ ರೈತರು ಹಾಗೂ ವ್ಯಾಪಾರಿಗಳು, ಕಾರ್ಮಿಕರು ತೊಂದರೆಗೆ ಒಳಗಾಗುತ್ತಾರೆ. ಅಮೆರಿಕದ ತೀವ್ರ ಒತ್ತಡಕ್ಕೆ ಒಳಗಾಗಿ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕುವುದರಿಂದ ಕೃಷಿ ಚಟುವಟಿಕೆಯಲ್ಲಿ ತೊಡಗಿರುವ ಶೇಕಡ 85 ರಷ್ಟು ಸಣ್ಣ ಮತ್ತು ಮಧ್ಯಮ ವರ್ಗದ ರೈತರು ಹಾಗೂ ಕೃಷಿ ಕೂಲಿಕಾರರು ಸಂಕಷ್ಟಕ್ಕೆ ಒಳಗಾಗುತ್ತಾರೆ.

ಚುನಾವಣಾ ವರ್ಷದಲ್ಲಿ ಇರುವ ಟ್ರಂಪ್ ಅವರು ಅಮೆರಿಕದಲ್ಲಿ ಕೃಷಿಯನ್ನು ಉತ್ತೇಜಿಸುವ ಸಲುವಾಗಿ ಕೃಷಿ ಉತ್ಪನ್ನಗಳ ರಫ್ತಿಗೆ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದಾರೆ. ಅವರ ಈ ಯೋಜನೆಗೆ ಭಾರತದ ಮಾರುಕಟ್ಟೆಯನ್ನು ತೆರೆಯುವ ಮೂಲಕ ನರೇಂದ್ರ ಮೋದಿಯವರು ಸಹಕರಿಸುತ್ತಿದ್ದಾರೆ. ಇದು ಅಮೆರಿಕದ ಅತಿ ಹೆಚ್ಚಿನ ಪ್ರಮಾಣದ ಸಬ್ಸಿಡಿ ದರದೊಂದಿಗೆ ಸ್ಪರ್ಧಿಸಲಾಗದೆ ಭಾರತದ ರೈತರನ್ನು ಸಮಸ್ಯೆಗೆ ದೂಡುತ್ತದೆ. ಜಾಗತಿಕ ಹಣಕಾಸು ಪರಿಸ್ಥಿತಿ ಕುಸಿಯುತ್ತಿರುವ ಈ ಸಮಯದಲ್ಲಿ ಭಾರತದಲ್ಲಿ ಈ ಒಪ್ಪಂದ ಜಾರಿಯಾಗುತ್ತಿದೆ. ಬಿಜೆಪಿ ಸರ್ಕಾರದ ಈ ನಡೆಯನ್ನು ಹಿಂತೆಗೆಯುವಂತೆ ಹಾಗೂ ಡೊನಾಲ್ಡ್ ಟ್ರಂಪ್ ಬೇಡಿಯನ್ನು ವಿರೋಧಿಸಿ ರೈತರು, ಕಾರ್ಮಿಕರು ಮತ್ತು ಸಾರ್ವಜನಿಕರು ದೇಶಾದ್ಯಂತ ಭೂತ ದಹನ, ಪ್ರತಿಭಟನಾ ಪ್ರದರ್ಶನಗಳು ಮತ್ತು ಸಾರ್ವಜನಿಕ ಸಭೆಗಳನ್ನು ನಡೆಸುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ಹಾಸನದಲ್ಲಿ ಕೆ.ಪಿ.ಆರ್.ಎಸ್. ಸಿಐಟಿಯು, ಡಿವೈಎಫ್‌ಐ, ಎಸ್‌ಎಫ್‌ಐ ಮತ್ತಿತರೆ ಜನಪರ ಸಂಘಟನೆಗಳ ನೇತೃತ್ವದಲ್ಲಿ ಹಾಸನದ ಹೇಮಾವತಿ ಪ್ರತಿಮೆ ಎದುರು 'ಟ್ರಂಪ್ ವಾಪಸ್ ಹೋಗು' ಎಂದು ಪ್ರತಿಭಟನೆ ನಡೆಸಿ ಮೋದಿ ಮತ್ತು ಟ್ರಂಪ್ ಪ್ರತಿಕೃತಿ ದಹಿಸುವ ಮುಖಾಂತರ ಟ್ರಂಪ್ ಭಾರತ ಬೇಟಿಗೆ ಪ್ರತಿರೋಧ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ರೈತ, ಕಾರ್ಮಿಕ, ವಿದ್ಯಾರ್ಥಿ, ಯುವಜನ, ದಲಿತ ಮತ್ತು ಪ್ರಜಾಸತ್ತಾತ್ಮಕ ಅಲ್ಪಸಂಖ್ಯಾತ ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು.

ಕೇಂದ್ರದ ಜನವಿರೋಧಿ ನೀತಿಗೆ ಆಕ್ರೋಶ ಬೆಲೆ ಏರಿಕೆ, ಕಾರ್ಮಿಕ ವಿರೋಧಿ ನೀತಿ–ಸಿಪಿಐ(ಎಂ) ಪ್ರತಿಭಟನೆ

ಕೇಂದ್ರದ ಬಿಜೆಪಿ ಸರ್ಕಾರ ಜನ ವಿರೋಧಿ ನೀತಿಯಿಂದ ಜನ ಸಾಮಾನ್ಯರ ಬದುಕು ಬಿಕ್ಕಟ್ಟಿಗೆ ಸಿಲುಕಿದೆ. ಈಗ ಜನರಿಗೆ ಸರಿಯಾದ ಉದ್ಯೋಗ ಇಲ್ಲದೆ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಬೆಲೆ ಏರಿಕೆಯಿಂದ ವ್ಯಾಪಾರಸ್ಥರಿಗೆ ವ್ಯಾಪಾರ ಕೂಡಾ ಕಡಿಮೆಯಾಗಿದೆ ಎಂದು ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯ ಸುನಿಲ್ ಕುಮಾರ್ ಬಜಾಲ್ ಹೇಳಿದರು.

ತೊಕ್ಕೊಟ್ಟು ಬಸ್ ನಿಲ್ದಾಣದ ಬಳಿ ಬುಧವಾರ ಸಿಪಿಐ(ಎಂ) ವತಿಯಿಂದ ಕೇಂದ್ರ ಸರಕಾರದ ಜನವಿರೋಧಿ ನೀತಿ ವಿರೋಧಿಸಿ ನಡೆದ ಪ್ರತಿಭಟನಾ ಸಭೆಯಲ್ಲಿ ಅವರು ಮಾತನಾಡಿದರು.

ಕಾರ್ಮಿಕರಿಗೆ ಸರಕಾರ ದಿನಕ್ಕೆ ರೂ.178 ಕನಿಷ್ಟ ಕೂಲಿ ನಿಗದಿ ಮಾಡಿದೆ. ಆದರೆ ಈ ಕನಿಷ್ಟ ಕೂಲಿಯಿಂದ ಕಾರ್ಮಿಕರಿಗೆ ಜೀವನ ಸಾಗಿಸಲು ಸಾಧ್ಯವಿಲ್ಲ. ಆ ಮಟ್ಟಕ್ಕೆ ಸರಕಾರ ಬೆಲೆ ಏರಿಕೆ ಮಾಡಿದೆ ಎಂದು ದೂರಿದರು. ಸಿಪಿಐ(ಎಂ) ಉಳ್ಳಾಲ ವಲಯ ಕಾರ್ಯದರ್ಶಿ ಕೃಷ್ಣಪ್ಪ ಸಾಲ್ಯಾನ್ ಮಾತನಾಡಿ, ಸರ್ಕಾರದ ಯೋಜನೆ ಜನಪರವಾಗಿಲ್ಲ. ಇದರಿಂದ ಜನರ ಬದುಕು ಕಷ್ಟ ಪರಿಸ್ಥಿಯಲ್ಲಿದೆ. ಇದಕ್ಕೆ ಎಲ್ಲರೂ ಹೋರಾಟ ಮಾಡಬೇಕಾದ ಅಗತ್ಯವಿದೆ ಎಂದು ಆರೋಪಿಸಿದರು.

ಜಿಲ್ಲಾ ಸಮಿತಿ ಸದಸ್ಯ ಯು.ಜಯಂತ ನಾಯಕ್, ಪದ್ಮಾವತಿ ಶೆಟ್ಟಿ, ವಲಯ ಸದಸ್ಯರಾದ ವಿಲಾಸಿನಿ, ಸುಂದರ ಕುಂಪಲ, ಬಾಬು ಪಿಲಾರ್, ಮಹಾಬಲ ದೆಪ್ಪೆಲಿಮಾರ್, ಡಿವೈಎಫ್‌ಐ ಉಳ್ಳಾಲ ವಲಯ ಅಧ್ಯಕ್ಷ ಅಶ್ರಫ್ ಉಪಸ್ಥಿತರಿದ್ದರು. ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯೆ ಪದ್ಮಾವತಿ ಶೆಟ್ಟಿ ಸ್ವಾಗತಿಸಿದರು.

ವರದಿ: ವಾ.ಉ.

ಸಂವಿಧಾನ ಸಂರಕ್ಷಣೆ ಮತ್ತು ಉದ್ಯೋಗಕ್ಕಾಗಿ ಅಭಿಯಾನ

26 ಫೆಬ್ರುವರಿ 2020 ರಂದು ಕಲಬುರ್ಗಿ ಜಿಲ್ಲೆ ಆಳಂದ ತಾಲ್ಲೂಕಿನ ದೇಗಾಂವ ಗ್ರಾಮದಲ್ಲಿ ಸಂವಿಧಾನ ಸಂರಕ್ಷಣೆಗಾಗಿ ಮತ್ತು ಉದ್ಯೋಗಕ್ಕಾಗಿ ಅಭಿಯಾನವನ್ನು ನಡೆಸಲಾಯಿತು. ಗ್ರಾಮದ ಜನತೆಗೆ ಉದ್ಯೋಗ ಚೀಟಿಗಳನ್ನು ವಿತರಣೆ ಮಾಡುವ ಜತೆಯಲ್ಲಿ ಮನರೇಗಾದ ಕುರಿತು ಸವಿಸ್ತಾರ ಮಾಹಿತಿ ಕೊಡಲಾಯಿತು. ಉದ್ಯೋಗ ಖಾತ್ರಿಯು ಗ್ರಾಮೀಣ ಪ್ರದೇಶದಲ್ಲಿ ಹದಿನೆಂಟು ವರ್ಷ ವಯಸ್ಸು ಮೇಲ್ಪಟ್ಟ ಎಲ್ಲರಿಗೂ ಕನಿಷ್ಠ ನೂರು ದಿನಗಳ ಕೆಲಸ ಒದಗಿಸುವ ಕಾಯ್ದೆಯಾಗಿದೆ. ಹೊಲದ ಕೆಲಸಗಳು ಮುಗಿದು ರೈತರು ಮತ್ತು ಕೃಷಿ ಕೂಲಿಕಾರ್ಮಿಕರು ಈಗ ಮನರೇಗಾ ಉದ್ಯೋಗದ ಆಕಾಂಕ್ಷಿಯಾಗಿದ್ದು ಗ್ರಾಮ ಪಂಚಾಯತ ಸಿಬ್ಬಂದಿಗಳು ಎಲ್ಲರಿಗೂ ಕೆಲಸ ಒದಗಿಸಬೇಕೆಂದು ಕೆ. ನೀಲಾ ಆಗ್ರಹಿಸಿದರು. ಮಾರ್ಚ್ 31 ರವರೆಗೆ ನೂರು ದಿನಗಳು ಲಭ್ಯವಿದ್ದು ಎಪ್ರಿಲ್ ಒಂದರಿಂದ ಹೊಸ ವರ್ಷದ ನೂರು ದಿನಗಳ ಆರಂಭವಾಗುವುದು. ಉದ್ಯೋಗ ಖಾತ್ರಿ ಕೆಲಸಕ್ಕೆ ಈ ಬಾರಿಯೂ ಅತ್ಯಂತ ಕಡಿಮೆ ಬಜೆಟ್ ಇಡಲಾಗಿದೆ. ಕಳೆದ ವರ್ಷಕ್ಕಿಂತಲೂ ಈ ಬಾರಿ ರೂ.9500 ಕೋಟಿ ರೂಪಾಯಿಗಳಷ್ಟು ಕಡಿಮೆ ಹಣವನ್ನು ಕೊಡಲಾಗಿದೆ. ಇದರಿಂದ ಕೂಲಿ ಪಾವತಿಯಲ್ಲಿ ಸಮಸ್ಯೆಯಾಗುವುದು. ಈಗ ದೇಶದಲ್ಲಿ ಉದ್ಯೋಗದ ಖಾತ್ರಿಗಾಗಿ ಇರುವ ಏಕೈಕ ಕಾಯ್ದೆಯು ಮನರೇಗಾ ಆಗಿದೆ. ಮನರೇಗಾದಿಂದ ಅಂತರ್ಜಲಮಟ್ಟ ಹೆಚ್ಚಳವಾಗುವುದಲ್ಲದೆ ಕೃಷಿ ಅಭಿವೃದ್ಧಿಯಾಗುವುದು. ಜನರ ಕೈಗೆ ಕೆಲಸ ಸಿಕ್ಕು ಕುಟುಂಬವು ಆರ್ಥಿಕವಾಗಿ ಬಲಗೊಳ್ಳುವುದು. ಆದ್ದರಿಂದ ಮನರೇಗಾದ ಕತ್ತು ಹಿಸುಕದೆ ಇದನ್ನು ಬಲಪಡಿಸಬೇಕಾದ ಸರಕಾರದ್ದಾಗಿದೆ ಎಂದು ಹೇಳಿದರು. ಇದೇ ಹೊತ್ತಿನಲ್ಲಿ ಉದ್ಯೋಗ ಚೀಟಿಗಳನ್ನು ಫಲಾನುಭವಿಗಳಿಗೆ ವಿತರಣೆ ಮಾಡಲಾಯಿತು.

ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ನಂದಾದೇವಿ ಮಂಗೊಂಡಿ ಇವರು ಮಾತನಾಡಿ 'ಈ ಬಾರಿ ಆಳಂದ ತಾಲ್ಲೂಕಿನ ಪ್ರತಿ ಗ್ರಾಮದಲ್ಲಿ ಉದ್ಯೋಗ ಖಾತ್ರಿ ಕಾಯ್ದೆಯನ್ನು ತಲುಪಿಸುವಲ್ಲಿ ಸಂಘಟನೆಯು ಶ್ರಮಿಸುವುದು. ನಿರುದ್ಯೋಗ ಹೆಚ್ಚಾಗುತ್ತಿರುವ ಈ ಹೊತ್ತಿನಲ್ಲಿ ಮನರೇಗಾ ಉದ್ಯೋಗ ಒದಗಿಸುವ ಕಾಯ್ದೆಯಾಗಿದೆ. ಇದರ ಪ್ರಯೋಜನ ಎಲ್ಲರೂ ಪಡೆಯಬೇಕು. ಗ್ರಾಮ ಪಂಚಾಯತ್ ಸಿಬ್ಬಂದಿಗಳು ಜನರಿಗೆ ಮನರೇಗಾ ಕುರಿತು ಸಮಗ್ರ ತಿಳುವಳಿಕೆ ಕೊಡುವಲ್ಲಿ ಮುಂದಾಗಬೇಕು. ಮತ್ತು ಎನ್ನೆಮ್ಮಾರ್ ತಯಾರು ಮಾಡಿ ಕೂಲಿ ಪಾವತಿಯಾಗುವವರೆಗೂ ಕಾರ್ಯ ಪ್ರವೃತ್ರವಾಗಬೇಕು ಎಂದು ಹೇಳಿದರು.

ಅತಿಥಿಗಳಾಗಿ ಆಗಮಿಸಿದ ಶೆಹನಾಜ್ ಅಖ್ತರ್ ಇವರು ಮಾತನಾಡಿ 'ಗ್ರಾಮೀಣ ಪ್ರದೇಶದಲ್ಲಿ ಮನರೇಗಾ ಬಹಳ ಮುಖ್ಯವಾದ ಕಾಯ್ದೆಯಾಗಿದೆ. ಕೃಷಿಯು ಕುಂಠಿತವಾಗುತ್ತಿರುವಾಗ ರೈತರಿಗೆ ಕೃಷಿ ಕೂಲಿಕಾರ್ಮಿಕರಿಗೆ ಆರ್ಥಿಕ ನೆರವು ಬೇಕಿದೆ. ಮನರೇಗಾ ಅಂತಹ ನೆರವು ಕೊಡುವುದು. ಮಹಿಳಾ ಸಂಘಟನೆಯು ಈ ದಿಕ್ಕಿನಲ್ಲಿ ನಿರಂತರ ಶ್ರಮಿಸುತ್ತಿರುವದು ಶ್ಲಾಘನೀಯವಾದದ್ದು' ಎಂದು ಹೇಳಿದರು.

ಸಭೆಯಲ್ಲಿ ಹಾಳ ತಡಕಲ್ ಗ್ರಾಮ ಪಂಚಾಯತನ ಕಾರ್ಯದರ್ಶಿ ಹಾಜರಿದ್ದು ಉದ್ಯೋಗ ಚೀಟಿ ವಿತರಣೆ ಮಾಡಿದರು. ಮತ್ತು ಕೂಡಲೇ ಎಲ್ಲರಿಗೂ ಕೆಲಸ ಒದಗಿಸುವ ಭರವಸೆ ನೀಡಿದರು.

ಸಭೆಯಲ್ಲಿ ಸುದೇವಿ, ಸಂಗಮ್ಮ ಮತ್ತಿತರರು ಹಾಜರಿದ್ದರು. ಪ್ರಣಯ್ ಸಭೆಯ ನಿರ್ವಹಣೆ ಮಾಡಿದರು. ವಿಜಯಲಕ್ಷ್ಮಿ ಆರಂಭದಲ್ಲಿ ಜಾಗೃತ ಗೀತೆ ಹಾಡಿದರು.

ಗ್ರಾ.ಪಂ. ನೌಕರರ ಬೇಡಿಕೆಗಳ ಈಡೇರಿಕೆಗೆ ಹಾಸನ ಜಿಲ್ಲಾ ಪಂಚಾಯತ್ ಮುಂದೆ ಧರಣಿ

ರಾಜ್ಯ 6024 ಗ್ರಾಮ ಪಂಚಾಯತಿಗಳಲ್ಲಿ ಸುಮಾರು 65 ಸಾವಿರ ನೌಕರರು ಕೆಲಸ ಮಾಡುತ್ತಿದ್ದಾರೆ. ಗ್ರಾಮ ಪಂಚಾಯತಿಗಳಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಸರ್ಕಾರವೇ ನೇರವಾಗಿ ಇ.ಎಫ್. ಎಂ.ಎಸ್. ಮುಖಾಂತರ ವೇತನ ಪಾವತಿಸುತ್ತಿದೆ. ಆದರೆ ನೌಕರರ ವೇತನಕ್ಕೆ ವಾರ್ಷಿಕ 900 ಕೋಟಿ ಹಣ ಬೇಕಾಗಿದ್ದು ಸರ್ಕಾರ ಇದುವರೆಗೂ 518 ಕೋಟಿ ಹಣ ಮಾತ್ರ ನೀಡಿದೆ. ಇದರಿಂದಾಗಿ ಗ್ರಾಮ ಪಂಚಾಯತಿಗಳ ನೌಕರರಿಗೆ 8–10 ತಿಂಗಳ ವೇತನ ಬಾಕಿ ಉಳಿದಿದೆ. ಅಲ್ಲದೆ ಪ್ರತೀ ತಿಂಗಳು ಸರಿಯಾಗಿ ವೇತನ ಪಾವತಿಯಾಗದೆ ಗ್ರಾ.ಪಂ. ನೌಕರರ ಅತ್ಯಂತ ಸಂಕಷ್ಟದಲ್ಲಿದ್ದಾರೆ. 14ನೇ ಹಣಕಾಸು ಆಯೋಗದ ಹಣದಲ್ಲಿ ಶೇ.10ರಷ್ಟು ನೌಕರರ ವೇತನಕ್ಕೆ ಬಳಕೆ ಮಾಡುವಂತೆ ಸರ್ಕಾರದ ಆದೇಶವಿದ್ದರೂ ಗ್ರಾ.ಪಂ.ಗಳು ಅದನ್ನು ಜಾರಿ ಮಾಡುತ್ತಿಲ್ಲ. ಶಾಸನಬದ್ಧ ಅನುದಾನ, ತೆರಿಗೆ ಸಂಗ್ರಹ ಮತ್ತು 14ನೇ ಹಣಕಾಸು ಆಯೋಗದ ಅನುದಾನ ಬಳಕೆ ಮಾಡುವ ಮುಖಾಂತರ ನೌಕರರಿಗೆ ಪ್ರತೀ ತಿಂಗಳು ಕನಿಷ್ಟ ವೇತನ ಪಾವತಿಸಲು ಅವಕಾಶವಿದ್ದರೂ ಸಹ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ನೌಕರರು ವೇತನ ಸಿಗದೆ ಪರದಾಡುವಂತಾಗಿದೆ. ಕೆಲವು ಗ್ರಾ.ಪಂ.ಗಳಲ್ಲಿ ನೌಕರರಿಗೆ ಸರ್ಕಾರದ ಆದೇಶದಂತೆ ಕನಿಷ್ಟ ವೇತನವನ್ನೇ ಪಾವತಿಸುತ್ತಿಲ್ಲ.

ದೇವದಾಸಿ ಮಹಿಳೆಯರ ಹಕ್ಕೊತ್ತಾಯಗಳನ್ನು ಬಜೆಟ್‌ನಲ್ಲಿ ಸೇರಿಸಲು ಆಗ್ರಹ



ಫೆಬ್ರವರಿ 28, 2020 ರಂದು ರೈಲ್ವೆ ನಿಲ್ದಾಣದಿಂದ ಫ್ರೀಡಂ ಪಾರ್ಕ್ ವರೆಗೆ ರ‍್ಯಾಲಿ ಮಾಡಿ ಪ್ರತಿಭಟನೆಯನ್ನು ನಡೆಸಲಾಯಿತು. ದೌರ್ಜನ್ಯದ ದೇವದಾಸಿ ಪದ್ಧತಿಗೆ ದೇವದಾಸಿ ಮತ್ತು ದಲಿತರ ಹಾಗೂ ಇತರೇ ಹಿಂದುಳಿದ ಜನ ಸಮುದಾಯಗಳ ಕುಟುಂಬಗಳೇ ಕಾರಣವೆಂಬ ಕಣ್ಣೋಟದಿಂದ ಸರಕಾರಗಳು ಹೊರ ಬರಬೇಕು ಮತ್ತು ಅದು ಶತ ಶತಮಾನಗಳಿಂದ ಮೇಲ್ಜಾತಿಗಳ ಮೇಲ್ವರ್ಗಗಳು ದೇಶದಾದ್ಯಂತ ನಡೆಸುತ್ತಿರುವ ಸಾಮಾಜಿಕ ದೌರ್ಜನ್ಯವೆಂಬುದನ್ನು ಪರಿಗಣಿಸಬೇಕು, ಈ ದೌರ್ಜನ್ಯದ ಹಿಂದೆ ಈ ಕುಟುಂಬಗಳು ಸಾವಿರಾರು ವರ್ಷಗಳಿಂದ ಮೇಲ್ಜಾತಿಗಳ ಮತ್ತು ಮೇಲ್ವರ್ಗಗಳ ಮೇಲೆಯೆ ಅವಲಂಭಿಸಿ, ಪರಾವಲಂಬಿಯಾಗಿ ಬದುಕುವಂತಹ ದಯನಿಯ ಸ್ಥಿತಿಯನ್ನು ಹೇರಿದ ಭಾಗವಾಗಿ ಮತ್ತು ಬಹುತೇಕ ಈಗಲೂ ಅಂತಹ ದಯನೀಯ ಪರಿಸ್ಥಿತಿಯಲ್ಲಿಯೇ ಅವುಗಳು ಬದುಕುತ್ತಿರುವುದರಿಂದ, ಜಾತಿ ತಾರತಮ್ಯ, ದೌರ್ಜನ್ಯದ ದೇವದಾಸಿ ಪದ್ಧತಿ, ಅಸ್ಪೃಶ್ಯಾಚರಣೆ, ದೈಹಿಕ ದಬ್ಬಾಳಿಕೆ, ಕಿತ್ತು ತಿನ್ನುವ ಬಡತನ ಮುಂತಾದ ದಬ್ಬಾಳಿಕೆಗಳನ್ನು ನಿರಂತರವಾಗಿ ಎದುರಿಸುತ್ತಿದ್ದಾರೆ.

ಸರಕಾರಗಳು ಇದನ್ನು ಗಂಭಿರವಾಗಿ ಪರಿಗಣಿಸಿ ಅಂತಹ ಎಲ್ಲ ದೌರ್ಜನ್ಯಗಳಿಂದ ಈ ಜನ ಸಮುದಾಯಗಳು ಮತ್ತು ದೇವದಾಸಿ ಮಹಿಳೆಯರು, ಅವರ ಮಕ್ಕಳು ಬಿಡುಗಡೆ ಪಡೆಯಬೇಕಾದರೇ, ಆ ಎಲ್ಲಕುಟುಂಬಗಳನ್ನು ನಿಜವಾದ ಅರ್ಥದಲ್ಲಿ ಸ್ವಾವಲಂಬಿ ಜೀವನ ನಡೆಸುವಂತೆ ಪುನರ್ವಸತಿಯನ್ನು ಗಂಭೀರವಾಗಿ ಕೈಗೊಳ್ಳಬೇಕಾಗಿದೆ. ಆಗ ಮಾತ್ರವೇ ಇಂತಹ ದೌರ್ಜನ್ಯದಿಂದ ಮುಕ್ತಿಹೊಂದಲು ಸಾದ್ಯ. ಸರಕಾರಗಳು ಈ ಜನಗಳು ಶತ ಶತಮಾನಗಳಿಂದ ಕಳೆದುಕೊಂಡ ಸ್ವಾವಲಂಬನೆ ಮತ್ತು ಸ್ವಾತಂತ್ರ್ಯದ ಹಕ್ಕುಗಳನ್ನು ಗಳಿಸಿಕೊಡುವಂತೆ ಕ್ರಮವಹಿಸ ಬೇಕಾಗಿದೆಯೇ ಹೊರತು ಕೇವಲ ಅವರ ಮೇಲಿನ ಅನುಕಂಪ ಹಾಗೂ ಕರುಣೆಯಿಂದ ಮತ್ತು ಮತಗಳಿಕೆಯ ಉದ್ದೇಶದಿಂದೆಂಬಂತೆ ಕಾರ್ಯ ನಿರ್ವಹಿಸುವುದಲ್ಲ. ಅಂತಹ ಜನವಿರೋಧಿ ನೀತಿಗಳನ್ನು ಈ ಕೂಡಲೇ ಕೈ ಬಿಡಲು ಮತ್ತು ಈ ಕೆಳಕಂಡ ಹಕ್ಕೊತ್ತಾಯಗಳನ್ನು ಗಂಭೀರವಾಗಿ ಪರಿಗಣಿಸಲು ಈ ದಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಬೃಹತ್ ಪ್ರತಿಭಟನೆಯ ಮೂಲಕ ಒತ್ತಾಯಿಸಲಾಯಿತು.

ಹಕ್ಕೊತ್ತಾಯಗಳು :

1)ಎಲ್ಲಾ ದೇವದಾಸಿ ಮಹಿಳೆಯರಿಗೆ ಮಾಸಿಕ ಸಹಾಯಧನವನ್ನು 5,000 ರೂಗಳಿಗೆ ಹೆಚ್ಚಿಸಬೇಕು. ದೇವದಾಸಿ ಮಹಿಳೆಯರ ಪರಿತ್ಯಕ್ತ ಹೆಣ್ಣು ಮಕ್ಕಳಿಗೂ ಅದನ್ನು ವಿಸ್ತರಿಸಬೇಕು. ಅವರನ್ನು ಗಣತಿ ಮಾಡಬೇಕು.

2) ಗಣತಿಯಲ್ಲಿ ಬಿಟ್ಟು ಹೋದ ಮಹಿಳೆಯರನ್ನು ಗಣತಿ ಪಟ್ಟಿಯಲ್ಲಿ ಸೇರ್ಪಡೆ ಮಾಡಿ ಎಲ್ಲಾ ನೆರವನ್ನು ಒದಗಿಸಬೇಕು.

3) ದೇವದಾಸಿ ಮಹಿಳೆಯರ ಮಕ್ಕಳ ಮತ್ತು ಕುಟುಂಬದ ಸದಸ್ಯರನ್ನು ತಕ್ಷಣವೇ ಗಣತಿ ಮಾಡಿ ಅವರಿಗೂ ಪುನರ್ವಸತಿ ಕಲ್ಪಿಸಬೇಕು.

4) ಎಲ್ಲಾ ದೇವದಾಸಿ ಮಹಿಳೆಯರ ಮಕ್ಕಳು ಅಂತರ್ಜಾತಿಯಲ್ಲಾಗಲೀ ಮತ್ತು ಸಜಾತಿಯಲ್ಲಾಗಲೀ ಹಾಗೂ ದೇವದಾಸಿ ಮಹಿಳೆಯರ ಕುಟುಂಬಗಳ ಸದಸ್ಯರ ನಡುವೆಯಾಗಲೀ ಮದುವೆಯಾದಲ್ಲಿ ಪ್ರೋತ್ಸಾಹ ಧನವನ್ನು 05 ಲಕ್ಷ ರೂ ನೀಡಬೇಕು. ಇವರ ಮದುವೆಯ ವಿಚಾರದಲ್ಲಿ ಷರತ್ತುಗಳಿರಬಾರದು.

5) ಬರಗಾಲ ಹಾಗೂ ಅತೀವೃಷ್ಠಿ ಮತ್ತು ಪ್ರವಾಹದ ಹಿನ್ನೆಲೆಯಲ್ಲಿ ಎಲ್ಲಾ ದೇವದಾಸಿ ಮಹಿಳೆಯರ ಮತ್ತು ಅವರ ಮಕ್ಕಳ ಹಾಗೂ ಸ್ತ್ರೀ ಶಕ್ತಿ ಹಾಗೂ ಸ್ವ ಸಹಾಯ ಸಂಘಗಳ ಸಾಲ ಮನ್ನಾ ಮಾಡಬೇಕು. ದಲಿತ ಮಹಿಳೆಯರ ಸ್ತ್ರೀ ಶಕ್ತಿ ಹಾಗೂ ಸ್ವ ಸಹಾಯ ಗುಂಪುಗಳ ಸುತ್ತು ನಿಧಿಯನ್ನು ಎರಡು ಲಕ್ಷಕ್ಕೆ ಮತ್ತು ಶೇ 75 ಸಹಾಯಧನದ ಮತ್ತು ಉಳಿದ ಸಾಲಕ್ಕೆ ಬಡ್ಡಿ ಇರದ ಸಾಲವನ್ನು ಕನಿಷ್ಠ 50 ಲಕ್ಷ ರೂ ನೀಡಿಕೆಗೆ ಹೆಚ್ಚಿಸಬೇಕು.

6) ವ್ಯವಸಾಯದಲ್ಲಿ ತೊಡಗಲು ಇಚ್ಛಿಸುವ ಎಲ್ಲಾ ದೇವದಾಸಿ ಮಹಿಳೆಯರು ಮತ್ತು ಅವರ ಮಕ್ಕಳಿಗೆ ತಲಾ 5 ಎಕರೆ ಜಮೀನನ್ನು ಉಚಿತವಾಗಿ ಒದಗಿಸಬೇಕು. ಸದರಿ ಜಮೀನು ಒದಗಿಸುವ ಯೋಜನೆಯಲ್ಲಿ ಪ್ರತಿವರ್ಷ ಪ್ರತಿ ತಾಲೂಕಿಗೆ ಕನಿಷ್ಠ 500 ಎಕರೆ ಒದಗಿಸಲು ಕ್ರಮವಹಿಸಬೇಕು. ಭೂಮಿ ಖರೀದಿಸಲು ಪ್ರತಿವರ್ಷ ಕನಿಚ್ಠ 5,000 ಕೋಟಿ ರೂ ಒದಗಿಸಬೇಕು.

ರಾಜ್ಯದಾದ್ಯಂತ ನಿರುಪಯೋಗಿ ಯಾಗಿರುವ ರಾಜ್ಯ ಸರಕಾರದ ವಿವಿಧ ಇಲಾಖೆಗಳಡಿಯ ಕೃಷಿ ಮತ್ತಿತರ ಫಾರಂಗಳ ಜಮೀನುಗಳನ್ನು ದೇವದಾಸಿ ಮಹಿಳೆಯರ ಸಹಕಾರಿ ಬೇಸಾಯಕ್ಕೆ ಒದಗಿಸಬೇಕು. ಉದಾಹರಣೆಗೆ ಬಳ್ಳಾರಿ ಜಿಲ್ಲೆಯ ಕುರೇಕುಪ್ಪ ಫಾರಂ.

7) ನಿವೇಶನ ರಹಿತರಿಗೆ ತಲಾ 80:80 ಚದರ ಅಡಿ ಸ್ಥಳದಲ್ಲಿ ಕನಿಷ್ಠ 7 ಲಕ್ಷ ರೂ ಮೌಲ್ಯದ ಮನೆಯನ್ನು ಉಚಿತವಾಗಿ ನಿರ್ಮಿಸಿಕೊಡಬೇಕು. ಉಳಿದ ಜಮೀನಿನಲ್ಲಿ ಬದುಕು ರೂಪಿಸಿಕೊಳ್ಳಲು ಅಗತ್ಯ ಯೋಜನೆಗಳನ್ನು ರೂಪಿಸಿಕೊಡಬೇಕು.

8) ದೇವದಾಸಿ ಮಹಿಳೆಯರು ಮತ್ತು ಅವರ ಮಕ್ಕಳು ಸ್ವಯಂ ಉದ್ಯೋಗ ಕೈಗೊಳ್ಳಲು ವೃತ್ತಿ ತರಬೇತಿ ಶಿಭಿರಗಳನ್ನು ಹೋಬಳಿಗೊಂದರಂತೆ ಪ್ರತಿ ತಿಂಗಳು ಕನಿಷ್ಠ 4,000 ರೂಗಳ ಊಟ– ವಸತಿ ಸೌಬಲಭ್ಯದೊಂದಿಗೆ ನೀಡಬೇಕು. ನಂತರ ವೃತ್ತಿಯಲ್ಲಿ ತೊಡಗಲು ತಲಾ ವ್ಯಕ್ತಿಗೆ ಕನಿಷ್ಠ 05 ಲಕ್ಷ ರೂಗಳಿಗೆ ಕಡಿಮೆ ಇರದ ಸಾಲ ನೀಡಬೇಕು.

ಅದರಲ್ಲಿ ಶೇ 75 ರ ಸಹಾಯಧನ ವಿರುವ ಉಳಿದ ಸಾಲಕ್ಕೆ ಕನಿಷ್ಠ 5 ವರ್ಷಗಳ ಕಾಲ ಬಡ್ಡಿ ಇರದಂತೆ ಕ್ರಮ ವಹಿಸಬೇಕು.

9) ದೇವದಾಸಿ ಮಹಿಳೆಯರ ಮಕ್ಕಳ ವಿದ್ಯಾಭ್ಯಾಸಕ್ಕೆ ಉನ್ನತ ಹಂತದವರೆಗೆ ಉಚಿತವಾದ ಮತ್ತು ನೇರವಾದ ಪ್ರವೇಶಾವಕಾಶ ಒದಗಿಸಬೇಕು.

ವಿದ್ಯಾವಂತ ನಿರುದ್ಯೋಗಿಗಳಿಗೆ ಅವರು ಉದ್ಯೋಗ ಪಡೆಯುವವರೆಗೆ ತಲಾ 10,000 ರೂಗಳ ನಿರುದ್ಯೋಗ ಭತ್ಯೆ ನೀಡಬೇಕು.

10) ಉದ್ಯೋಗ ಖಾತ್ರಿ ಯೋಜನೆಯಡಿ ಕನಿಷ್ಠ ತಲಾ 200 ದಿನಗಳ ಕಾಲ ಉದ್ಯೋಗವನ್ನು ಕಡ್ಡಾಯವಾಗಿ ಒದಗಿಸಬೇಕು. ಅಲ್ಲದೇ ಹೋದಲ್ಲಿ ಶೇ 75 ನಿರುದ್ಯೋಗ ಭತ್ಯೆ ಒದಗಿಸಬೇಕು. ಕೂಲಿ ಮೊತ್ತವನ್ನು 700 ರೂಗಳಿಗೆ ಹೆಚ್ಚಿಸಬೇಕು.

11) ರಾಜ್ಯ ಸರಕಾರ ಅಂಗನವಾಡಿ ಕೇಂದ್ರಗಳಲ್ಲಿಯೇ ಎಲ್.ಕೆ.ಜಿ ಹಾಗೂ ಯುಕೆಜಿ ಶಿಕ್ಷಣ ನೀಡಲು ಕ್ರಮವಹಿಸಿ ಅಂಗನವಾಡಿ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಬೇಕು. ಅದೇ ರೀತಿ, ಎಲ್ಲಾ ಕನ್ನಡ ಶಾಲೆಗಳಲ್ಲಿ ಇಂಗ್ಲೀಷ್ ಭಾಷೆಯನ್ನು ಒಂದನೇ ತರಗತಿಯಿಂದಲೇ ಪರಿಣಾಮ ಕಾರಿಯಾಗಿ ಒಂದು ಭಾಷೆಯಾಗಿ ಕಲಿಸಲು ಅಗತ್ಯ ಕ್ರಮವಹಿಸಬೇಕು.

12) ಫಲಾನುಭವಿಗಳ ಆಯ್ಕೆಯಲ್ಲಿ ನಡೆಯುವ ತಾರತಮ್ಯ ಮತ್ತು ಭ್ರಷ್ಠಾಚಾರವನ್ನು ತಡೆಯಲು ಫಲಾನುಭವಿಗಳನ್ನು ಗ್ರಾಮ ಪಂಚಾಯ್ತಿಗಳು ಮತ್ತು ನಗರ ಪ್ರದೇಶಕ್ಕೆ ಸಮರ್ಪಕ ಕೋಟಾ ನಿಗದಿಸಿ ಅದರಂತೆ ಅಲ್ಲಿನ ಫಲಾನುಭವಿಗಳನ್ನು ಸಾರ್ವಜನಿಕರ ಸಮ್ಮುಖದಲ್ಲಿ ಲಾಟರಿ ಎತ್ತುವ ಮೂಲಕ ಗುರುತಿಸಬೇಕು. ಭ್ರಷ್ಠಾಚಾರ ತಡೆಯಲು ಕ್ರಮವಹಿಸಬೇಕು. ಫಲಾನುಭವಿಗಳಿಂದ ಪ್ರತಿ ವರ್ಷ ಅರ್ಜಿಗಳನ್ನು ಪಡೆಯುವುದನ್ನು ನಿಲ್ಲಿಸಬೇಕು. ಒಂದು ಬಾರಿ ಮಾತ್ರವೇ ಅರ್ಜಿಪಡದು ಫಲಾನುಭವಿಗಳಾಗುವ ತೊಂದರೆಯನ್ನು ನಿವಾರಿಸಬೇಕು.

ಗ್ರಾ.ಪಂ.ಗಳಲ್ಲಿ ನಿಯಮಾನುಸಾರ ನೇಮಕವಾಗಿರುವ ಎಲ್ಲಾ ನೌಕರರಿಗೂ ಯಾವುದೇ ರೀತಿಯ ವಿಳಂಬ ಮಾಡದೆ ಜಿಲ್ಲಾ ಪಂಚಾಯತ್ ಅನುಮೋದನೆ ನೀಡಬೇಕೆಂದು ದಿನಾಂಕ: 23–07–2019ರಂದು ಸರ್ಕಾರದ ಸ್ಪಷ್ಟವಾದ ಆದೇಶ ನೀಡಿದ್ದರೂ ಸಹ ನೌಕರರಿಗೆ ಅನಿಮೋದನೆ ನೀಡದೆ ಸತಾಯಿಸಲಾಗುತ್ತಿದೆ. ಅಲ್ಲದೆ ಅನುಮೋದನೆ ನೀಡುವ ವಿಚಾರದಲ್ಲಿ ನೌಕರರಿಂದ ಸಾವಿರಾರು ರೂಪಾಯಿಗಳನ್ನು ಅಕ್ರಮವಾಗಿ ಪಡಯಲಾಗುತ್ತಿದೆ ಎಂಬ ದೂರುಗಳಿವೆ. ಇದರಿಂದ ನೌಕರರು ಅನುಮೋದನೆಯೂ ಇಲ್ಲದೆ ಹಣವನ್ನೂ ಕಳೆದುಕೊಂಡಿದ್ದಾರೆ. ಗ್ರಾ.ಪಂ. ನೌಕರರಿಗೆ ನಿಯಮಾನುಸಾರ ಮುಂಬಡ್ತಿ ಕೊಡುವ ವಿಚಾರದಲ್ಲಿಯೂ ಅನ್ಯಾಯವಾಗುತ್ತಿದೆ. ಸೇವೆಯಿಂದ ನಿವೃತ್ತಿ ಅಥವಾ ಮರಣ ಹೊಂದಿದ ನೌಕರರಿಗೆ ಅಥವಾ ಅವಲಂಬಿತರಿಗೆ ಕಾನೂನಾತ್ಮಕವಾಗಿ ಪಾವತಿಸಬೇಕಾದ ಉಪಧನ (ಗ್ರಾಚ್ಯುಟಿ) ಪಾವತಿಯಾಗುತ್ತಿಲ್ಲ.

ಹಾಸನದಲ್ಲಿ ಗ್ರಾ.ಪಂ. ನೌಕರರು ಸಿಐಟಿಯು ನೇತೃತ್ವದಲ್ಲಿ ನಗರದ ಹೇಮಾವತಿ ಪ್ರತಿಮೆ ಬಳಿಯಿಂದ ಮೆರವಣಿಗೆ ನಡೆಸಿ ಜಿಲ್ಲಾ ಪಂಚಾಯತ್ ಕಚೇರಿ ಮುಂದೆ ಧರಣಿ ಸತ್ಯಾಗ್ರಹ ಆರಂಭಿಸಿದರು. ಹೋರಾಟದ ನೇತೃತ್ವವನ್ನು ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್ ವಹಿಸಿ ನೌಕರರನ್ನು ಉದ್ದೇಶಿಸಿ ಮಾತನಾಡಿದರು. ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಶ್ವೇತಾ ದೇವರಾಜ ಅವರು ಧರಣಿ ನಿರತರನ್ನು ಮಾತನಾಡಿಸಿ ನೌಕರರ ಸಮಸ್ಯೆಗಳನ್ನು ರಾಜ್ಯ ಸರ್ಕಾರದ ಗಮನಕ್ಕೆ ತರಲಾಗುವುದು ಹಾಗೂ ನೌಕರರಿಗೆ ವೇತನ ನೀಡದೆ ಮತ್ತು ಅನುಮೋದನೆ ಪಡೆಯಲು ಸತಾಯಿಸುತ್ತಿರುವ ಪಿಡಿಒಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದರು. ಧರಣಿ ನಿರತರ ಮನವಿ ಸ್ವೀಕರಿಸಿದ ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಬಿ.ಎ. ಪರಮೇಶ್‌ರವರು ನೌಕರರ ಅನುಮೋದನೆ, ಜೇಷ್ಠತಾ ಪಟ್ಟಿ, ವೇತನ ಮತ್ತಿತರೆ ಸಮಸ್ಯೆಗಳ ಇತ್ಯರ್ಥಕ್ಕೆ ಇನ್ನೊಂದು ವಾರದಲ್ಲಿ ತಾ.ಪಂ. ಅಧಿಕಾರಿಗಳು ಮತ್ತು ಸಂಘದ ಪದಾಧಿಕಾರಿಗಳ ಅಧಿಕೃತ ಸಭೆ ಕರೆದು ಚರ್ಚಿಸಲಾಗುವುದು ಹಾಗೂ ವೇತನ ಮತ್ತು ಅನುಮೋದನೆಗೆ ತೊಂದರೆ ನೀಡುತ್ತಿರುವ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು. ಈ ಹಿನ್ನೆಲೆಯಲ್ಲಿ ನೌಕರರ ಧರಣಿಯನ್ನು ತಾತ್ಕಾಲಿಕವಾಗಿ ಹಿಂಪಡೆಯಲಾಯಿತು.

"ಇತಿಹಾಸಕಾರ ಷ. ಶೆಟ್ಟರ್ ನಿಧನ"

ಅಂತರರಾಷ್ಟ್ರೀಯ ಖ್ಯಾತಿಯ ಇತಿಹಾಸಕಾರ ಷ.ಶೆಟ್ಟರ್ (85) ಶುಕ್ರವಾರ ನಸುಕಿನ 3 ಗಂಟೆಗೆ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಕಳೆದ ಒಂದು ವಾರದಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಶ್ವಾಸಕೋಶದಲ್ಲಿ ನೀರು ತುಂಬಿಕೊಂಡು, ಉಸಿರಾಟಕ್ಕೆ ಸಮಸ್ಯೆಯಾಗಿತ್ತು. ಬನ್ನೇರುಘಟ್ಟ ರಸ್ತೆಯ ಸಾಗರ್ ಅಪೊಲೊ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು.

ಹೆಂಡತಿ ಮತ್ತು ಇಬ್ಬರು ಹೆಣ್ಣುಮಕ್ಕಳು ಇದ್ದಾರೆ. ಭೂಪಸಂದ್ರದ ಸ್ವಗೃಹದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಅಂತ್ಯಕ್ರಿಯೆ ಬಗ್ಗೆ ಈವರೆಗೆ ತೀರ್ಮಾನ ತೆಗೆದುಕೊಂಡಿಲ್ಲ ಎಂದು ಕುಟುಂಬದ ಮೂಲಗಳು ಹೇಳಿವೆ.

ಹೊಸಕೋಟೆಯಲ್ಲಿ ಅವರಿಗೆ ಸೇರಿದ ಜಾಗ ಅಥವಾ ಚಾಮರಾಜಪೇಟೆಯ ಚಿತಾಗಾರದಲ್ಲಿ ಲಿಂಗಾಯತ ಸಂಪ್ರದಾಯದಂತೆ ಅಂತಿಮ ಸಂಸ್ಕಾರ ನಡೆಸಲಾಗುತ್ತದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿಳಾಸ: ಹೊಯ್ಸಳ ಶ್ರೀಕೃಷ್ಣ ಅಪಾರ್ಟ್‌ಮೆಂಟ್, ಕಲ್ಪನಾ ಚಾವ್ಲಾ ರಸ್ತೆ, ಭೂಪಸಂದ್ರ. ಸಂಪರ್ಕಕ್ಕೆ ರಾಮ್?

ಷ. ಶೆಟ್ಟರ್ ಬದುಕಿನ ಹಾದಿ, ಹುಟ್ಟಿದ್ದು 11ನೇ ಡಿಸೆಂಬರ್ 1935. ಬಳ್ಳಾರಿ ಜಿಲ್ಲೆ ಹಂಪಸಾಗರದಲ್ಲಿ. ಮೈಸೂರು, ಧಾರವಾಡ ಮತ್ತು ಕೇಂಬ್ರಿಜ್‌ಗಳಲ್ಲಿ ಉನ್ನತ ವ್ಯಾಸಂಗ. ಇತಿಹಾಸ, ಪ್ರಾಕ್ತನಶಾಸ್ತ್ರ, ಮಾನವಶಾಸ್ತ್ರ, ಕಲಾ ಇತಿಹಾಸ, ದರ್ಶನಶಾಸ್ತ್ರ ಮತ್ತು ಹಳಗನ್ನಡ ಕುರಿತು 27ಕ್ಕೂ ಹೆಚ್ಚು ಸಂಶೋಧನಾ ಗ್ರಂಥಗಳ ಪ್ರಕಟಣೆ.

ಹಿರಿಯ ಇತಿಹಾಸಕಾರ ಮತ್ತು, ಸಂಶೋಧಕ



ಡಾ.ಎಸ್.ಶೆಟ್ಟರ್ ಅವರ ಸಾವಿನಿಂದ ಭಾರತೀಯ ವಿದ್ವತ್ ಲೋಕ ಬಡವಾಗಿದೆ. ಅವರು ಇನ್ನಷ್ಟು ಕಾಲ ಮಾರ್ಗದರ್ಶಕರಾಗಿ ನಮ್ಮ ಜೊತೆ ಇರಬೇಕಾಗಿತ್ತು.

ಅವರ ಕುಟುಂಬ ವರ್ಗಕ್ಕೆ ನನ್ನ ಸಂತಾಪಗಳು, ಅವರ ಶೋಕದಲ್ಲಿ ನಾನೂ ಭಾಗಿ. ವಿವಿದ ವಿಶ್ವವಿದ್ಯಾಲಯದಲ್ಲಿ ಬೋಧನೆ 1960?96; ಭಾರತೀಯ ಕಲಾ ಇತಿಹಾಸ ಸಂಸ್ಥೆಯ ನಿರ್ದೇಶಕತ್ವ 1978–95, ನವದೆಹಲಿಯ ಇಂಡಿಯನ್ ಕೌನ್ಸಿಲ್ ಆಫ್ ಹಿಸ್ಟಾರಿಕಲ್ ರಿಸರ್ಚ್ ಅಧ್ಯಕ್ಷ ಸ್ಥಾನ 1996–99, ಬೆಂಗಳೂರು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್‌ನಲ್ಲಿ ಡಾ. ಎಸ್ ರಾಧಾಕೃಷ್ಣ್ ಪ್ರಾಧ್ಯಾಪಕತ್ವ 2002–2010, 2010ರಿಂದ ಇದೇ ಸಂಸ್ಥೆಯಲ್ಲಿ ಸಂದರ್ಶಕ ಪ್ರಾಧ್ಯಾಪಕ, ಇಂದಿರಾಗಾಂಧಿ ರಾಷ್ಟ್ರೀಯ ಕಲಾ ಕೇಂದ್ರದ ದಕ್ಷಿಣ ಭಾರತ ಶಾಖೆಯ ನಿರ್ದೇಶಕತ್ವ 2005–2013.

ಭಾರತೀಯ ಇತಿಹಾಸ ಅನುಸಂಧಾನ ಪರಿಷತ್, ದಕ್ಷಿಣ ಭಾರತೀಯ ಇತಿಹಾಸ ಅನುಸಂಧಾನ ಪರಿಷತ್, ಕರ್ನಾಟಕ ಇತಿಹಾಸ ಅನುಸಂಧಾನ ಪರಿಷತ್‌ಗಳ ಸರ್ವಾಧ್ಯಕ್ಷ ಸ್ಥಾನ, ಮೆಲ್ಬೋರ್ನ್ (ಆಸ್ಟ್ರೇಲಿಯಾ) ವಿಶ್ವ ಸಂಸ್ಕೃತ ಸಮ್ಮೇಳನದ ವಿಭಾಗೀಯ ಅಧ್ಯಕ್ಷ ಸ್ಥಾನ, ಬಳ್ಳಾರಿ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನ ಹಾಗೂ ಅಖಿಲ ಭಾರತ ಹಳಗನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತ್ವ.

ಕುಂದಕುಂದ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿಯ ಭಾಷಾ ಸಮ್ಮಾನ್, ಮಾಸ್ತಿ ಪ್ರಶಸ್ತಿ, ರನ್ನ ಪ್ರಶಸ್ತಿ, 2016ರ ಶಾಸ್ತ್ರೀಯ ಕನ್ನಡ ವಾಙ್ಮಯದ ರಾಷ್ಟ್ರಪತಿ ಪ್ರಶಸ್ತಿ ಸೇರಿದಂತೆ ಹಲವು ಗೌರವಗಳು ಸಂದಿವೆ. ಸದ್ಯ ಬೆಂಗಳೂರಿನಲ್ಲಿ ಹಳಗನ್ನಡ ಮತ್ತು ವಚನ ಸಾಹಿತ್ಯದ ಓದು ಸಂಶೋಧನೆಯಲ್ಲಿ ಅವರು ತೊಡಗಿಕೊಂಡಿದ್ದರು.

ಡಾ. ಎಸ್. ಶೆಟ್ಟರ್ ಟವರ ನಿಧನಕ್ಕೆ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ತೀವ್ರ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ಭಾರತದಲ್ಲಿ 'ಸಂಪತ್ತಿನ ಸೃಷ್ಟಿಕರ್ತರು' ಯಾರು?

ಪ್ರಜಾಪ್ರಭುತ್ವ, ಕಾರ್ಮಿಕ ವರ್ಗ, ರೈತರು, ಮಹಿಳೆಯರು, ದಲಿತರು, ಆದಿವಾಸಿಗಳು ಇಲ್ಲಿ ಅಮುಖ್ಯರಾಗಿ ಇಂದು ವೆಲ್ತ್ ಕ್ರಿಯೇಟರುಗಳು, ಮಾರುಕಟ್ಟೆ ಶಕ್ತಿ, ಖಾಸಗಿವಲಯ ಮುಖ್ಯವಾಗಿ ಅವುಗಳನ್ನು ಇನ್ನಿಲ್ಲದಂತೆ ವೈಭವೀಕರಿಸಲಾಗಿದೆ. ಇದರಿಂದ ನಮ್ಮ ಆರ್ಥಿಕ ಕುಸಿತವು ಪರಿಹಾರವಾಗುವುದು ಸಾಧ್ಯವಿಲ್ಲ. ಇಂದು ಕೇಂದ್ರ ಸರ್ಕಾರವು ಬದಲಾಯಿಸುತ್ತಿರುವ ಆರ್ಥಿಕ ನೀತಿಗಳು ಉಂಟು ಮಾಡುವ ಮಾರಕ ಪರಿಣಾಮಗಳ ಬಗ್ಗೆ, ಭೂತಾಕಾರವಾದ ಅಸಮಾನತೆಯ ಬಗ್ಗೆ, ಕಾರ್ಮಿಕ ವರ್ಗದ ಶೋಷಣೆ ಬಗ್ಗೆ ನಾವು ಗಂಭೀರವಾಗಿ ಚಿಂತಿಸಬೇಕಾಗಿದೆ. ವೆಲ್ತ್‌ಗೆ ಪ್ರತಿಯಾಗಿ ದುಡಿಮೆಯನ್ನು-ಶ್ರಮಶಕ್ತಿಯನ್ನು ಗೌರವಿಸುವ ಕ್ರಮವನ್ನು ಬೆಳೆಸಬೇಕಾಗಿದೆ.

ಅತಿಥಿ ಅಂಕಣ



ಪ್ರೊ. ಟಿ. ಆರ್. ಚಂದ್ರಶೇಖರ

ಕೇಂದ್ರದ 2020-2021ರ ಬಜೆಟ್ಟಿನಲ್ಲಿ ಮತ್ತು 2019-2020ರ ಆರ್ಥಿಕ ಸಮೀಕ್ಷೆಯಲ್ಲಿ ಮತ್ತು ಪ್ರಧಾನಮಂತ್ರಿ ಅವರ 2019ರ ಸ್ವಾತಂತ್ರ್ಯ ದಿನಾಚರಣೆ ಸಂದೇಶದಲ್ಲಿ ಹಾಗೂ ವಿತ್ತಮಂತ್ರಿ ಅವರ ಭಾಷಣಗಳಲ್ಲಿ ಮತ್ತೆ ಮತ್ತೆ ವೆಲ್ತ್ ಕಿಯೇಟರುಗಳ (ಸಂಪತ್ತಿನ ಸೃಷ್ಟಿಕರ್ತರ) ಆರಾಧನೆ ನಡೆದಿರುವುದನ್ನು ಕಾಣಬಹುದು. ಕೇಂದ್ರ ಸರ್ಕಾರದ ಮುಖ್ಯ ಹಣಕಾಸು ಸಲಹೆಗಾರರಾದ ಕೃಷ್ಣಮೂರ್ತಿ ಸುಬ್ರಮಣಿಯನ್ ಅವರು 2018-19ರ ಆರ್ಥಿಕ ಸಮೀಕ್ಷೆಯಲ್ಲಿ, 'ಆರ್ಥಿಕ ಬೆಳವಣಿಗೆಯ, ರಫ್ತು ವ್ಯಾಪಾರದ ಮತ್ತು ಉದ್ಯೋಗಗಳ ಚಾಲಕ ಶಕ್ತಿಯೆಂದರೆ ವೆಲ್ತ್ ಕ್ರಿಯೇಟರುಗಳು' ಎಂದು ಬರೆದಿದ್ದರು. ಕಳೆದ ವರ್ಷದ ಸ್ವಾತಂತ್ರ್ಯ ದಿನಾಚರಣೆಯಂದು ದೇಶವನ್ನುದ್ದೇಶಿಸಿ ಭಾಷಣ ಮಾಡುತ್ತಾ ಪ್ರಧಾನಮಂತ್ರಿ 'ವೆಲ್ತ್ ಕ್ರಿಯೆಟರುಗಳನ್ನು ಅನುಮಾನದಿಂದ ನೋಡಬಾರದು. ಅವರು ವೆಲ್ತ್ ಕ್ರಿಯೇಟ್ ಮಾಡದಿದ್ದರೆ ಬಡವರಿಗೆ ಹಂಚಲು ವೆಲ್ಥೇ ಇರುವುದಿಲ್ಲ' ಎಂದು ಕರೆ ನೀಡಿದ್ದರು. ವಿತ್ತಮಂತ್ರಿ ಅವರು 'ಕಾರ್ಪೋರೇಟುಗಳು ದೇಶದ ವೆಲ್ತ್ ಕ್ರಿಯೇಟರುಗಳು' ಎಂದು ಬಣ್ಣಿಸಿದ್ದಾರೆ. ಕೇಂದ್ರದ 2019-2020ರ ಆರ್ಥಿಕ ಸಮೀಕ್ಷೆಯಲ್ಲಿ ಸ್ಪಷ್ಟವಾಗಿ ಖಾಸಗಿ ವಲಯದ ಉದ್ಯಮಪತಿಗಳೇ 'ಸಂಪತ್ತಿನ ಉತ್ಪಾದಕರು' ಎಂದು ಹೇಳಲಾಗಿದೆ.

ರಾಜಪ್ರಭುತ್ವವೋ ಅಥವಾ ಪ್ರಜಾಪ್ರಭುತ್ವವೋ?

ವೆಲ್ತ್ ಕ್ರಿಯೇಟರುಗಳ ವೈಭವೀಕರಣದ ಜೊತೆಗೆ 2019-2020ರ ಆರ್ಥಿಕ ಸಮೀಕ್ಷೆಯಲ್ಲಿ ಭಾರತದ ಪ್ರಾಚೀನ ರಾಜಪ್ರಭುತ್ವದಲ್ಲಿ ವೆಲ್ತ್ ಕ್ರಿಯೇಶನ್ನು ಖಾಸಗಿವಲಯದಿಂದ ನಡೆದಿತ್ತು ಎಂದು ಹೇಳುತ್ತಾ ಅಂದು ಹೇಗೆ 'ಅಗೋಚರ ಹಸ್ತ'ದ ಪಾತ್ರ ಸಂಪತ್ತಿನ ಉತ್ಪಾದನೆಯಲ್ಲಿ ಮಹತ್ವದ ಪಾತ್ರವಹಿಸಿತ್ತೋ ಅದೇ ರೀತಿಯಲ್ಲಿ ಇಂದು ಭಾರತದಲ್ಲಿ ಆರ್ಥಿಕ ಕುಸಿತವನ್ನು ತಡೆಯಲು ಮತ್ತು ಆರ್ಥಿಕ ಸಮೃದ್ಧತೆಯನ್ನು ಸಾಧಿಸಿಕೊಳ್ಳಲು 'ಅಗೋಚರ ಹಸ್ತ'ಕ್ಕೆ ಹೆಚ್ಚಿನ ಅವಕಾಶ ನೀಡಬೇಕೆಂದು ಪ್ರಬಲವಾಗಿ ಕೃಷ್ಣಮೂರ್ತಿ ಸುಬ್ರಮಣಿಯನ್ ಪ್ರತಿಪಾದಿಸಿದ್ದಾರೆ. ಆರ್ಥಿಕ ಸಮೀಕ್ಷೆಯ ಪ್ರಕಾರ ಮಾರುಕಟ್ಟೆ ವ್ಯವಸ್ಥೆಯಲ್ಲಿ ಸರ್ಕಾರ ಮಧ್ಯಪ್ರವೇಶಿಸಿದರೆ ಅದು ವೆಲ್ತ್ ಕ್ರಿಯೇಶನ್ನಿಗೆ ಮಾರಕವಾಗುತ್ತದೆ. ಸರ್ಕಾರವು ಖಾಸಗಿ ವಲಯಕ್ಕೆ ಪೂರ್ಣ ಸ್ವಾತಂತ್ರ್ಯ ನೀಡಬೇಕು ಎಂದು ವಾದಿಸಿದ್ದಾರೆ. ಇದಕ್ಕೆ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿನ ಉಲ್ಲೇಖಗಳನ್ನು ಸಮರ್ಥನೆಗಾಗಿ ನೀಡಿದ್ದಾರೆ. ರಾಜಪ್ರಭುತ್ವದ ಹೆಸರಿಲ್ಲದಿದ್ದರೂ ಇಲ್ಲಿ ಅದರ ಗುಣಗಾನ ನಡೆದಿದೆ. ರಾಜಪ್ರಭುತ್ವದಲ್ಲಿ ದುಡಿಮೆಗಾರರ, ದಲಿತರ, ಮಹಿಳೆಯರ, ಕಾರ್ಮಿಕರ ಬದುಕು ಎಷ್ಟು ದುಸ್ಥಿತಿಯಲ್ಲಿತ್ತು ಎಂಬುದುನ್ನು ಸಮೀಕ್ಷೆ ಹೇಳುವುದಿಲ್ಲ. ಪ್ರಾಚೀನ ಭಾರತದಲ್ಲಿ ದುಡಿಯುವ ವರ್ಗಕ್ಕೆ, ಮಹಿಳಾ ವರ್ಗಕ್ಕೆ, ದಲಿತರಿಗೆ ಅಕ್ಷರವನ್ನು, ಶಿಕ್ಷಣವನ್ನು, ಆಸ್ತಿ ಹಕ್ಕನ್ನು ನಿಷೇಧಿಸಲಾಗಿತ್ತು. ಇದರ ಬಗ್ಗೆ ಸಮೀಕ್ಷೆಯಲ್ಲಿ ಚರ್ಚೆ ನಡೆದಿಲ್ಲ. ಪ್ರಜಾಪ್ರಭುತ್ವನ್ನು ಅಪ್ರತ್ಯಕ್ಷವಾಗಿ ತಿರಸ್ಕರಿಸುತ್ತಿರುವ ತಂತ್ರ ಇಲ್ಲಿರುವಂತೆ ಕಾಣುತ್ತದೆ.

ವೆಲ್ತ್ ಕ್ರಿಯೇಶನ್ನಿನಲ್ಲಿ ಕಾರ್ಮಿಕ ವರ್ಗದ ಪಾತ್ರವೇನು?

ಅರ್ಥಶಾಸ್ತ್ರದ ಮೊದಲ ಪಾಠವೆಂದರೆ ವೆಲ್ತ್ (ಸಂಪತ್ತು) ಎಂದರೆ ಜನರ ಬಯಕೆಗಳನ್ನು ಪೂರೈಸುವ ಸರಕು-ಸೇವೆಗಳು ಎಂಬುದಾಗಿದೆ. ವೆಲ್ತ್ ಎಂದರೆ ಹಣವಲ್ಲ, ಶ್ರೀಮಂತಿಕೆಯಲ್ಲ, ವರಮಾನವಲ್ಲ. ಉತ್ಪಾದನೆ ಮಾಡಿದ ಸರಕು-ಸೇವೆಗಳು ದೇಶದ ವೆಲ್ತ್. ಆದರೆ ಇಂದು ಈ ಪಾಠವನ್ನು ತಲೆಕೆಳಗು ಮಾಡುವ ರೀತಿಯಲ್ಲಿ ಆಳುವ ವರ್ಗವು ಉದ್ಯಮಪತಿಗಳೆ- ಅಂದರೆ ಬಂಡವಾಳವೇ(ಕಾಪಿಟಲ್)ವೆಲ್ತ್ ಕ್ರಿಯೇಶನ್ನಿನ ಮೂಲ ಎಂದು ಹೇಳುತ್ತಿದೆ. ಶ್ರಮಶಕ್ತಿಯ(ಲೇಬರ್) ಸಹಭಾಗಿತ್ವವಿಲ್ಲದೆ ಬಂಡವಾಳದಿಂದ ಸಂಪತ್ತಿನ ಉತ್ಪಾದನೆ ಸಾಧ್ಯವಿಲ್ಲ. ಬಂಡವಾಳ + ಶ್ರಮಶಕ್ತಿ = ಉತ್ಪಾದನೆ ಎಂಬ ಬೀಜಸದೃಶ ಸೂತ್ರವನ್ನು ಆಳುವ ವರ್ಗವು ತಲೆಕೆಳಗು ಮಾಡುತ್ತಿದೆ. ವಿತ್ತಮಂತ್ರಿ ಅವರ ಬಜೆಟ್ ಭಾಷಣದಲ್ಲಾಗಲಿ, ಆರ್ಥಿಕ ಸಮೀಕ್ಷೆಯಲ್ಲಾಗಲಿ ಅಥವಾ ಪ್ರಧಾನಮಂತ್ರಿಗಳ ಭಾಷಣಗಳಲ್ಲಾಗಲಿ ಅಪ್ಪಿತಪ್ಪಿಯೂ ವೆಲ್ತ್ ಕ್ರಿಯೇಶನ್ನಿನಲ್ಲಿ ಕಾರ್ಮಿಕ ವರ್ಗದ ಪಾತ್ರದ ಬಗ್ಗೆ, ದಲಿತರ ಕೊಡುಗೆ ಬಗ್ಗೆ, ಮಹಿಳೆಯರ ಸಂಭಾವನಾರಹಿತ ದುಡಿಮೆಯ ಬಗ್ಗೆ ಚರ್ಚೆಗಳು ಕಣ್ಣಲ್ಲಿ ಕಣ್ಣಿಟ್ಟು ಹುಡುಕಿದರೂ ದೊರೆಯುವುದಿಲ್ಲ.

ನಮ್ಮ ದೇಶದಲ್ಲಿ 2011ರ ಜನಗಣತಿ ಪ್ರಕಾರ 48 ಕೋಟಿ ದುಡಿಮೆಗಾರರಿದ್ದಾರೆ. ಇವರಲ್ಲಿ 14.43 ಕೋಟಿ ಭೂರಹಿತ ದಿನಗೂಲಿ ದುಡಿಮೆಗಾರರಿದ್ದಾರೆ. ಈ ದಿನಗೂಲಿಗಳಲ್ಲಿ 5.76 ಕೋಟಿ ದಲಿತ ದುಡಿಮೆಗಾರರಿದ್ದಾರೆ(ಶೇ.40). ಇವರು ಹಗಲು-ರಾತ್ರಿಯೆನ್ನದೆ, ವರ್ಷದ 365 ದಿನವೂ ಬೆವರು, ಕಣ್ಣೀರು, ರಕ್ತ ಹರಿಸಿ ಅರೆಹೊಟ್ಟೆಯಲ್ಲಿ, ಅರೆಬಟ್ಟೆಯಲ್ಲಿ ದುಡಿಮೆ ಮಾಡುತ್ತಿದಾರೆ. ದೇಶದಲ್ಲಿ 26.29 ಕೋಟಿ ರೈತಾಪಿ ದುಡಿಮೆಗಾರರಿದ್ದಾರೆ. ಇವರನ್ನು ಸೌಜನ್ಯಕ್ಕಾದರೂ ಪ್ರಧಾನಮಂತ್ರಿ ಮತ್ತು ವಿತ್ತಮಂತ್ರಿಗಳು ಸ್ಮರಿಸುತ್ತಿಲ್ಲ. ಆರ್ಥಿಕ ಸಮೀಕ್ಷೆಯು ಕಾರ್ಮಿಕ ವರ್ಗದ ದುಡಿಮೆಗಾರರು, ಸಮಾನತೆ, ಕೂಲಿ, ದಲಿತರು ಮುಂತಾದವುಗಳ ಬಗ್ಗೆ ದಿವ್ಯ ನಿರ್ಲಕ್ಷ ತಳೆದಿರುವುದನ್ನು ಕಾಣಬಹುದು. ಉದ್ಯಮಪತಿಗಳ, ಖಾಸಗಿವಲಯದ, ರಾಜಪ್ರಭುತ್ವದಲ್ಲಿನ ಅಗೋಚರ ಶಕ್ತಿಯ(ಮಾರುಕಟ್ಟೆ ಶಕ್ತಿ) ವೈಭವೀಕರಣದಿಂದ ಇಂದು ನಾವು ಎದುರಿಸುತ್ತಿರುವ ಆರ್ಥಿಕ ಮಹಾಕುಸಿತವನ್ನು ತಡೆಯಬಹುದೆ? ವೆಲ್ತ್ ಕ್ರಿಯೇಟರುಗಳ ಆರಾಧನೆಯಿಂದ ಆರ್ಥಿಕ ಪುನಶ್ಚೇತನ ಸಾಧ್ಯವೇ? ಸಮೀಕ್ಷೆಯಲ್ಲಿ ಕಾರ್ಮಿಕ ವರ್ಗ ಎನ್ನುವ ನುಡಿಯನ್ನು ಬಳಸಲು ಹಿಂಜರಿಕೆಯಿದೆ. ಇಲ್ಲಿ 'ಮಿಲಿಯು' ಎಂಬ ನುಡಿಯನ್ನು ಬಳಸಲಾಗಿದೆಯೇ ವಿನಾ ದುಡಿಮೆಗಾರರು ಎಂಬುದನ್ನು ಬಳಸಿಲ್ಲ. ರಾಜಪ್ರಭುತ್ವ ಮತ್ತು ಮಾರುಕಟ್ಟೆ ಶಕ್ತಿಯ ಬಗ್ಗೆ ಸಮೀಕ್ಷೆಯಲ್ಲಿನ ಒಂದು ವಾಕ್ಯ ಹೀಗಿದೆ: '--- our traditional economic thinking always emphasised enabling market and eliminating obstacles to economic activity'. ಪ್ರಾಚೀನ ಆರ್ಥಿಕ ಚಿಂತನೆ ಎನ್ನುವುದು ರಾಜಪ್ರಭುತ್ವ ಪ್ರಣೀತ ಮಾರುಕಟ್ಟೆ ವ್ಯವಸ್ಥೆಯಾಗಿತ್ತು ತಾನೆ? ಕೌಟಿಲ್ಯನನ್ನು ದೀರ್ಘವಾಗಿ ಉಲ್ಲೇಖಿಸುತ್ತಾ ಸಮೀಕ್ಷೆಯು ಸಮಾಜವಾದಿ ವ್ಯವಸ್ಥೆಯನ್ನು ಹೀಗಳೆಯುತ್ತಾ ಕಾರ್ಪೋರೇಟ್ ಕುಳಗಳನ್ನು ವೈಭವೀಕರಿಸಿದೆ. ಉದಾ: 1991ರ ನಂತರ ಶೇರುಮಾರುಕಟ್ಟೆಯಲ್ಲಿ ಉತ್ಪಾದಿಸಿದ ವೆಲ್ತ್‌ನಲ್ಲಿ ಸಂಬಳ ಪಡೆಯುವ ನೌಕರರು ಮತ್ತು ಸರಕು-ಸರಂಜಾಮು ಸರಬರಾಜು ಮಾಡುವವರು ಪಾಲು ಪಡೆದಿದ್ದಾರೆ ಎಂದು ಖಾಸಗೀಕರಣವನ್ನು ಸಮರ್ಥಿಸಲಾಗಿದೆ. ನಮ್ಮ ದೇಶದಲ್ಲಿ ಮುಕ್ಕಾಲುಮೂರುವೀಸೆ ಪಾಲು ದುಡಿಮೆಗಾರರು ಅನೌಪಚಾರಿಕ ವಲಯದಲ್ಲಿದ್ದಾರೆ. ಅವರಿಗೆ ಉತ್ಪಾದನೆಯಾದ ವೆಲ್ತ್‌ನಲ್ಲಿ ಎಷ್ಟು ಪಾಲು ದೊರೆತಿದೆ? ಇದರ ಬಗ್ಗೆ ಸಮೀಕ್ಷೆ ಮಾತನಾಡುವುದಿಲ್ಲ. ಸಮೀಕ್ಷೆಯಲ್ಲಿ ವೆಲ್ತ್ ಎನ್ನುವುದನ್ನು ಸೆನ್ಸೆಕ್ಸ್‌ಗೆ ಸಮೀಕರಿಸಿ ಮಾತನಾಡಲಾಗಿದೆ. ಇವರಿಗೆ ಸೆನ್ಸೆಕ್ಸೇ ಅಭಿವೃದ್ಧಿಯಾಗಿದೆ.

ಕಳೆದ ವರ್ಷದ ಆಗಸ್ಟ್-ಸೆಪ್ಟೆಂಬರ್ ತಿಂಗಳುಗಳಲ್ಲಿ ವಿತ್ತಮಂತ್ರಿಗಳು ವೆಲ್ತ್ ಕ್ರಿಯೇಟರುಗಳಿಗೆ ರೂ. 1.45 ಲಕ್ಷಕೋಟಿ ತೆರಿಗೆ ವಿನಾಯಿತಿ ನೀಡಿದ್ದರು. ಪ್ರಸ್ತುತ ಬಜೆಟ್ಟಿನಲ್ಲಿ ನೇರ ತೆರಿಗೆ ವಿನಾಯತಿ ನೀಡಿ ಮತ್ತು ಲಾಭಾಂಶ ವಿತರಣಾ ತೆರಿಗೆ ರದ್ದುಪಡಿಸಿ ಸುಮಾರು ರೂ. 65000 ಕೋಟಿ ವಿನಾಯಿತಿ ನೀಡಿದ್ದಾರೆ. ಇದರ ಪರಿಣಾಮ ಏನಾಗಿದೆ? ಸರ್ಕಾರವು ನಿರೀಕ್ಷಿಸಿದಂತೆ ಬಂಡವಾಳ ಹೂಡಿಕೆಯಲ್ಲಿ ಏರಿಕೆಯಾಗಿದೆಯೇನು? ತೆರಿಗೆ ವಿನಾಯತಿ ಪಡೆದ ಕಾರ್ಪೋರೇಟ್ ವಲಯದಲ್ಲಿ ಉದ್ಯೋಗಗಳ ಸೃಷ್ಟಿಯಾಗಿದೆಯೇನು? ಹಾಗಾದರೆ 2019-2020ರಲ್ಲಿ ಜಿಡಿಪಿ ಬೆಳವಣಿಗೆಯು ಏಕೆ ಕುಸಿಯುತ್ತಾ ನಡೆದಿದೆ?

ದುಡಿಮೆಯ ಬಗ್ಗೆ ಅಸಹ್ಯಕರ ಭಾವನೆ!!

ಇಂದು ಆಳುವ ವರ್ಗದಲ್ಲಿ ದುಡಿಮೆಯ ಬಗ್ಗೆ ಅಸಹ್ಯಕರ ಭಾವನೆಯಿದೆ. ಅದನ್ನು ಹೀಗಳೆಯಲಾಗುತ್ತಿದೆ. ಕಾರ್ಮಿಕ ಸಂಘಟನೆಗಳು ಅಭಿವೃದ್ಧಿಗೆ ಮಾರಕ ಎನ್ನುವ ಮಾತುಗಳು ಕೇಳಿಬರುತ್ತಿವೆ. ಹಕ್ಕುಗಳು 'ಭಾರತೀಯ ಪರಂಪರೆಯಲ್ಲ' ಎಂದು ಹೇಳಲಾಗುತ್ತಿದೆ. ಅನಕ್ಷರಸ್ಥರು ದೇಶದ ವೆಲ್ತ್ ಕ್ರಿಯೇಶನ್ನಿಗೆ ಕಾಣಿಕೆ ನೀಡುತ್ತಿಲ್ಲ ಎಂದು ಬೆಂಗಳೂರಿನ ಸಂಸತ್ ಸದಸ್ಯರೊಬ್ಬರು ದೇಶದಲ್ಲಿರುವ 44.72 ಕೋಟಿ ಅನಕ್ಷರಸ್ಥರನ್ನು ಹೀಯಾಳಿಸಿದ್ದಾರೆ. ಕಳೆದ ನವೆಂಬರ್ 23ರ ಸಂವಿಧಾನ ದಿವಸದಂದು ಮಾತನಾಡುತ್ತಾ ಪ್ರಧಾನಮಂತ್ರಿಗಳು ಇದುವರೆವಿಗೂ 'ಹಕ್ಕು'ಗಳಿಗೆ ಒತ್ತು ನೀಡುತ್ತಾ ಬಂದಿದ್ದೇವೆ. ಇನ್ನುಮುಂದೆ ಕರ್ತವ್ಯಕ್ಕೆ ಆದ್ಯತೆ ನೀಡಬೇಕು ಎಂದು ಕರೆ ನೀಡಿದ್ದರು. ವಿತ್ತಮಂತ್ರಿಗಳು ತಮ್ಮ 2019-20 ರ ಬಜೆಟ್ ಭಾಷಣದಲ್ಲಿ ಇದೇ ಮಾತನ್ನು ಹೇಳಿದ್ದಾರೆ(ಪ್ಯಾರ 105). ಹಕ್ಕುಗಳು ಭಾರತೀಯ ಪರಂಪರೆಯಲ್ಲ ಎನ್ನುವಲ್ಲಿಯೂ ಕಾರ್ಮಿಕ ವರ್ಗವನ್ನು ಗುರಿಯಾಗಿಟ್ಟುಕೊಂಡಿರುವುದನ್ನು ಗುರುತಿಸುವುದು ನಮಗೆ ಕಷ್ಟವಾಗಬಾರದು.

ವೆಲ್ತ್ ಕ್ರಿಯೇಶನ್ನಿನ ಬಗ್ಗೆ, ವೆಲ್ತ್ ಕ್ರಿಯೇಟರುಗಳ ಬಗ್ಗೆ ಮಾತನಾಡುವ ಬಜೆಟ್ಟು-ಆರ್ಥಿಕ ಸಮೀಕ್ಷೆಯು ವೆಲ್ತ್‌ನ ವಿತರಣೆ ಬಗ್ಗೆ ಮಾತನಾಡುವುದಿಲ್ಲ. ಆಳುವ ವರ್ಗವು 'ಉತ್ಪಾದನೆ ಮೊದಲು: ನಂತರ ವಿತರಣೆ' ಎಂಬ ಸಂಹಿತೆಯನ್ನು ಪ್ರತಿಪಾದಿಸುತ್ತಿದೆ. ಇದರಿಂದ ಉಂಟಾಗುವ ವೆಲ್ತ್‌ನ ಕೇಂದ್ರೀಕರಣದ ದುಷ್ಪರಿಣಾಮಗಳ ಬಗ್ಗೆ ಸಮೀಕ್ಷೆ/ಬಜೆಟ್ಟಿನಲ್ಲಿ ಚರ್ಚೆಯಿಲ್ಲ. ದೇಶದಲ್ಲಿರುವ ಮೂರಂಕಿ ವೆಲ್ತ್ ಕ್ರಿಯೇಟರುಗಳ ಬಗ್ಗೆ ಮಾತನಾಡುವ ಬಜೆಟ್-ಆರ್ಥಿಕ ಸಮೀಕ್ಷೆಯು ಕೋಟಿಗಟ್ಟಲೆ ಇರುವ ದುಡಿಮೆಗಾರರ ಬಗ್ಗೆ ದಿವ್ಯ ಮೌನ ವಹಿಸಿವೆ.

ಸಂಪತ್ತಿನ ಮಹತ್ವದ ಬಗ್ಗೆ ಕೌಟಿಲ್ಯನ ಅರ್ಥಶಾಸ್ತ್ರ, ತಿರುಕುರಲ್ ಮುಂತಾದವುಗಳನ್ನು ಉಲ್ಲೇಖಿಸಿ ಭಾರತೀಯ ಪರಂಪರೆಯಲ್ಲಿ ವೆಲ್ತ್‌ನ ಉತ್ಪಾನದೆಯು ಬದುಕಿನ ಅಂತಮ ಗಂತವ್ಯವಾಗಿತ್ತು ಎನ್ನುವ ರೀತಿಯಲ್ಲಿ ಅದನ್ನು ಬಣ್ಣಿಸಲಾಗಿದೆ. ಆದರೆ ನಮ್ಮ ಪರಂಪರೆಯಲ್ಲಿ ಮತ್ತೊಂದು ಧಾರೆಯೂ ಇತ್ತು ಎಂಬುದನ್ನು ಅಮರ್ತ್ಯಸೇನ್ ಹೇಳುತ್ತಿದ್ದಾರೆ. ಬೃಹದಾರಣ್ಯಕ ಉಪನಿಷತ್ತಿನಲ್ಲಿ ಯಾಜ್ಞವಲ್ಕ್ಯನ ಪತ್ನಿ ಮೈತ್ರೇಯಿಯು 'ಸಂಪತ್ತಿನಿಂದ ನಮಗೆ ಬೇಕಾದುದನ್ನೆಲ್ಲ ಪಡೆಯಬಹುದೇನು? ಅದರಿಂದ ಅಮರತ್ವ ಸಾಧ್ಯವೇನು' ಎಂದು ಪ್ರಶ್ನೆ ಕೇಳಿದಾಗ ಋಷಿಯು 'ಅದರಿಂದ ನಿನಗೆ ಶ್ರೀಮಂತಿಕೆಯ ಬದುಕು ಸಾಧ್ಯವಾಗಬಹುದೇ ವಿನಾ ಅಮರತ್ವವು ಸಾಧ್ಯವಾಗುವುದಿಲ್ಲ' ಎಂದು ಉತ್ತರ ಹೇಳಿ ಸಂಪತ್ತಿನ ಸೀಮಿತ ಪಾತ್ರದ ಬಗ್ಗೆ ತಿಳಿಸುತ್ತಾನೆ. 'ವರಮಾನವೇ ನಮ್ಮ ಬದುಕಿನ ಒಟ್ಟು ಮೊತ್ತವಲ್ಲ' ಎಂದು ಮೆಹಬೂಬ್ ಉಲ್ ಹಕ್ 1990ರ ಮಾನವ ಅಭಿವೃದ್ಧಿ ವರದಿಯಲ್ಲಿ ಹೇಳಿದ್ದಾನೆ. ಸಂಪತ್ತು ಒಂದು ಸಾಧನವೇ ವಿನಾ ಸಾಧ್ಯವಲ್ಲ ಎಂಬುದನ್ನು ಅರಿಸ್ಟಾಟಲ್ ಘೋಷಿಸಿದ್ದಾನೆ. ಆರ್ಥಿಕ ಸಮೃದ್ಧತೆಯಲ್ಲಿ ಸಂಪತ್ತಿನಷ್ಟೇ ಆರೋಗ್ಯ, ಅಕ್ಷರ, ಆಹಾರ, ಆಶ್ರಯ ಮುಂತಾದವುಗಳ ಪಾತ್ರ ಮಹತ್ವದ್ದಾಗಿದೆ. ಇಂತಹ ಅಭಿವೃದ್ಧಿಯ ಅಭಿಜಾತ ಸದೃಶ ಸಂಗತಿಗಳನ್ನು ಮೂಲೆಗುಂಪು ಮಾಡಿ ವೆಲ್ತ್‌ನ ಗುಣಗಾನದಲ್ಲಿ ಸಮೀಕ್ಷೆಯು ಮುಳುಗಿ ಹೋಗಿದೆ. ಅತ್ಯಂತ ಸ್ಪಷ್ಟವಾಗಿ ಸಮೀಕ್ಷೆಯಲ್ಲಿ 'ಪ್ರೋ-ಬುಸಿನೆಸ್' ಬಗ್ಗೆ ಕರೆ ನಿಡಲಾಗಿದೆ. ಬಜೆಟ್ಟಿನಲ್ಲಿ ಇದಕ್ಕೆ ಕ್ರಿಯಾರೂಪ ನೀಡಲಾಗಿದೆ.

ಪ್ರಜಾಪ್ರಭುತ್ವ, ಕಾರ್ಮಿಕ ವರ್ಗ, ರೈತರು, ಮಹಿಳೆಯರು, ದಲಿತರು, ಆದಿವಾಸಿಗಳು ಇಲ್ಲಿ ಅಮುಖ್ಯರಾಗಿ ಇಂದು ವೆಲ್ತ್ ಕ್ರಿಯೇಟರುಗಳು, ಮಾರುಕಟ್ಟೆ ಶಕ್ತಿ, ಖಾಸಗಿವಲಯ ಮುಖ್ಯವಾಗಿ ಅವುಗಳನ್ನು ಇನ್ನಿಲ್ಲದಂತೆ ವೈಭವೀಕರಿಸಲಾಗಿದೆ. ಇದರಿಂದ ನಮ್ಮ ಆರ್ಥಿಕ ಕುಸಿತವು ಪರಿಹಾರವಾಗುವುದು ಸಾಧ್ಯವಿಲ್ಲ. ಇಂದು ಕೇಂದ್ರ ಸರ್ಕಾರವು ಬದಲಾಯಿಸುತ್ತಿರುವ ಆರ್ಥಿಕ ನೀತಿಗಳು ಉಂಟು ಮಾಡುವ ಮಾರಕ ಪರಿಣಾಮಗಳ ಬಗ್ಗೆ, ಭೂತಾಕಾರವಾದ ಅಸಮಾನತೆಯ ಬಗ್ಗೆ, ಕಾರ್ಮಿಕ ವರ್ಗದ ಶೋಷಣೆ ಬಗ್ಗೆ ನಾವು ಗಂಭೀರವಾಗಿ ಚಿಂತಿಸಬೇಕಾಗಿದೆ. ವೆಲ್ತ್‌ಗೆ ಪ್ರತಿಯಾಗಿ ದುಡಿಮೆಯನ್ನು-ಶ್ರಮಶಕ್ತಿಯನ್ನು ಗೌರವಿಸುವ ಕ್ರಮವನ್ನು ಬೆಳೆಸಬೇಕಾಗಿದೆ.



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ, ಸಿಫಿ. ಕಾಂ

ಭಾರತದಲ್ಲಿ ಟ್ರಂಪ್

ಮೋದಿ ಸರಕಾರದ ಅಡಿಯಾಳುತನದ ಪ್ರದರ್ಶನ

ಪ್ರಕಾಶ ಕಾರಟ್

ಈ ಟ್ರಂಪ್ ಭೇಟಿ, ಭಾರತವನ್ನು ಅಮೆರಿಕಾದ ಭೌಗೋಳಿಕ-ರಾಜಕೀಯ ಕಾರ್ಯವ್ಯೂಹಕ್ಕೆ ಸಂಪೂರ್ಣವಾಗಿ ಲಗತ್ತಿಸಿ ಮೋದಿ ಭಾರತದ ಎಲ್ಲ ಹಿತಾಸಕ್ತಿಗಳನ್ನು ಆ ಗುರಿ ಸಾಧನೆಗೆ ಅಡಿಯಾಳಾಗಿಸಿದ್ದನ್ನು ತೋರಿಸಿಕೊಟ್ಟಿದೆ. ಭೇಟಿಯ ಕೊನೆಯಲ್ಲಿ ಹೊರಡಿಸಿದ ಜಂಟಿ ಹೇಳಿಕೆಯಲ್ಲಿ ಇದು ಚೆನ್ನಾಗಿ ಬಿಂಬಿತವಾಗಿದೆ. ಅಮೆರಿಕಾದ ಪ್ರಾಥಮಿಕ ಗುರಿ ಭಾರತವನ್ನು ಒಂದು ನಂಬಿಕಸ್ಥ ವ್ಯೂಹಾತ್ಮಕ ಮತ್ತು ಮಿಲಿಟರಿ ಮಿತ್ರನಾಗಿ ಮಾಡುವುದು ಎಂಬುದು ಭಾರತ-ಅಮೆರಿಕ ಪರಮಾಣು ವ್ಯವಹಾರಕ್ಕೆ ಸಹಿ ಹಾಕಿದಂದಿನಿಂದಲೇ ಸ್ಪಷ್ಟವಾಗಿತ್ತು. ಅಮೆರಿಕಾಕ್ಕೆ ಎದುರಾಗಿ ಭಾರತದ ಹಿತಗಳಿಗೆ ಅತ್ಯಗತ್ಯವಾದ ಒಂದು ವ್ಯಾಪಾರ, ವಾಣಿಜ್ಯ, ದತ್ತಾಂಶ ಸ್ಥಳೀಯಕರಣ ಅಥವ ಬೇರೆ ಯಾವುದೇ ವಿಷಯದಲ್ಲಿ ಮಾತುಕತೆಗಳಿಗೆ ಮೋದಿ ಸರಕಾರಕ್ಕೆ ಯಾವುದೇ ಅವಕಾಶ ಉಳಿದಿಲ್ಲ.



ಅಮೆರಿಕ ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ರವರ ಭಾರತ ಭೇಟಿ ಇತ್ತೀಚಿನ ಸಮಯದಲ್ಲಿ ಯಾವುದೇ ಅಮೆರಿಕನ್ ಅಧ್ಯಕ್ಷರ ಭೇಟಿಯಂತಿರಲಿಲ್ಲ. ಇದೊಂದು ಅಧಿಕೃತ ಭೇಟಿಯಾದರೂ, ಅಹಮದಾಬಾದಿನ ಮೊಟೆರ ಕ್ರೀಡಾಂಗಣದಲ್ಲಿ 'ನಮಸ್ತೆ ಟ್ರಂಪ್' ಇವೆಂಟ್ ಈ ಭೇಟಿಯ ಪ್ರಧಾನ ಸಂಗತಿಯಾಗಿತ್ತು. ಇಲ್ಲಿ ನರೇಂದ್ರ ಮೋದಿ ಕಳೆದ ವರ್ಷ ಅಮೆರಿಕಾದ ಹ್ಯೂಸ್ಟನ್‌ನಲ್ಲಿ ನಡೆದ 'ಹೌಡಿ ಮೋದಿ'ಯ ಭಾರತೀಯ ಆವೃತ್ತಿಯನ್ನು ಪ್ರದರ್ಶಿಸಿದರು. ಆದರೆ ಈ ಪ್ರದರ್ಶನವನ್ನು ಕೇವಲ ಒಂದು ತಮಾಷೆ ಎಂದು ತಳ್ಳಿ ಹಾಕುವಂತಿಲ್ಲ. ಇದು ಮೋದಿಯ ಭಾರತ ಟ್ರಂಪ್‌ನ ಅಮೆರಿಕಾಕ್ಕೆ ಸಂಪೂರ್ಣ ನಿಷ್ಠೆಯನ್ನು- ತಾತ್ವಿಕವಾಗಿ, ರಾಜಕೀಯವಾಗಿ, ವ್ಯೂಹಾತ್ಮಕವಾಗಿ ಮತ್ತು ಸಾಮರಿಕವಾಗಿ- ಘೋಷಿಸಿರುವ ಪರಿ. ಹಿಂದೆಂದೂ ಬಲಪಂಥೀಯ ರಾಜಕೀಯ ಮತ್ತು ಸಿದ್ಧಾಂತ ಇಂದಿನಷ್ಟು ಭಾರತ-ಅಮೆರಿಕ ಸಂಬಂಧಗಳನ್ನು ಜೋಡಿಸುವ ಅಂಟು ಆಗಿರಲಿಲ್ಲ. ಮೋದಿ ಈ 'ನಮಸ್ತೆ ಟ್ರಂಪ್'ನ್ನು ನವಂಬರ್ ತಿಂಗಳ ಅಧ್ಯಕ್ಷೀಯ ಚುನಾವಣೆಗಳಲ್ಲಿ ತನ್ನ ಗೆಳೆಯ ಟ್ರಂಪ್‌ರವರ ಪ್ರಚಾರಕ್ಕೆಂದೇ ರೂಪಿಸಿದಂತಿದೆ.

ಈ ಟ್ರಂಪ್ ಭೇಟಿ, ಭಾರತವನ್ನು ಅಮೆರಿಕಾದ ಭೌಗೋಳಿಕ-ರಾಜಕೀಯ ಕಾರ್ಯವ್ಯೂಹಕ್ಕೆ ಸಂಪೂರ್ಣವಾಗಿ ಲಗತ್ತಿಸಿ ಮೋದಿ ಭಾರತದ ಎಲ್ಲ ಹಿತಾಸಕ್ತಿಗಳನ್ನು ಆ ಗುರಿ ಸಾಧನೆಗೆ ಅಡಿಯಾಳಾಗಿಸಿದ್ದನ್ನು ತೋರಿಸಿಕೊಟ್ಟಿದೆ. ಭೇಟಿಯ ಕೊನೆಯಲ್ಲಿ ಹೊರಡಿಸಿದ ಜಂಟಿ ಹೇಳಿಕೆಯಲ್ಲಿ ಇದು ಚೆನ್ನಾಗಿ ಬಿಂಬಿತವಾಗಿದೆ. 'ಸಮಗ್ರ ಭೌಗೋಳಿಕ-ವ್ಯೂಹಾತ್ಮಕ ಭಾಗೀದಾರಿಕೆ' ಎಂದು ಅದರಲ್ಲಿ ಪ್ರಕಟಿಸಿರುವಂತದ್ದು ಭಾರತವು ಅಮೆರಿಕ ಸಂಯುಕ್ತ ಸಂಸ್ಥಾನಗಳ ವ್ಯೂಹಾತ್ಮಕ, ರಕ್ಷಣಾ ಮತ್ತು ಭದ್ರತಾ ಹಿತಾಸಕ್ತಿಗಳೊಂದಿಗೆ ತನ್ನನ್ನು ಏಕೀಭವಿಸಿಕೊಂಡಿದೆ ಎಂಬ ಘೋಷಣೆಯಲ್ಲದೆ ಬೇರೇನೂ ಅಲ್ಲ. ಅಮರಿಕಾದ ಪ್ರಾಥಮಿಕ ಗುರಿ ಭಾರತವನ್ನು ಒಂದು ನಂಬಿಕಸ್ಥ ವ್ಯೂಹಾತ್ಮಕ ಮತ್ತು ಮಿಲಿಟರಿ ಮಿತ್ರನಾಗಿ ಮಾಡುವುದು ಎಂಬುದು ಭಾರತ-ಅಮೆರಿಕ ಪರಮಾಣು ವ್ಯವಹಾರಕ್ಕೆ ಸಹಿ ಹಾಕಿದಂದಿನಿಂದಲೇ ಸ್ಪಷ್ಟವಾಗಿತ್ತು. ಅಧ್ಯಕ್ಷ ಟ್ರಂಪ್ ತನ್ನ ಅಹಮದಾಬಾದ್ ಭಾಷಣದಲ್ಲಿ "ಅಮೆರಿಕ ಸಂಯುಕ್ತ ಸಂಸ್ಥಾನವು ಭಾರತದ ಪ್ರಧಾನ ರಕ್ಷಣಾ ಭಾಗೀದಾರನಾಗಬೇಕು ಎಂಬುದು ನನ್ನ ನಂಬಿಕೆ, ಆ ರೀತಿಯಲ್ಲಿ ಅದು ಕೆಲಸ ಮಾಡುತ್ತಿದೆ" ಎಂದರು. ಭಾರತ ಈಗಾಗಲೇ ಕಳೆದ ಒಂದು ದಶಕದಲ್ಲಿ ಅಮೆರಿಕಾದಿಂದ 15ರಿಂದ 18 ಬಿಲಿಯ ಡಾಲರುಗಳ ಶಸ್ತ್ರಾಸ್ತ್ರ ಮತ್ತು ರಕ್ಷಣಾ ಉಪಕರಣಗಳನ್ನು ಖರೀದಿಸಿದೆ. ಅಮೆರಿಕಾದೊಡನೆ ಭಾರತ ವ್ಯಾಪಾರದಲ್ಲಿ ಸರಿಯಾದ ರೀತಿಯಲ್ಲಿ ವ್ಯವಹರಿಸುತ್ತಿಲ್ಲ ಎಂಬ ಟ್ರಂಪ್ ಮಾತಿನ ಹಿಂದೆ ಇರುವುದು ಭಾರತ ಅಮೆರಿಕನ್ ಶಸ್ತ್ರಾಸ್ತ್ರ ಉತ್ಪಾದಕರಿಂದ ಹೆಚ್ಚೆಚ್ಚು ವೆಚ್ಚದಾಯಕ ಶಸ್ತ್ರಾಸ್ತ್ರಗಳನ್ನು ಖರೀದಿಸಬೇಕು ಎಂಬ ಒತ್ತಡವೇ. ಈ ಭೇಟಿ ಕಾಲದಲ್ಲಿ 3 ಬಿಲಿಯ ಡಾಲರುಗಳ ಮೌಲ್ಯದ 24 ಎಂಹೆಚ್60ಆರ್ ನಾವಿಕ ಹೆಲಿಕಾಪ್ಟರ್‌ಗಳನ್ನು ಮತ್ತು ಆರು ಅಪಾಚೆ ಹೆಲಿಕಾಪ್ಟರುಗಳನ್ನು ಖರೀದಿಸುವ ಒಪ್ಪಂದವನ್ನು ಪ್ರಕಟಿಸಲಾಯಿತು.

ಬುನಾದಿ ಮಿಲಿಟರಿ ಒಪ್ಪಂದಗಳು ಎನ್ನಲಾದ ಮೂರು ಒಪ್ಪಂದಗಳಲ್ಲಿ ಎರಡಕ್ಕೆ ಸಹಿ ಹಾಕಿದ ಮೇಲೆ ಮೂರನೇ ಒಪ್ಪಂದ, 'ಮೂಲ ವಿನಿಮಯ ಸಹಕಾರ ಒಪ್ಪಂದ' ಎಂಬುದನ್ನು ಬೇಗನೇ ಪೂರ್ಣಗೊಳಿಸಲಾಗುವುದು ಎಂದು ಜಂಟಿ ಹೇಳಿಕೆ ಸೂಚಿಸುತ್ತದೆ. ಈ ತ್ರಿವಳಿ ಒಪ್ಪಂದಗಳೊಂದಿಗೆ, ಭಾರತದ ಸಶಸ್ತ್ರ ಪಡೆಗಳು 'ಅಂತರ್ನಿರ್ವಹಣೆ' ಮತ್ತು ಜಂಟಿ ಚಟುವಟಿಕೆಗಳ ರೂಪದಲ್ಲಿ ಏಷ್ಯಾದಲ್ಲಿ ಅಮೆರಿಕಾದ ಮಿತ್ರರುಗಳ, ಅಂದರೆ ಜಪಾನ್ ಮತ್ತು ದಕ್ಷಿಣ ಕೊರಿಯಾದ ಸಶಸ್ತ್ರ ಪಡೆಗಳಾಗಿ ಬಿಡುತ್ತವೆ.

ಈ ಜಂಟಿ ಹೇಳಿಕೆ, ಮೋದಿ ಸರಕಾರ ಅಮೆರಿಕ ಸಂಯುಕ್ತ ಸಂಸ್ಥಾನಗಳ "ಭಾರತ-ಶಾಂತಸಾಗರ ಕಾರ್ಯವ್ಯೂಹ"ದೊಂದಿಗೆ ತನ್ನನ್ನು ಸಂಪೂರ್ಣವಾಗಿ ಹೊಂದಿಸಿಕೊಂಡಿದೆ ಎಂಬುದನ್ನು ಬಿಂಬಿಸುತ್ತದೆ. ಅದು ಅಮೆರಿಕ-ಭಾರತ-ಜಪಾನ್ ತ್ರಿಪಕ್ಷೀಯ ಶೃಂಗ ಮತ್ತು ಅಮೆರಿಕ, ಜಪಾನ್, ಆಸ್ಟ್ರೇಲಿಯ ಮತ್ತು ಭಾರತ ಇರುವ ಚತುರ್ಪಕ್ಷೀಯ ವೇದಿಕೆಯನ್ನು ಬಲಪಡಿಸುವ ಮಾತಾಡುತ್ತದೆ.

ಆಂತರಿಕ ಭದ್ರತಾ ರಂಗದಲ್ಲಿ ಭಾರತ ಅಮೆರಿಕಾದ ಆಂತರಿಕ ಭದ್ರತಾ ಇಲಾಖೆಯೊಂದಿಗೆ ಸಹಕಾರವನ್ನು ಬೆಳೆಸುತ್ತದೆ, ಅಂದರೆ ನಾವು ಅಮೆರಿಕನ್ ಭದ್ರತಾ ಏಜೆಂಸಿಗಳು ಭಾರತದ ಆಂತರಿಕ ಭದ್ರತಾ ವ್ಯವಹಾರಗಳಲ್ಲಿ ಹೆಚ್ಚಿನ ಪಾತ್ರವಹಿಸುವುದನ್ನು ನಿರೀಕ್ಷಿಸಬಹುದು.

ಈಗ ಭಾರತ-ಅಮೆರಿಕಾ ಸಂಬಂಧಗಳನ್ನು ಬಾಧಿಸುತ್ತಿರುವ್ ಪ್ರಶ್ನೆಯೆಂದರೆ, ವ್ಯಾಪಾರ ಸಂಬಂಧಗಳು. ಭಾರತೀಯ ಸರಕುಗಳ ಮೇಲೆ ಹೆಚ್ಚಿನ ಸುಂಕಗಳನ್ನು ವಿಧಿಸುವುದು, ಭಾರತದ 'ಸಾಮಾನ್ಯೀಕೃತ ವ್ಯಾಪಾರ ಆದ್ಯತೆಗಳ ವ್ಯವಸ್ಥೆ'ಯನ್ನು ಹಿಂತೆಗೆದುಕೊಳ್ಳುವುದು ಮುಂತಾದ ಟ್ರಂಪ್ ಆಡಳಿತದ ವೈಷಮ್ಯಭರಿತ ನಡೆಗಳ ನಂತರ, ಅಮೆರಿಕ ಡಬ್ಲ್ಯುಟಿಒ ದಲ್ಲಿ ಭಾರತ ಮತ್ತು ಇತರ ಅಭಿವೃದ್ಧಿ ಹೊಂದುತ್ತಿರುವ ದೇಶಗಳನ್ನು ಇನ್ನು ಮುಂದೆ ಅಭಿವೃದ್ಧಿ ಹೊಂದುತ್ತಿರುವ ದೇಶಗಳೆಂದು ವರ್ಗೀಕರಿಸಬಾರದು ಎಂದು ಹೇಳುವವರ ನೇತೃತ್ವವನ್ನು ವಹಿಸಿಕೊಂಡಿದೆ.

ಒಂದು ಸಮತ್ವಹೀನ ಇ-ವಾಣಿಜ್ಯ ಒಪ್ಪಂದಕ್ಕೆ ಸಹಿ ಹಾಕಲು ಭಾರತದ ಮೇಲೆ ಅಮೆರಿಕಾ ಒತ್ತಡ ಹೇರುತ್ತಿದೆ, ಮತ್ತು ವೈದ್ಯಕೀಯ ಉಪಕರಣಗಳ ಮೇಲೆ ಬೆಲೆ ನಿಯಂತ್ರಣ ಹಾಕುವ ಭಾರತದ ಧೋರಣೆಯನ್ನು ವಿರೋಧಿಸುತ್ತಿದೆ. ಇವೆಲ್ಲವನ್ನು ಕುರಿತಂತೆ ಭಾರತದ ಯಾವೊಂದೂ ನಿಲುವನ್ನು ಅಮೆರಿಕಾ ಒಪ್ಪುವಂತೆ ಮಾಡಲು ಸಾಧ್ಯವಾಗಿಲ್ಲ ಎಂಬುದು ಭೇಟಿ ಕಾಲದಲ್ಲಿನ ಹೇಳಿಕೆಗಳಿಂದ ಸ್ವಯಂವೇದ್ಯವಾಗುತ್ತದೆ. ಜಂಟಿ ಹೇಳಿಕೆ ಒಂದು ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಪ್ರಸ್ತಾವಿತ ಮೊದಲ ಹಂತದ ಬಗ್ಗೆ ಮಾತುಕತೆಗಳ ಬಗ್ಗೆಯಷ್ಟೇ ಹೇಳುತ್ತದೆ.



ವ್ಯಂಗ್ಯಚಿತ್ರ: ಮಂಜುಲ್, ಮುಂಬೈ ಮಿರರ್

ಅಮೆರಿಕಾಕ್ಕೆ ಎದುರಾಗಿ ಭಾರತದ ಹಿತಗಳಿಗೆ ಅತ್ಯಗತ್ಯವಾದ ಒಂದು ವ್ಯಾಪಾರ, ವಾಣಿಜ್ಯ, ದತ್ತಾಂಶ ಸ್ಥಳೀಯಕರಣ ಅಥವ ಬೇರೆ ಯಾವುದೇ ವಿಷಯದಲ್ಲಿ ಮಾತುಕತೆಗಳಿಗೆ ಮೋದಿ ಸರಕಾರಕ್ಕೆ ಯಾವುದೇ ಅವಕಾಶ ಉಳಿದಿಲ್ಲ.


ಭಾರತದ ವ್ಯೂಹಾತ್ಮಕ ಸ್ವಾಯತ್ತತೆ ಮತ್ತು ಒಂದು ಸ್ವತಂತ್ರ ವಿದೇಶಾಂಗ ಧೋರಣೆಯನ್ನು ಅನುಸರಿಸುವ ಸಾಮರ್ಥ್ಯವನ್ನು ತೀವ್ರವಾಗಿ ಸೀಮಿತಗೊಳಿಸುವಂತಹ ಒಂದು ಹಂತವನ್ನು ಭಾರತ-ಅಮೇರಿಕ ವ್ಯೂಹಾತ್ಮಕ ಸಂಬಂಧಗಳಲ್ಲಿ ತಲುಪಿಯಾಗಿದೆ. ಇತ್ತೀಚೆಗೆ, ಅಮೆರಿಕ ಇರಾನಿನ ಉನ್ನತ ಸೇನಾಧಿಕಾರಿ ಸುಲೆಮಾನ್‌ರ ಹತ್ಯೆ ಮಾಡಿದಾಗ ಭಾರತ ಅದನ್ನು ಖಂಡಿಸಲಿಲ್ಲ. ಈ ಮೊದಲು, ಇರಾನಿನಿಂದ ತೈಲ ಆಮದು ಮಾಡಿ ಕೊಳ್ಳಬಾರದು ಎಂದು ಆಗ್ರಹಿಸಿದಾಗ ಮೋದಿ ಸರಕಾರ ತಕ್ಷಣವೇ ಅದನ್ನು ಪಾಲಿಸಿತು. ಇದರ ಬದಲು ಈಗ ಭಾರತ ಅಮೆರಿಕಾದಿಂದ ತೈಲ ಮತ್ತು ಅನಿಲವನ್ನು ಖರೀದಿಸುವ ಒತ್ತಡಕ್ಕೆ ಒಳಗಾಗಿದೆ, ಮೋದಿ ಸರಕಾರ ಇದನ್ನೇ ಒಂದು ಸಾಧನೆಯಾಗಿ ಬಿಂಬಿಸಲು ಪ್ರಯತ್ನಿಸುತ್ತಿದೆ. ಇಸ್ರೇಲ್ ಮತ್ತು ಪ್ಯಾಲೆಸ್ತೀನ್ ನಡುವೆ ಸಂಪೂರ್ಣವಾಗಿ ಏಕಪಕ್ಷೀಯವಾದ ಶಾಂತಿಯ ಪ್ರಸ್ತಾವವನ್ನು ಭಾರತ ಟೀಕಿಸಲೂ ಇಲ್ಲ. ಈ ಪ್ರಸ್ತಾವದ ಪ್ರಕಾರ ಇಸ್ರೇಲ್ ಸುಮಾರಾಗಿ ಎಲ್ಲ ಆಕ್ರಮಿತ ಪ್ರದೇಶಗಳನ್ನು ಸ್ವಾಧೀನಕ್ಕೆ ಪಡೆಯಬಹುದು. ಆಘಾತಕಾರಿ ಸಂಗತಿಯೆಂದರೆ ವಿದೇಶಾಂಗ ವ್ಯವಹಾರಗಳ ಮಂತ್ರಾಲಯ ಇಸ್ರೇಲ್ ಮತ್ತು ಪ್ಯಾಲೆಸ್ತೀನ್‌ಗೆ ಈ ಟ್ರಂಪ್ ಶಾಂತಿ ಪ್ರಸ್ತಾವವನ್ನು ಪರಿಶೀಲಿಸಬೇಕು ಎಂದು ಹೇಳಿದೆ.




ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ಭಾರತ ಈ ರೀತಿಯಲ್ಲಿ ಒಂದು ಗಿರಾಕಿ ಸ್ಥಾನಮಾನಕ್ಕೆ ಇಳಿಸಲ್ಪಟ್ಟಿದ್ದರೂ, ಈ ದಿಕ್ಕಿನಲ್ಲಿ ಮೋದಿ ಇಡುವ ಪ್ರತಿಯೊಂದು ಹೆಜ್ಜೆಯನ್ನೂ ಭಾರತಕ್ಕೆ ಒಂದು ಮಹಾಮುನ್ನಡೆ ಎಂದು ಆಳುವ ವಲಯಗಳು ಮತ್ತು ಕಾರ್ಪೊರೇಟ್ ಮಾಧ್ಯಮಗಳು ಹಾಡಿ ಹೊಗಳುತ್ತಿರುವುದು ಈಗಿನ ಕಾಲಾವಧಿಯ ಲಕ್ಷಣ. ಟ್ರಂಪ್‌ಗೆ ಅಡಿಯಾಳುತನದ ಮೋದಿ ನಿಲುವು ಭಾರತಕ್ಕೆ ಮಾಡಿರುವ ಅನಾಹುತ ಅಪಾರ.

ಖೇಮ್‌ಚೊ ಯಾನೆ ನಮಸ್ತೆ ಟ್ರಂಪ್ ಗೋಡೆ –ವ್ಯಂಗ್ಯಚಿತ್ರಕಾರರು ಕಂಡಂತೆ




ವ್ಯಂಗ್ಯಚಿತ್ರ: ಪಿ.ಮಹಮ್ಮದ್



ಗರೀಬಿ ಹಟಾವೊ ವಾಲ್ ಬನಾವೊ
ಗುಜರಾತ್ ಮಾದರಿ

ಮಂಜುಲ್, ಫಸ್ಟ್ ಪೋಸ್ಟ್



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ, ಸಿಫಿ. ಕಾಂ

ವ್ಯಂಗ್ಯಚಿತ್ರ: ಅಲೋಕ್ ನಿರಂತರ್







ದಿಲ್ಲಿಯಲ್ಲಿ "ಗುಜರಾತ್ ಮಾದರಿ" ಧ್ವಂಸಕೃತ್ಯ:

ದೇಶದ ರಾಜಧಾನಿ ದಿಲ್ಲಿಯಲ್ಲಿ ಫೆಬ್ರುವರಿ 24 ರಿಂದ ನಡೆಯುತ್ತಿರುವ ಹಿಂಸಾಚಾರಗಳಲ್ಲಿ ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಪ್ರಾಣ ಕಳಕೊಂಡವರ ಸಂಖ್ಯೆ 42 ಕ್ಕೇರಿದೆ. ಸುಮಾರು 250 ಜನ ಗಾಯಗೊಂಡು ಆಸ್ಪತ್ರೆಗಳಲ್ಲಿದ್ದಾರೆ. ಸಾವಿರಾರು ಮಂದಿ ಮನೆಮಾರು ಮತ್ತು ಜೀವನಾಧಾರಗಳನ್ನು ಕಳಕೊಂಡಿದ್ದಾರೆ. ಭಾನುವಾರ, ಫೆಬ್ರುವರಿ 23ರಂದು, ಒಬ್ಬ ಬಿಜೆಪಿ ಮುಖಂಡ ಕಪಿಲ್ ಮಿಶ್ರ ವಿವಿಧೆಡೆಗಳಲ್ಲಿ ಸಿಎಎ ವಿರುದ್ಧ ಪ್ರತಿಭಟನೆ ನಡೆಸುತ್ತಿರುವವರನ್ನು ಬಲವಂತವಾಗಿ ಹೊರಹಾಕಬೇಕು ಎಂದು ಒಬ್ಬ ಹಿರಿಯ ಪೋಲೀಸ್ ಅಧಿಕಾರಿಯ ಸಮ್ಮುಖವೇ ಬಹಿರಂಗವಾಗಿಯೇ ಒಂದು ಕರೆ ನೀಡಿದರು. ದಿಲ್ಲಿ ಪೋಲೀಸ್ ಮತ್ತು ಬೇಹುಗಾರಿಕಾ ಸಂಸ್ಥೆಗಳ ಕೇಂದ್ರ ಗೃಹಮಂತ್ರಾಲಯದಡಿಯಲ್ಲಿರುವುದರಿಂದ ಕೇಂದ್ರ ಗೃಹಮಂತ್ರಿಗಳು ಕೂಡಲೇ ಮಧ್ಯಪ್ರವೇಶಿಸಬೇಕಿತ್ತು. ಆದರೆ ದೇಶದ ರಾಜಧಾನಿಯಲ್ಲಿ ಶಾಂತಿ ಕಾಪಾಡಬೇಕೆಂಬ ಅವರ ಮನವಿ ಬಂದದ್ದು ಒಂದೂವರೆ ದಿನಗಳ ನಂತರವೇ. ಪ್ರಧಾನ ಮಂತ್ರಿಗಳ ಮನವಿಗೆ ಮತ್ತೂ ಒಂದು ದಿನ ಕಾಯಬೇಕಾಗಿತ್ತು.

"ಶಾಂತಿಗಾಗಿ ನಿಮ್ಮ ಮಧ್ಯಪ್ರವೇಶ, ಕಳೆದೆರಡು ದಿನಗಳ ಘಟನೆಗಳು ಚುನಾವಣಾ ಫಲಿತಾಂಶಗಳಿಗೆ 'ಸೇಡು' ಎಂದು ಸಾರ್ವಜನಿಕರ ನಡುವೆ ಉಂಟಾಗಿರುವ ಸಂದೇಹಗಳನ್ನು ನಿವಾರಿಸುತ್ತದೆ. ಈ ಸಂದರ್ಭದಲ್ಲಿ ಕಪಿಲ್ ಮಿಶ್ರ ವಿರುದ್ಧ ಕ್ರಮ, ಜನಗಳಲ್ಲಿ, ತಾವು ಶಾಂತಿಗಾಗಿ ಮತ್ತು ಗಲಭೆಕೋರರ ವಿರುದ್ಧ ನಿಜವಾಗಿಯೂ ನಿಷ್ಪಕ್ಷಪಾತಪೂರ್ಣ ಕ್ರಮಗಳನ್ನು ಕೈಗೊಳ್ಳುತ್ತೀರಿ ಎಂಬ ವಿಶ್ವಾಸವನ್ನು ತರುತ್ತದೆ" ಎಂದು ಸಿಪಿಐ(ಎಂ) ಮುಖಂಡರಾದ ಬೃಂದಾ ಕಾರಟ್ ಮತ್ತು ಕೆ.ಎಂ. ತಿವಾರಿ ಗೃಹಮಂತ್ರಿಗಳಿಗೆ ಪತ್ರ ಬರೆದರು. ಆದರೆ ಬಹುಶಃ ಇಂತಹ ನಿಷ್ಪಕ್ಷಪಾದ ಕ್ರಮಗಳನ್ನು ಅವರಿಂದ ನಿರೀಕ್ಷಿಸುವಂತಿರಲಿಲ್ಲ.

ಈ ನಡುವೆ ಸಶಸ್ತ್ರ, ನೀತಿ–ನಿಯಮಗಳಿಲ್ಲದ ಗೂಂಡಾ ಪಡೆಗಳು ಮುಕ್ತವಾಗಿ, ಯಾವುದೇ ಅಡೆತಡೆಯಿಲ್ಲದೆ ಅಡ್ಡಾಡಲು ಭದ್ರತಾ ಪಡೆಗಳು ಬಿಟ್ಟಿವೆ, ಮಾತ್ರವಲ್ಲದೆ, ಕೆಲವೆಡೆಗಳಲ್ಲಿ ಅವೂ ಧ್ವಂಸ ಕೃತ್ಯಗಳಲ್ಲಿ ಶಾಮೀಲಾಗಿರುವುದು ಹಲವಾರು ವೀಡಿಯೋಗಳಲ್ಲಿ ಕಂಡು ಬಂದಿದೆ. ಇದರಿಂದಾಗಿಯೇ ಈ ಗಲಭೆಗಳಿಗೆ ದಿಲ್ಲಿ ಪೋಲಿಸರ ಮಂಜೂರಾತಿ ಇದೆ ಎಂದು ಫೆಬ್ರುವರಿ 26ರಂದು ಪತ್ರಿಕಾಗೋಷ್ಠಿಯೊಂದರಲ್ಲಿ ಸೀತಾರಾಂ ಯೆಚುರಿ ಹೇಳಿದರು. ಅಮಿತ್ ಷಾ ಗುಜರಾತ್ ಮಾದರಿಯನ್ನು ದಿಲ್ಲಿಯಲ್ಲಿ ತರಲು ಬಿಟ್ಟಿದ್ದಾರೆ ಎಂದು ಮುಂದುವರೆದು ಅವರು ಹೇಳಿದರು. ಈ ಎರಡೂ ಗಲಭೆಗಳ ವಿಧಾನಗಳಲ್ಲಿನ ಸಮಾನ ಅಂಶವೆಂದರೆ ಪೋಲಿಸರ ಶಾಮೀಲು.

ಇದರಿಂದಾಗಿಯೇ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸೇನೆಯನ್ನು ಕರೆಯಬೇಕೆಂದು ಫೆಬ್ರುವರಿ 26 ರಂದು ಆಗ್ರಹಿಸಿತು.

ಪೋಲೀಸರ ವಿಫಲತೆ ಎಷ್ಟು ಎದ್ದು ಕಾಣುತ್ತಿದೆಯೆಂದರೆ, ಸುಪ್ರಿಂ ಕೋರ್ಟ್ ಇಂದು ಗಲಭೆಗಳಿಗೆ ಸಂಬಂಧಪಟ್ಟಂತೆ, ಪೋಲಿಸರಲ್ಲಿ ವೃತ್ತಿಪರತೆ ಮತ್ತು ಸ್ವಾತಂತ್ರ್ಯದ ಕೊರತೆ ಇದೆ ಎಂದು ಟಿಪ್ಪಣಿ ಮಾಡಿದೆ. ದಿಲ್ಲಿ ಹೈಕೋರ್ಟ್ ಕಪಿಲ್ ಮಿಶ್ರ ಮತ್ತಿತರ ವಿಡಿಯೋಗಳನ್ನು ತೋರಿಸಿ ಇದನ್ನು ನೋಡಿದ್ದೀರಾ ಎಂದು ದಿಲ್ಲಿ ಪೋಲೀಸರನ್ನೇ ಕೇಳಬೇಕಾಗಿ ಬಂದಿದೆ. ಈ ಮೂಲಕ ಅವರ ಮೋಸ ಬಯಲಿಗೆ ಬಂದಿದೆ. ಇದರಿಂದ ಕುಪಿತಗೊಂಡ ಸರಕಾರ ದಿಲ್ಲಿ ಹೈಕೋರ್ಟ್ ನ್ಯಾಯಾಧೀಶರನ್ನು ಮಧ್ಯರಾತ್ರಿ ಆದೇಶದ ಮೂಲಕ ವರ್ಗಾವಣೆ ಮಾಡಿರುವುದು ಅದರ ಶಾಮೀಲನ್ನೂ ಸ್ಪಷ್ಟಗೊಳಿಸಿದೆ.

ಈಗ ಅದೇ ಹೆಸರು ಕಡಿಸಿಕೊಂಡಿರುವ ದಿಲ್ಲಿ ಪೋಳಿಸ್‌ನ ಇಬ್ಬರು ಈಗಾಗಲೇ ಪ್ರಶ್ನಾರ್ಹ ನಡವಳಿಕೆಯನ್ನು ಪ್ರದರ್ಶಿಸಿರುವ ಅಧಿಕಾರಿಗಳ ನೇತೃತ್ವದಲ್ಲಿಯೇ ಎರಡು ವಿಶೇಷ ತನಿಖಾ ತಂಡಗಳ ನೇಮಕದ ಮೂಲಕ ಸರಕಾರ 'ಕ್ಲೀನ್ ಚಿಟ್'ಗಳ ಹೊಸದೊಂದು ಪರ್ವವನ್ನು ಆರಂಭ ಮಾಡಲು ಮುಂದಾಗಿದೆ ಎಂಬ ಸಂದೇಹ ಉಂಟಾಗಿದೆ. ಆದ್ದರಿಂದಲೇ ಫೆಬ್ರುವರಿ 28ರಂದು ಸಿಪಿಐ(ಎಂ) ನ್ಯಾಯಾಂಗ ತನಿಖೆಗೆ ಆಗ್ರಹಿಸಿದೆ.

ಫೆಬ್ರುವರಿ 25

"ರಾಜಧಾನಿಯಲ್ಲಿ ಶಾಂತಿಯನ್ನು ಖಾತ್ರಿಪಡಿಸಲು ಒಂದು ನಿಷ್ಪಕ್ಷಪಾತೀ ಮತ್ತು ನ್ಯಾಯಯುತ ಮಧ್ಯಪ್ರವೇಶ ಈಗಿನ ಪ್ರಮುಖ ಆವಶ್ಯಕತೆ"

ದಿಲ್ಲಿ ಪೋಲೀಸ್ ಮತ್ತು ಬೇಹುಗಾರಿಕಾ ಸಂಸ್ಥೆಗಳ ಕೇಂದ್ರ ಗೃಹಮಂತ್ರಾಲಯದಡಿಯಲ್ಲಿರುವುದರಿಂದ ಕೇಂದ್ರ ಗೃಹಮಂತ್ರಿಗಳು ಕೂಡಲೇ ಮಧ್ಯಪ್ರವೇಶಿಸಬೇಕಿತ್ತು. ಆದರೆ ದೇಶದ ರಾಜಧಾನಿಯಲ್ಲಿ ಶಾಂತಿ ಕಾಪಾಡಬೇಕೆಂಬ ಅವರ ಮನವಿ ಬಂದದ್ದು ಒಂದೂವರೆ ದಿನಗಳ ನಂತರವೇ.

ಈ ಬಗ್ಗೆ ದಿಲ್ಲಿವಾಸಿಗಳ ನಿರಾಸೆಗೆ ದನಿ ನೀಡುತ್ತ ಸಿಪಿಐ(ಎಂ) ಪೊಲಿಟ್ ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಮತ್ತು ದಿಲ್ಲಿ ರಾಜ್ಯಸಮಿತಿಯ ಕಾರ್ಯದರ್ಶಿ ಕೆ.ಎಂ.ತಿವಾರಿ ಗೃಹಮಂತ್ರಿ ಅಮಿತ್ ಷಾರವರಿಗೆ ಫೆಬ್ರವರಿ 25ರಂದು ಪತ್ರ ಬರೆದು, ಕಪಿಲ್ ಮಿಶ್ರ ವಿರುದ್ಧ ಕ್ರಮ ಕೈಗೊಳ್ಳಬೇಕು ದ್ವೇಷ ಮತ್ತು ಹಿಂಸಾಚಾರವನ್ನು ಹರಡುವುದರಲ್ಲಿ ತೊಡಗಿರುವ ಎಲ್ಲರನ್ನೂ, ಅವರ ರಾಜಕೀಯ ಸಂಪರ್ಕಗಳು ಮತ್ತು ಬಣ್ಣ ಏನೇ ಇರಲಿ, ಬಂಧಿಸಬೇಕು ಎಂದು ಆಗ್ರಹಿಸಿದ್ದಾರೆ. ಇದು ಜನಗಳಲ್ಲಿ, ತಾವು ಶಾಂತಿಗಾಗಿ ಮತ್ತು ಗಲಭೆಕೋರರ ವಿರುದ್ಧ ನಿಜವಾಗಿಯೂ ನಿಷ್ಪಕ್ಷಪಾತಪೂರ್ಣ ಕ್ರಮಗಳನ್ನು ಕೈಗೊಳ್ಳುತ್ತೀರಿ ಎಂಬ ವಿಶ್ವಾಸವನ್ನು ತರುತ್ತದೆ ಎನ್ನುತ್ತ ಅವರು

ಪುಟ 12 ಕ್ಕೆ

ಫೆಬ್ರುವರಿ 26

ದಿಲ್ಲಿ ಗಲಭೆಗಳು: ಪೋಲೀಸ್ ವಿಫಲವಾಗಿದೆ, ಸೇನೆಯನ್ನು ಕರೆಸಿ

ಈಶಾನ್ಯ ದಿಲ್ಲಿಯನ್ನು ಆವರಿಸಿರುವ ಕೋಮುವಾದಿ ಹಿಂಸಾಚಾರದ ಬಗ್ಗೆ ಸಿಪಿಐ(ಎಂ) ಪೊಲಿಟ್ ಬ್ಯುರೊ ಆಳವಾದ ಕಳವಳ ಮತ್ತು ಆತಂಕ ವ್ಯಕ್ತಪಡಿಸಿದೆ. ಕೋಮುವಾದಿ ಘರ್ಷಣೆಗಳನ್ನು ಸೃಷ್ಟಿಸಲು ಹಟ ತೊಟ್ಟಂತಿರುವ ಗ್ಯಾಂಗ್‌ಗಳ ಹಲ್ಲೆಗಳಿಂದಾಗಿ 20 ಮಂದಿ ಪ್ರಾಣ ಕಳಕೊಂಡಿದ್ದಾರೆ, ನೂರಾರು ಮಂದಿ ಗಾಯಗೊಂಡಿದ್ದಾರೆ. ಸತ್ತವರಲ್ಲಿ ಮತ್ತು ಗಾಯಗೊಂಡವರಲ್ಲಿ ಬಹಳಷ್ಟು ಮಂದಿ ಗುಂಡಿನೇಟುಗಳಿಗೆ ಒಳಗಾಗಿದ್ದಾರೆ ಎಂಬುದು ಸಮಾಜಘಾತುಕ ಮತ್ತು ಕ್ರಿಮಿನಲ್ ಶಕ್ತಿಗಳ ಪಾತ್ರವನ್ನು ಸೂಚಿಸುತ್ತದೆ. ಅಂಗಡಿಗಳು, ಮಾರುಕಟ್ಟೆಗಳು ಮತ್ತು ಮನೆಗಳಿಗೆ ಬೆಂಕಿ ಹಚ್ಚಲಾಗಿದೆ, ಗಲಭೆಕೋರರು ಯಾವುದೇ ಶಿಕ್ಷೆಯ ಭೀತಿಯಿಲ್ಲದೆ ಬೆಂಕಿ ಹಚ್ಚುವದರಲ್ಲಿ ತೊಡಗಿದ್ದಾರೆ.

ಸೋಮವಾರ ಬೆಳಿಗ್ಯೆ(ಫೆಬ್ರುವರಿ 24)ಯಿಂದ ಹಲ್ಲೆಗಳು, ಹಿಂಸಾಚಾರಗಳು ನಡೆಯುತ್ತಿದ್ದರೂ, ಇದುವರೆಗೂ ಪೋಲೀಸರಿಗೆ ಪರಿಸ್ಥಿತಿಯನ್ನು ಹತೋಟಿಗೆ ತರಲು ಸಾಧ್ಯವಾಗಿಲ್ಲ. ಬದಲಿಗೆ, ಹಿಂಸಾಚಾರ ಹೊಸ ಪ್ರದೇಶಗಳಿಗೆ ಹರಡಿದೆ. ಪೋಲೀಸರ ಪಾತ್ರ ನಿಜಕ್ಕೂ ಆಘಾತಕಾರಿ. ಕೆಲವು ಸಂದರ್ಭಗಳಲ್ಲಿ, ಪೋಲೀಸರು ಮಧ್ಯಪ್ರವೇಶಿಸದೆ

ಪುಟ 12 ಕ್ಕೆ

ಫೆಬ್ರುವರಿ 27

ನ್ಯಾಯಮೂರ್ತಿ ಮುರಳೀಧರ ಅವರ ವರ್ಗಾವಣೆಯ ತರಾತುರಿಯ ಜಾರಿಯನ್ನು ಸದ್ಯಕ್ಕೆ ತಡೆದಿಡಬೇಕು

ದಿಲ್ಲಿ ಹೈಕೋರ್ಟಿನ ಅತ್ಯಂತ ಹಿರಿಯ ನ್ಯಾಯಾಧೀಶರುಗಳಲ್ಲಿ ಮೂರನೆಯ ಸ್ಥಾನದಲ್ಲಿರುವ ನ್ಯಾಯಮೂರ್ತಿ ಎಸ್.ಮುರಳೀಧರ ಆವರನ್ನು ಮಧ್ಯರಾತ್ರಿಯೇ ಪಂಜಾಬ್ ಮತ್ತು ಹರ್ಯಾಣ ಹೈಕೋರ್ಟಿಗೆ ವರ್ಗ ಮಾಡಿರುವ ಬಗ್ಗೆ ಸಿಪಿಐ(ಎಂ) ಪೊಲಿಟ್ ಬ್ಯುರೊ ಕಳವಳ ವ್ಯಕ್ತಪಡಿಸಿದೆ.

ಈ ವರ್ಗಾವಣೆ ಸುಪ್ರಿಂ ಕೋರ್ಟ್ ಕೊಲಿಜಿಯಂ ಶಿಫಾರಸಿನ ಒಂದು ಭಾಗವಾಗಿದೆ, ಇದನ್ನು ದಿಲ್ಲಿ ಹೈಕೋರ್ಟ್ ಬಾರ್ ಅಸೋಸಿಯೇಶನ್ ತರ್ಕಬದ್ಧ ನ್ಯಾಯಾಂಗ–ಆಡಳಿತಾತ್ಮಕ ಕಾರಣಗಳನ್ನು ಕೊಟ್ಟು ಪ್ರತಿಭಟಿಸಿದೆ. ಈಗ ಈ ವರ್ಗಾವಣೆಯನ್ನು ತರಾತುರಿಯಿಂದ ಜಾರಿಗೆ ತಂದಿರುವುದು ಫೆಬ್ರುವರಿ 25 ರ ರಾತ್ರಿ ಅನಾವರಣಗೊಂಡ ಸಂಗತಿಗೆ ಒಂದು ಆಯ್ದ ಪ್ರತಿಕ್ರಿಯೆಯಗಿ ಕಾಣುತ್ತದೆ ಎಂದು ಪೊಲಿಟ್ ಬ್ಯುರೊ ಅಭಿಪ್ರಾಯ ಪಟ್ಟಿದೆ. ಅದೇನೇ ಇರಲಿ, ನ್ಯಾಯಮೂರ್ತಿ ಮುರಳೀಧರ ಅವರ ನೇತೃತ್ವದ ಪೀಠ ದಿಲ್ಲಿ ಚುನಾವಣೆಗಳಲ್ಲಿ ಮತ್ತು ನಂತರ ಬಿಜೆಪಿಯ ಉನ್ನತ ಮುಖಂಡರ ದ್ವೇಷ ಭಾಷಣಗಳಿಗೆ ರಕ್ಷಣೆ ಕೊಡುವ ದಿಲ್ಲಿ ಪೋಲೀಸರ ಮೋಸವನ್ನು ಬಯಲಿಗೆ ತಂದಿರುವುದಂತೂ ವಾಸ್ತವ ಸಂಗತಿ.

ವಿಶ್ವಾಸಾರ್ಹತೆಯ ತೀವ್ರ ಕೊರತೆ ಉಂಟಾಗಿರುವ ಈ ದಿನಗಳಲ್ಲಿ, ದೇಶದ ನ್ಯಾಯಾಂಗ ವ್ಯವಸ್ಥೆಯಲ್ಲಿ ಜನಗಳ ವಿಶ್ವಾಸವನ್ನು ಬಲಪಡಿಸಲು ಈ ವರ್ಗಾವಣೆಯನ್ನು ಸದ್ಯಕ್ಕೆ ತಡೆಹಿಡಿಯಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಸರಕಾರವನ್ನು ಆಗ್ರಹಿಸಿದೆ.

ಫೆಬ್ರುವರಿ 28

ನ್ಯಾಯಾಂಗ ತನಿಖೆಯೇ ನಡೆಯಬೇಕು ಸಂದೇಹಾಸ್ಪದ ಪಾತ್ರ ವಹಿಸಿರುವ ದಿಲ್ಲಿ ಪೋಲೀಸ್‌ನಿಂದ 'ಕ್ಲೀನ್ ಚಿಟ್'ಗಳ ಸಂದೇಹವನ್ನು ನಿವಾರಿಸಬೇಕು"

ದೇಶದ ರಾಜಧಾನಿಯ ಕಾನೂನು ಮತ್ತು ವ್ಯವಸ್ಥೆಯ ಹೊಣೆಯಿರುವ ಕೇಂದ್ರ ಸರಕಾರ ಕೋಮುವಾದಿ ಹಿಂಸಾಚಾರವನ್ನು ನಿಭಾಯಿಸುತ್ತಿರುವ ರೀತಿಯ ಬಗ್ಗೆ ಸಿಪಿಐ(ಎಂ) ಪೊಲಿಟ್ ಬ್ಯುರೊ ತನ್ನ ಬಲವಾದ ಅಸಮ್ಮತಿಯನ್ನು ವ್ಯಕ್ತಪಡಿಸಿದೆ.

ನಿರ್ದಿಷ್ಟವಾಗಿ, ಕೋಮುವಾದಿ ಹಿಂಸಾಚಾರದ ತನಿಖೆಗೆ ನೇಮಿಸಿದ ಎರಡು ವಿಶೇಷ ತನಿಖಾ ತಂಡದ ಸಂಯೋಜನೆಯನ್ನು ಗಮನಿಸುತ್ತ ಪೊಲಿಟ್‌ಬ್ಯುರೊ, ಈ ಎರಡೂ ತಂಡಗಳ ನೇತೃತ್ವ ನೀಡಲಾಗಿರುವ ಡೆಪ್ಯುಟಿ ಕಮಿಶನರ್ ಹುದ್ದೆಯ ಅಧಿಕಾರಿಗಳು ' ಶಾಹೀನ್ ಬಾಗ್, ಜೆಎನ್‌ಯು ಮತ್ತು ಜಾಮಿಯ ಹಿಂಸಾಚಾರಗಳನ್ನು ನಿಭಾಯಿಸುವಲ್ಲಿ ವಹಿಸಿರುವ ಪಾತ್ರ ಬಗ್ಗೆ ಹಲವು ಪ್ರಶ್ನೆಗಳು ಎದ್ದಿವೆ ಎಂದು ನೆನಪಿಸಿದೆ. ಇವರಲ್ಲಿ ಒಬ್ಬರಂತೂ ಚುನಾವಣಾ ಆಯೋಗದ ಟೀಕೆಗೂ ಒಳಗಾಗಿರುವವರು.

ಹಿಂಸಾಚಾರವನ್ನು ಮುಂದಾಗಿ ತಡೆಯುವಲ್ಲಿ ದಿಲ್ಲಿ ಪೋಲೀಸ್‌ನ ಪಾತ್ರದ ಮುಂದೆ ಹಲವು ಪ್ರಶ್ನೆ ಚಿಹ್ನೆಗಳಿವೆ. ಈ ಹಿಂಸಾಚಾರದಲ್ಲಿ ಇದುವರೆಗೆ 38 ಮಂದಿಯ ಪ್ರಾಣ ಹೋಗಿವೆ. ನೂರಾರು ಜನ ಗಾಯಗೊಂಡಿದ್ದಾರೆ ಮತ್ತು ಸಾವಿರಾರು ಮಂದಿ ಮನೆಮಾರು ಮತ್ತು ಜೀವನಾಧಾರಗಳನ್ನು ಕಳಕೊಂಡಿದ್ದಾರೆ. ಈಗ ಈ ಹಿಂಸಾಚಾರ ಎಸಗಿದವರ ಕೃತ್ಯಗಳನ್ನು ಮುಚ್ಚಿ ಹಾಕುವ ಪ್ರಯತ್ನ ನಡೆದಿದೆ. ರಾಷ್ಟ್ರಿಯ ಭದ್ರತಾ ಸಲಹೆಗಾರ ಅಜಿತ್ ದೊವಾಲ್ ಹಿಂಸಾಚಾರವನ್ನು ಎದುರಿಸಬೇಕಾಗಿ ಬಂದವರೊಡನೆ ಮಾತಾಡುತ್ತ "ಆದದ್ದು ಆಗಿ ಹೋಯಿತು"(ಜೋ

ಪುಟ 12 ಕ್ಕೆ

ಇಡೀ ದಿನದ ಸಂವಾದದಲ್ಲಿ ಹೊಸ ತಲೆಮಾರಿನ ಸಿನೆಮಾದಲ್ಲಿ ತೊಡಗಿಸಿಕೊಂಡಿರುವ ಮತ್ತು ತೊಡಗಿಸಿಕೊಳ್ಳಬೇಕೆಂದಿರುವ ಹಲವು ಆಸಕ್ತ ಯುವಜನರು ಸಹಯಾನಿಗಳಾಗಿದ್ದು ಕನ್ನಡದಲ್ಲಿ ಹೊಸ ಸಿನೆಮಾ ಕಟ್ಟುವತ್ತ ಇದೊಂದು ಮಹತ್ವದ ಸಂವಾದವಾಗಿತ್ತು ಎನ್ನಬಹುದು. ಸಹಯಾನದ ಸಾಹಿತ್ಯೋತ್ಸವಗಳಲ್ಲೇ ಹಲವು ರೀತಿಯಲ್ಲಿ ವಿಶಿಷ್ಟವಾದದ್ದು ಮತ್ತು ಯಶಸ್ವಿಯಾದದ್ದು ಎಂದು ಸಹ ನಿಸ್ಸಂದೇಹವಾಗಿ ಹೇಳಬಹುದು.

ಸಹಯಾನ ಸಾಹಿತ್ಯೋತ್ಸವ 10 : "ಸಿನೆಮಾ : ಹೊಸ ತಲೆಮಾರು"

ಹೊಸ ಸಿನೆಮಾ ಕಟ್ಟುವತ್ತ ಮಹತ್ವದ ಸಂವಾದ



ಉದ್ಘಾಟನೆ

ವಸಂತರಾಜ ಎನ್.ಕೆ.

"ಭಾರತದಲ್ಲಿ ಸಿನೆಮಾವು ಕಂಪೆನಿ ನಾಟಕಗಳ ಮುಂದುವರಿಕೆಯಾದ ಸಾಮಾಜಿಕ ಬೋಧನೆ ಹಾಗು ರಂಜನೆಯ ಮಾಧ್ಯಮವಾಗಿ ಬೆಳೆದಿದೆ. ವಸಾಹತುಶಾಹಿ ವಿರೋಧಿ ಹೋರಾಟದ ಕಾಲದಲ್ಲಿ ಹುಟ್ಟಿ ಬೆಳೆದ ಮಾಧ್ಯಮವಾಗಿ, ಅದು ನಮ್ಮ ಸಮಾಜದ ಸಾಂಪ್ರದಾಯಿಕತೆ, ಸುಧಾರಣೆ, ಬದಲಾವಣೆಗಳ ಆತಂಕ, ಹುಮ್ಮಸ್ಸುಗಳನ್ನು ಪ್ರಸ್ತುತಪಡಿಸುವ ಸಮೂಹ ಮಾಧ್ಯಮವಾಗಿರುವುದೂ ಸಹಜವಾಗಿದೆ. ಹಾಗಾಗಿ, ಸಾಮಾಜಿಕತೆಯ ದೃಷ್ಟಿಯಲ್ಲಿ ಸಿನೆಮಾವು ಸಾಮಾಜಿಕ ಸಂಗತಿಗಳ ಒಳಭಾವವನ್ನು, ಕತ್ತಲೆಯ ಥಿಯೇಟರಲ್ಲಿ–ಬೆಳಕಿನ ಪರದೆಯ ಮೇಲೆ ಸಾರ್ವಜನಿಕವಾಗಿಯೂ, ವ್ಯಕ್ತಿನಿಷ್ಠವಾಗಿಯೂ ಒಟ್ಟಿಗೆ ಅನುಭವಿಸುವ ಪ್ರಭಾವಶಾಲಿ ಮಾಧ್ಯಮವಾಗಿ ಹೆಚ್ಚು ಜನಾನುರಾಗಿ.ಬೇರೆ ಯಾವ ಕಲಾಪ್ರಕಾರಗಳಲ್ಲೂ ತೋಡಿಕೊಳ್ಳಲಾಗದ ಮನೋಸಂಘರ್ಷಗಳ ಅಭಿವ್ಯಕ್ತಿ ಕಲೆಯಾಗಿ ಹೊಸ ಪ್ರಕಾರವಾಗಿಯೂ ಸಿನೆಮಾ ಕಟ್ಟಿಕೊಳ್ಳತೊಡಗಿತು. ಸ್ವಾತಂತ್ರ್ಯಪೂರ್ವದ ಸಾಮೂಹಿಕ ಬೋಧನೆ–ರಂಜನೆಯ ಮಾಧ್ಯಮವಾಗಿಯೂ, ಮನುಷ್ಯರ ಆಳದಲ್ಲಿ ಹುದುಗಿರುವ ರಾಗಭಾವಗಳ ಅಭಿವ್ಯಕ್ತಿಯ ಕಲಾ ಮಾಧ್ಯಮವಾಗಿಯೂ, ಸಿನೆಮಾ 21ನೇ ಶತಮಾನದಲ್ಲಿ ನಮ್ಮ ಮುಂದೆ ಇದೆ.



ಅಭಯ ಸಿಂಹ

21ನೇ ಶತಮಾನದ ಯುವ ತಲೆಮಾರಿಗೆ, ಸಿನೆಮಾ ಬೆಳೆದು ಬಂದ ಈ ಹಾದಿಯ ಅರಿವು ಸಾಮಾಜಿಕ ಆಚರಣೆಗಳ ಭಾಗವಾಗಿಯಾಗಲೀ, ಸಾಮಾನ್ಯ ಶೈಕ್ಷಣಿಕ ಪದ್ಧತಿಯ ಮೂಲಕವಾಗಿಯಾಗಲೀ ದಕ್ಕಿಲ್ಲ.ಹೊಸ ಕಾಲದ ತಳಮಳಗಳ ಅಭಿವ್ಯಕ್ತಿಗೆ ಯತ್ನಿಸುತ್ತಿರುವ ಯುವ ತಲೆಮಾರಿಗೆ, ಸಿನೆಮಾ ತಂತ್ರಜ್ಞಾನ ಕೈಗೆಟಕುವಷ್ಟು ಹತ್ತಿರ ಬಂದಿದೆ; ಅದರೆ, ಅದರ ಸಾಮಾಜಿಕ, ಕಲಾ ಆಯಾಮಗಳ ಜ್ಞಾನವು ಸಹಜವಾಗಿ ದೊರೆಯುತ್ತಿಲ್ಲ.

ಈ ಸನ್ನಿವೇಶದಲ್ಲಿ ಕನ್ನಡದ ಯುವ ತಲೆಮಾರಿನ, ಸಿನೆಮಾ ನಿರ್ಮಾಪಕರು ಹಾಗು ಪ್ರೇಕ್ಷಕರು ಮುಖಾಮುಖಿಯಾಗಿ ತಮ್ಮ ಸಿನೆಮಾ ಕಲೆಯ ಅರಿವನ್ನು ಬಿಚ್ಚಿಟ್ಟುಕೊಂಡು ಚರ್ಚಿಸುವ ಅವಶ್ಯಕತೆ ಇದೆ– ಆ ಮೂಲಕ, ಸಿನೆಮಾ ಕಲೆ ಹಾಗು ಕಲಾ ಮೀಮಾಂಸೆಯ ಅರಿವುಗಳನ್ನು ವಿಸ್ತರಿಸಿಕೊಳ್ಳಬೇಕಾಗಿದೆ."

'ಸಿನೆಮಾ ಎಂದರೆ ಏನು?'

ಇದು ಈ ವರ್ಷದ 'ಸಿನೆಮಾ: ಹೊಸ ತಲೆಮಾರು' ಸಹಯಾನದ 10ನೇ ವಾರ್ಷಿಕ ಸಾಹಿತ್ಯೋತ್ಸವದ ಸಂವಾದದ ಉದಾತ್ತ ಆಶಯವಾಗಿತ್ತು. ಈ ಸಂವಾದವನ್ನು ಫೆಬ್ರವರಿ 9ರಂದು ಕೆರೆಕೋಣದ ಆಪ್ತ ಸಹಯಾನ ಸಭಾಂಗಣದಲ್ಲಿ ಒಂದು ಚಿತ್ರವನ್ನು ತೋರಿಸಲು ಪ್ರೊಜೆಕ್ಟರಿನ ರಿಮೋಟ್ ಕ್ಲಿಕ್ಕಿಸುವ ಮೂಲಕ ಖ್ಯಾತ ನಿರ್ದೇಶಕ ಎಂ.ಎಸ್. ಪ್ರಕಾಶ್ ಬಾಬು ಉದ್ಘಾಟಿಸಿದರು. ಸಿನೆಮಾವನ್ನು ಸಾಹಿತ್ಯದ ಅಥವಾ ಒಂದು ಕತೆ ಹೇಳುವ ಮಾಧ್ಯಮವಾಗಿ ಅಥವಾ ನಾಟಕದ ವಿಸ್ತರಣೆಯಾಗಿ ಬರಿಯ ಮನೋರಂಜನೆಯ ಭಾಗವಾಗಿ ನೋಡುತ್ತಾ ಇದ್ದೇವೆ. ಆದರೆ ಸಿನೆಮಾ ದೃಶ್ಯ ಮತ್ತು ಶಬ್ದಗಳಿಂದ ಕಟ್ಟಿಕೊಳ್ಳಬೇಕಾದ ತನ್ನದೇ ಆದ ಭಾಷೆ ಇರುವ ಹಲವು ಸಾಧ್ಯತೆಗಳನ್ನು ಹೊಂದಿರುವ ಕಲಾ ಮಾಧ್ಯಮ. ನಮ್ಮ ದೇಶದಲ್ಲಿ ಈ ನಿಟ್ಟಿನಲ್ಲಿ ಅನ್ವೇಷಣೆ ನಡೆದಿಲ್ಲ. ನಡೆಯಬೇಕಾಗಿದೆ. ತಂತ್ರಜ್ಞಾನ ಮತ್ತು ಸಿನೆಮಾದ ಸಾಧ್ಯತೆಗಳು ಬೆಳೆದಂತೆ ನಾವು ಸೂಕ್ಷ್ಮತೆಯನ್ನು ಕಳೆದುಕೊಳ್ಳುತ್ತಿದ್ದೇವೆ, ಎಂದು ಪ್ರಕಾಶ್ ಬಾಬು ಅವರು ಉದ್ಘಾಟನಾ ಭಾಷಣದಲ್ಲಿ ಹೇಳಿದರು. 'ಸಿನೆಮಾ ಒಂದು ಕಿಟಕಿಯ ಹಂಗೆ' ಎಂದು 1931 ರ 'ಮೊಸೆಸ್ಡ್' ಎಂಬ ಒಂದು ಸಿನೆಮಾದ ಉದಾಹರಣೆಯೊಂದಿಗೆ ಅವರು ವಿವರಿಸಿದರು.

'ಸಿನೆಮಾ ಎಂದರೆ ಏನು?' ಎಂಬ ಪ್ರಶ್ನೆ ಹಾಕಿಕೊಂಡು ಅದನ್ನು ಹಲವು ಬಗೆಯಲ್ಲಿ ಉತ್ತರಿಸಲು ಪ್ರಯತ್ನಿಸುವ ಮೂಲಕ ದಿನದ ಸಂವಾದದ ಆಶಯ ನುಡಿದವರು ಸಿನೆಮಾ ಚಳುವಳಿಯಲ್ಲಿ ಸಕ್ರಿಯರಾಗಿರುವ ಅಧ್ಯಾಪಕ ಪ್ರದೀಪ ಕೆಂಚನೂರು. ಸಿನೆಮಾ ಪ್ರಕೃತಿ ಇದ್ದ ಹಾಗೆ, ನೂರು ವರ್ಷಗಳಲ್ಲಿ ಅದು ವಿಕಾಸ ಆಗಿರುವ ರೀತಿಯಲ್ಲಿ ಬಹು ರೂಪಿಯಾಗಿದ್ದು ಬಹು ಸಾಧ್ಯತೆಗಳನ್ನು ಹೊಂದಿದೆ. ಪ್ರಕೃತಿಯ ವೈವಿಧ್ಯತೆಯಂತೆ ಸಿನೆಮಾ ಸಹ ವೈವಿಧ್ಯಮಯ. ಒಬ್ಬೊಬ್ಬ ನಿರ್ದೇಶಕನ ಸಿನೆಮಾಗಳದ್ದು ಒಂದೊಂದು ಲೋಕ. ಸಿನೆಮಾ ಮನುಷ್ಯ–ಮನುಷ್ಯರ ಮತ್ತು ಸುತ್ತಲಿನ ಪರಿಸರದೊಂದಿಗಿನ ಸಂಬಂಧ ತಿಳಿದುಕೊಳ್ಳುವ ಪ್ರಯತ್ನ.ಜಗತ್ತಿನ ಯಾವುದೋ ಮನುಷ್ಯನ ಜತೆ ಯಾವುದು ಕನೆಕ್ಟ್ ಕೊಡುತ್ತದೋ ಅದೇ ಸಿನೆಮಾ, ಎಂದು ಅವರು ಸಿನೆಮಾವನ್ನು

ಪುಟ 10 ಕ್ಕೆ



ಸಿನೆಮಾತು...ನೆನಪಿನಲ್ಲಿ ಉಳಿದದ್ದು

ಸಿನೆಮಾ ಯಾವುದೇ ವಾಹನದಲ್ಲಿ ಹೋಗುವಾಗ ನಮ್ಮ ಸುತ್ತಲಿನ ನೋಟ ತೋರಿಸುವ ಕಿಟಕಿ ಇದ್ದ ಹಂಗೆ..ಜೀವನಕ್ಕಿರುವ ಕಿಟಕಿ..ಬೇಂದೆಯವರು ಸಾಧನಕೇರಿಯನ್ನೇ ತಮ್ಮ ವ್ಯಾಪ್ತಿಯಾಗಿ ಮಾಡಿಕೊಂಡು ಹೆಚ್ಚೆಚ್ಚು ಆಳಕ್ಕೆ ಇಳಿದಂತೆ, ಒಂದು ಒಳ್ಳೆಯ ಸಿನೆಮಾ ವ್ಯಾಪ್ತಿ ಕಡಿಮೆ ಮಾಡಿಕೊಂಡು ಆಳಕ್ಕೆ ಇಳಿಯಬೇಕು.

– ಪ್ರಕಾಶ ಬಾಬು, ಉದ್ಘಾಟನೆಯಲ್ಲಿ

ಸಿನೆಮಾ 'ಅರ್ಥ ಆಗಬೇಕಂತಿಲ್ಲ'. ಜೀವನದಂತೆ, ಅದೂ ಯಾವಾಗಲೂ ಪೂರ್ತಿ ಅರ್ಥವಾಗುವುದಿಲ್ಲ..ಒಳ್ಳೆಯ ಸಿನೆಮಾ 'ಶೂ ಒಳಗಿರುವ ಕಲ್ಲು' ಇದ್ದಂತೆ, ಒಂದು ಸದಾ ಕಾಡುವ ಅನುಭವ.

– ಪ್ರದೀಪ ಕೆಂಚನೂರು, ಆಶಯ ಮಾತು

ಬಂಧುತ್ವ ಇಲ್ಲದ ಹಿಂದುತ್ವ, ಸೌಹಾರ್ದತೆಯಿಲ್ಲದ ಬಂಧುತ್ವ ಅರ್ಥಹೀನ

– ಅಮ್ಮೆಂಬಳ ಆನಂದ, ಹಿರಿಯ ಪತ್ರಕರ್ತ

ಆರ್.ವಿ. ಅವರ ಕೃತಿಗಳಲ್ಲಿ ಸಿನೆಮಾ, ರೈಲು, ರಸ್ತೆ ಗಳನ್ನು ಪ್ರತಿಮೆಗಳಾಗಿಸಿ ಆಧುನಿಕತೆಯ ನಕಾರಾತ್ಮಕ ಚಿತ್ರಣ ಬರುವುದಿಲ್ಲ. ಅವರ ಕೃತಿಗಳಲ್ಲಿ ಶಾಲೆ, ಸಾಕ್ಷರತೆ, ಸಂಘಟನೆ ಇತ್ಯಾದಿಗಳ ರೂಪದಲ್ಲಿ ಬರುವುದು ಸಕಾರಾತ್ಮಕ ಆಧುನಿಕತೆ. ಆಧುನಿಕತೆಗೆ ವಿರೋಧವಾಗಿರುವುದು ಜಾತಿ, ಧರ್ಮ ಇತ್ಯಾದಿ. ಅವರ ಪದ್ಯದ ತುಣುಕೊಂದು ಹೀಗಿದೆ:

ಇಲ್ಲಿ ದಿನಾ ಬೆಳಗಾದರೆ
ಧರ್ಮ ಹುಂಜವಾಗುತ್ತದೆ
ಮತ್ತದರ ಕಾಲಿಗೆ
ಕತ್ತಿ ಕಟ್ಟಿರುತ್ತಾರೆ

ಈ ಹುಂಜಕ್ಕೆ 'ಪ್ರೀತಿಯ ಕಾಳು' ಹಾಕುವ ಕೆಲಸ ಮಾಡಿದವರು ಆರ್.ವಿ.

– ಡಾ.ಎಂ.ಜಿ.ಹೆಗಡೆ

ಸಿನೆಮಾ ಕಳೆದ 110 ವರ್ಷಗಳಲ್ಲಿ ರಾಷ್ಟ್ರ ಕಟ್ಟುವ ಯಜಮಾನಿಕೆಯ ಕಲ್ಪನೆಯನ್ನು ಬಿತುವುದರಿಂದ ಆರಂಭವಾಗಿ ಡಿಜಿಟಲ್ ಸಿನೆಮಾದ ವರೆಗೆ ನಾಲ್ಕು ಹಂತಗಳಲ್ಲಿ ಮಹತ್ವದ ಬದಲಾವಣೆಗಳೊಂದಿಗೆ ವಿಕಾಸವಾಗಿದೆ. ಅದರ ಕಲಾಮೀಮಾಂಸೆ ಬದಲಾಗುತ್ತಾ ಬಂದಿದೆ. ಯಜಮಾನಿಕೆಯ ಮ್ಯಾನಿಪುಲೇಟ್ ಮಾಡುವ ಸಾಧನವಾಗಿ ಅದು ಮುಂದುವರೆದಂತೆ, ಪ್ರಜಾಸತ್ತೀಕರಣ ಸಹ ಆಗ್ತಾ ಬಂದಿದೆ. ಪ್ರತಿ ಹಂತದಲ್ಲಿ ಪ್ರತಿರೋಧದ ಹೊಸ ಸಾಧ್ಯತೆಗಳು ಸಹ ಹುಟ್ಟಿಕೊಳ್ಳುತ್ತಾ ಬಂದಿವೆ. ಡಿಜಿಟಲ್ ಸಿನೆಮಾದ ಈಗಿನ ಹಂತ ಇದಕ್ಕೆ ಅಪವಾದವಾಗಲಿಕ್ಕಿಲ್ಲ.

– ಫಣಿರಾಜ್ ಕೆ., ಸರ್ವಾಧ್ಯಕ್ಷರ ಮಾತು

ಇಂದು ಅಭಿವ್ಯಕ್ತಿ ಅಸಾಧ್ಯ ಎಂಬ ತಲ್ಲಣ ಮಡುಗಟ್ಟಿದೆ. ಇಂಥ ಸಂದರ್ಭದಲ್ಲಿ ಸಿನೆಮಾ ಮಾತ್ರವಲ್ಲದೆ, ಯಾವುದೇ ಕಲೆ ತನ್ನ ಕಲಾತ್ಮಕ ತಾಂತ್ರಿಕತೆಯ ಬಗ್ಗೆ ತಲೆ ಕೆಡಿಸಿಕೊಳ್ಳಲು ಸಕಾಲವಲ್ಲ. ಕಲಾತ್ಮಕ ಬದ್ಧತೆಗಿಂತ ಸಾಮಾಜಿಕ ಬದ್ಧತೆಯೇ ವರ್ತಮಾನದ ಅಗತ್ಯವಾಗಿದೆ. ಎಲ್ಲ ಕಲಾ ಮಾಧ್ಯಮಗಳೂ ಸಹ ಈ ನಿಟ್ಟಿನಲ್ಲಿ ಕ್ರಿಯಾಶೀಲವಾದರೆ ಒಂದಿಷ್ಟು ಉಸಿರಾಡಬಹುದಾದ ಸಾಂಸ್ಕೃತಿಕ ವಾತಾವರಣ ಉಳಿಸಿಕೊಳ್ಳಲು ಸಾಧ್ಯ.

– ವಿನಯಾ ಒಕ್ಕುಂದ, ಸಮಾರೋಪ ಮಾತು

ಹೊಸ ಸಿನೆಮಾ ಕಟ್ಟುವತ್ತ ಮಹತ್ವದ ಸಂವಾದ........ ಪುಟ 9 ರಿಂದ



ಅನನ್ಯ

ಅರ್ಥೈಸಿದರು. ಅದನ್ನು ಹಲವು ದೇಶಗಳ ಹಲವು ನಿರ್ದೇಶಕರ ಹಲವು ಸಿನೆಮಾಗಳ ಉದಾಹರಣೆಗಳ ಮೂಲಕ ವಿವರಿಸಿದರು. ಸಿನೆಮಾ ಕಲಾಮಾಧ್ಯಮ ಆಗಿರುವಾಗಲೇ ತನ್ನ ಸುತ್ತಲಿನ ಪರಿಸರದ ಸಮಸ್ಯೆಗಳಿಗೆ ಸ್ಪಂದಿಸಬೇಕು ಎಂಬ ಸಾಮಾನ್ಯ ಅಭಿಪ್ರಾಯವನ್ನು ಒಪ್ಪಿಕೊಂಡ ಅವರು, ಆದರೆ ಅದರ ಆಶಯ ಕೃತಿಯ ದ್ರವ್ಯದ ಒಳಗಿನಿಂದಲೇ ಬರಬೇಕು ಎಂದರು. ಕನ್ನಡ ಸಿನೆಮಾ ಬರಿಯ ಮೈಸೂರು-ಬೆಂಗಳೂರು ಸಿನೆಮಾ ಆಗುತ್ತಿದೆ. ಕರ್ನಾಟಕದ ವೈವಿಧ್ಯತೆಯನ್ನು ಬಿಂಬಿಸುತ್ತಿಲ್ಲ ಎಂದು ಅವರು ಕನ್ನಡ ಸಿನೆಮಾದ ಕುರಿತು ಟಿಪ್ಪಣಿ ಮಾಡಿದರು.

ಡಾ. ಎಂ.ಜಿ.ಹೆಗಡೆ ಆರ್.ವಿ.ಭಂಡಾರಿ ಅವರ ಕಿರು ಆದರೆ ಪರಿಣಾಮಕಾರಿ ಪರಿಚಯವನ್ನಿತ್ತರು. ಹಲವು ದಶಕಗಳ ಕಾಲ ನಡೆದ 'ಜನಸೇವಕ'ದ ಸಂಪಾದಕರು ಮತ್ತು ದಿನಕರ ದೇಸಾಯಿ ಅವರ ನಿಕಟ ಸಹಚರರಾಗಿದ್ದ ಅಮ್ಮೆಂಬಳ ಆನಂದ ಕೆಲವು ಮಾತುಗಳನ್ನಾಡಿದರು.

ಕಲಾ ಮಾಧ್ಯಮವಾಗಿ ಸಿನೆಮಾದ ಹಲವು ಬಿಕ್ಕಟ್ಟುಗಳು

ಸಂಸ್ಕೃತಿ ಚಿಂತಕರಾದ ಸರ್ವಾಧ್ಯಕ್ಷ ಪ್ರೊ. ಕೆ. ಫಣಿರಾಜ್ ಉದ್ಘಾಟನಾ ಸಮಾರಂಭದಲ್ಲಿ ನಮ್ಮ ಜೀವನದ ಬಿಕ್ಕಟಿನಂತೆ ಸಿನೆಮಾ ಸಹ ಒಂದು ಕಲಾ ಮಾಧ್ಯಮವಾಗಿ ಹಲವು ಬಿಕ್ಕಟ್ಟುಗಳನ್ನು ಎದುರಿಸುತ್ತಿದೆ ಎಂದು ಹೇಳಿ ಮೂರು ಪ್ರಮುಖ ಬಿಕ್ಕಟ್ಟುಗಳ ಕುರಿತು ಮಾತನಾಡಿದರು. ಮೊದಲನೆಯದು ಸಿನೆಮಾಕ್ಕೆ ಒಂದು ಸಾಂಘಿಕ ಉತ್ಪಾದನಾ ಮಾಧ್ಯಮವಾಗಿ ಲಾಭ ಗಳಿಸಬೇಕಾಗುವ ಮತ್ತು ಅದಕ್ಕಾಗಿ ಹೆಚ್ಚೆಚ್ಚು ಜನರನ್ನು ತಲುಪುವ ಒತ್ತಡವಿರುತ್ತದೆ. ಹೆಚ್ಚೆಚ್ಚು ಜನರನ್ನು ತಲುಪಲು 'ಜನಪ್ರಿಯ'ವಾಗಿರಬೇಕಾಗುತ್ತದೆ. ಎಲ್ಲರಿಗೂ ಪ್ರಿಯವಾಗಬೇಕಾದಾಗ ಸತ್ಯವನ್ನು ಹೇಳಲು ಹಿಂಜರಿಯುವ ಸವಾಲು ಎದುರಾಗುತ್ತದೆ. ಎರಡನೆಯದಾಗಿ ಸಿನೆಮಾಕ್ಕೆ ಬಂಡವಾಳ ಬೇಕು. ಭಾರಿ ಬಂಡವಾಳ ಹಾಕುವವರ ಮರ್ಜಿಯ ಮೇಲೆ ಅವಲಂಬಿಸಿ ನಿರ್ದೇಶಕನ ಸತ್ಯವನ್ನು ಹೇಳುವ ಮತ್ತು ಕಲಾಮೀಮಾಂಸೆಯ ಆಯ್ಕೆಯ ಮೇಲೆ ತೀವ್ರ ಮಿತಿಗಳು ಹೇರಲ್ಪಡುತ್ತವೆ. ಮೂರನೆಯದಾಗಿ ಸಿನೆಮಾದಲ್ಲಿ ಇತರ ಎಲ್ಲಾ ಕಲಾಮಾಧ್ಯಮಗಳಿಗಿಂತ ಭಿನ್ನವಾಗಿರುವ ಪ್ರೇಕ್ಷಕರಿಗಿರುವ ವಿಶೇಷ ಸ್ಥಾನ. ಬೇರೆ ಕಲೆಗಳಲ್ಲಿ ಪ್ರೇಕ್ಷಕನಿಗಿರುವ ಸ್ಥಾನ ಕಲೆಯಿಂದ ಹೊರಗಿನದು. ಆದರೆ ಸಿನೆಮಾದಲ್ಲಿ ಪ್ರೇಕ್ಷಕ ಒಳಗೆ ಇರುತ್ತಾನೆ. ಪ್ರೇಕ್ಷಕನೊಂದಿಗೆ ಸಿನೆಮಾ ಪೂರ್ಣವಾಗುವುದು. ಸಿನೆಮಾದ ಬದಲಾಗುತ್ತಿರುವ ಬೆಳೆಯುತ್ತಿರುವ ಕಲಾಮೀಮಾಂಸೆ ಮತ್ತು ಪ್ರೇಕ್ಷಕನ ರಸಾಭಿಜ್ಞತೆಯ ನಡುವೆ ದೊಡ್ಡ ಕಂದಕವಿದೆ. 1970-80ರ ದಶಕದಲ್ಲಿ ದೇಶದಾದ್ಯಂತ ಮತ್ತು ಕರ್ನಾಟಕದಲ್ಲೂ ಸ್ವಲ್ಪ ಮಟ್ಟಿಗೆ ಗಟ್ಟಿಯಾಗಿ ಬೆಳೆದಿದ್ದ ಚಿತ್ರಸಮಾಜ (ಫಿಲಂ ಸೊಸೈಟಿ) ಚಳುವಳಿ ಆ ಮೇಲೆ ತಣ್ಣಗಾದ್ದರಿಂದ ಈ ಕಂದಕ ಈಗ ದೊಡ್ಡದಾಗಿದೆ. ಒಳ್ಳೆಯ ಸಿನಿಮಾ ತಯಾರಾಗುವುದಕ್ಕೂ ಒಳ್ಳೆಯ



ಟಿ.ಕೆ. ದಯಾನಂದ

ರಸಾಭಿಜ್ಞತೆ ಇರುವ ಪ್ರೇಕ್ಷಕ ವರ್ಗ ಇರುವುದಕ್ಕೂ ನೇರ ಮತ್ತು ಗಾಢವಾದ ಸಂಬಂಧವಿದೆ. ಇದು 1970-80ರ ದಶಕದಲ್ಲಿ ಬಂಗಾಳಿ, ಮಲಯಾಳಂ, ಮರಾಠಿ ಮತ್ತು ಕನ್ನಡದಲ್ಲಿ ಉತ್ತಮ ಸಿನೆಮಾ ತಯಾರಾಗಿದ್ದರ ವಿಶ್ಲೇಷಣೆ ಮಾಡಿದರೆ ತಿಳಿಯುತ್ತದೆ. ಕೇರಳದಲ್ಲಿ ಜಾನ್ ಅಬ್ರಹಾಂ 16ಎಂ.ಎಂ ಪ್ರೊಜೆಕ್ಟರ್ ನೊಂದಿಗೆ ಹಳ್ಳಿ ಹಳ್ಳಿಗೆ ಹೋಗಿ ಸಿನೆಮಾ ತೋರಿಸಿದ್ದರಿಂದ ಮತ್ತು ಚಿತ್ರಸಮಾಜ ಚಳುವಳಿ ಸತತವಾಗಿ ಸಕ್ರಿಯವಾಗಿದ್ದದ್ದರಿಂದ ಇಂದಿಗೂ ಮಲಯಾಳಂನಲ್ಲಿ ಒಳ್ಳೆಯ ಸಿನಿಮಾ ಬರುತ್ತಿದೆ. ಆದರೆ ಚಿತ್ರಸಮಾಜ ಚಳುವಳಿ ಸ್ಥಗಿತಗೊಂಡಿದ್ದರಿಂದ ಬಂಗಾಳಿ, ಕನ್ನಡ, ಮರಾಠಿ ಸಿನೆಮಾ ಗುಣಮಟ್ಟ ಕುಸಿದಿದೆ. ಚಿತ್ರಸಮಾಜ ಚಳುವಳಿಯನ್ನು ಮತ್ತೆ ಚಿಗುರಿಸಬೇಕು. ಇಂತಹ ಸಂವಾದಗಳು ಹೆಚ್ಚೆಚ್ಚಾಗಿ ನಡೆಯಬೇಕು ಎಂದು ಅವರು ಒತ್ತಿ ಹೇಳಿದರು.

ಸಿನೆಮಾದ ಸೌಂದರ್ಯ ಮೀಮಾಂಸೆ

'ಪಡ್ಡಾಯಿ', 'ಗುಬ್ಬಚ್ಚಿ', 'ಶಿಕಾರಿ'ಯಂತಹ ಗಮನಾರ್ಹ ಸಿನೆಮಾಗಳ ಮೂಲಕ ಹೊಸ ಭರವಸೆ ಮೂಡಿಸಿರುವ ಯುವ ನಿರ್ದೇಶಕ ಅಭಯಸಿಂಹ 'ಸಿನೆಮಾದ ಸೌಂದರ್ಯ ಮೀಮಾಂಸೆ'ಯ ಕುರಿತು ಸುದೀರ್ಘವಾಗಿ ವಿವರಿಸಿದರು. ಗ್ರಹಿಕೆ, ಅನುಭೂತಿ, ಅನುಭವ- ಇವು ಸಿನೆಮಾದ ಸೌಂದರ್ಯಮೀಮಾಂಸೆಯ ಮೂರು ಮುಖ್ಯ ಅಂಶಗಳು ಎಂದು ತಿಳಿಸಿ ಪ್ರತಿಯೊಂದರ ಹಲವು ಆಯಾಮಗಳನ್ನು ವಿವರಿಸಿದರು. ಸರಳ ಮತ್ತು ಗಾಢ ರೂಪಕ, ಸರಳವಾಗಿ ಆರಂಭವಾಗಿ ಗಾಢಗೊಳ್ಳುವ ರೂಪಕಗಳು; ತಾಂತ್ರಿಕ ಪರಿಷ್ಕರಣೆ ಅಥವಾ ಟೆಕ್ನಿಕಲ್ ಫಿನೆಸ್ (ಲೈಟಿಂಗ್, ಡಬ್ಬಿಂಗ್, ಸೌಂಡ್); ತಾಂತ್ರಿಕ ನಿರ್ಣಯಗಳು (ಕ್ಯಾಮರಾ ಚಲನೆ, ಕೋನ, ಫಾರ್ಮೆಟ್, ಬೆಳಕು, ಟೋನ್ ಇತ್ಯಾದಿ); ಪ್ರೇಕ್ಷಕನ ಪಾಲುಗೊಳ್ಳುವಿಕೆಯ ಹಲವು ತಂತ್ರಗಳು - ಎಂಗೇಜ್ ಮೆಂಟ್ ಮತ್ತು ಎಲಿನಿಯೇಶನ್ ಗಳ ಬಂಧದ ತಂತ್ರಗಳು, ರಿಪಿಟೀಶನ್ ಫೆಮಿಲಿರಿಯಾಟಿಯ ಅನುಭವ, ಅಸೋಸಿಯೇಶನಿನ ಸುಖ ಇತ್ಯಾದಿ - ಸಂತೋಷ, ಸವಾಲು, ಸಂವಾದಗಳು; ಇತ್ಯಾದಿ ಸೌಂದರ್ಯಮೀಮಾಂಸೆಯ ಆಯಾಮಗಳನ್ನು ಉತ್ತಮ ಉದಾಹರಣೆಗಳೊಂದಿಗೆ ಮನಮುಟ್ಟುವಂತೆ ವಿವರಿಸಿದರು. ಸಿನೆಮಾದಲ್ಲಿ ಬಳಸುವ ಸೌಂದರ್ಯಮೀಮಾಂಸೆ ನಾಟಕ, ಸಂಗೀತ, ಫೋಟೋ, ಪೈಂಟಿಂಗ್ ಮುಂತಾದವುಗಳಿಂದ ಎರವಲು ಪಡೆದದ್ದು. ಆದರೆ ಅವೆಲ್ಲವನ್ನು ಒಟ್ಟಿಗೆ ತರುವ (ಜಕ್ಸ್ ಟಾಪೋಸ್ ಮಾಡುವ) ರೀತಿ ಸಿನೆಮಾಕ್ಕೆ ವಿಶಿಷ್ಟವಾದದ್ದು. ಎರಡು ಶಾಟ್, ಸೀನ್, ಜಾಮೆಟ್ರಿ, ಕಾಸ್ಟೂಮ್, ಭಾಷೆ, ಶಬ್ದ ಮುಂತಾದವುಗಳನ್ನು ಒಟ್ಟಿಗೆ ತರುವ (ಜಕ್ಸ್ ಟಾಪೋಸ್ ಮಾಡುವ) ರೀತಿ ಸಿನೆಮಾದ ಸೌಂದರ್ಯಮೀಮಾಂಸೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಸಿನೆಮಾದ ಸೌಂದರ್ಯಮೀಮಾಂಸೆ (ಟಿವಿ, ಒಟಿಟಿ ಮುಂತಾದ) ಎಲ್ಲ ದೃಶ್ಯ ಮಾಧ್ಯಮಗಳಿಗೆ ಸಾಮಾನ್ಯವಾದ್ದು. ಕಾರುವ ಬೆಂಕಿ, ಗಾಢ ಕೆಂಪು ಬಣ್ಣ, ಕಿರುಚುವಿಕೆಯ ಹೈ ಡೆಸಿಬೆಲ್ ಶಬ್ದ ಮುಂತಾದವುಗಳ ಬಳಕೆ - ಇವುಗಳಿಂದ ಉಗ್ರ ಅನುಭವ ತರುವ 'ಸೌಂದರ್ಯಮೀಮಾಂಸೆ'ಯನ್ನು, ಏನೋ ವಿಶೇಷವಾದ್ದು ನಡೆಯುತ್ತಿದೆ ಎಂದು 'ರಿಪಬ್ಲಿಕನ್ ಟಿವಿ' ಪ್ರೇಕ್ಷಕರನ್ನು ಮ್ಯಾನಿಪುಲೇಟ್ ಮಾಡಲು ಹೇಗೆ ಬಳಸುತ್ತಿದೆ ಎಂಬ ಉದಾಹರಣೆಯ ಮೂಲಕ ಅಭಯಸಿಂಹ ವಿವರಿಸಿದರು. ಕಲಾ ಸಿನೆಮಾಗಳಲ್ಲಿ ನಾವು ನಮ್ಮದೇ ಆದ ಸೌಂದರ್ಯ ಮೀಮಾಂಸೆ ರೂಪಿಸಿಕೊಳ್ಳಲಾಗಿಲ್ಲ. ಯುರೋಪಿನಿಂದ ಎರವಲು ಪಡೆದ ವ್ಯಾಕರಣ ಬಳಸುತ್ತಿಲ್ಲವೇ ಎಂಬ ಸಂದೇಹದೊಂದಿಗೆ ಅಭಯಸಿಂಹ ತಮ್ಮ ವಿಷಯ ಮಂಡನೆ ಮುಗಿಸಿದರು. ಮಂಡನೆಯ ನಂತರ ಸಹಯಾನಿಗಳೊಂದಿಗೆ ಸಂವಾದವೂ ಇತ್ತು.

ಕಲಾ ಸಿನೆಮಾ 'ಅರ್ಥವಾಗುವುದಿಲ್ಲ' ಎಂದು ಸುಲಭವಾಗಿ ಹೇಳುವ ಜನ ಅಣುವಿಜ್ಞಾನ, ಕಾರ್ಪೊರೇಟ್ ಆರ್ಥಿಕ ಸಹ ಅಷ್ಟೇ ಅರ್ಥವಾಗದಿದ್ದರೂ ತಮಗೆ 'ಅರ್ಥವಾಗುವುದಿಲ್ಲ'ಎಂದು ಹೇಳುವುದಿಲ್ಲ. ಅದು ಅರ್ಥವಾಗದಿದ್ದರೂ ಅದರ ಉತ್ಪನ್ನಗಳಾದ ಬಾಂಬು ಮತ್ತು ಜಿಡಿಪಿ ಗಳನ್ನು ಭಯ-ಭಕ್ತಿಯಿಂದ ಕಾಣುತ್ತಾರೆ. ಇದಕ್ಕೆ 'ಮುಖ್ಯಧಾರೆ'ಯ ಸಿನೆಮಾ ಹೊರಿಸಿರುವ ಯಜಮಾನಿಕೆಯ ಗ್ರಹಿಕೆ ಮತ್ತು 'ಸೌಂದರ್ಯಮೀಮಾಂಸೆ'ಯ ಕಲ್ಪನೆಗಳೇ ಕಾರಣ. 'ನೀವು ಪುಟ್ಟಣ್ಣ ಕಣಗಾಲ್ ರೀತಿಯ ಸಿನೆಮಾ ಯಾಕೆ ಮಾಡುವುದಿಲ್ಲ' ಎನ್ನುವರಿಗೆ ಎನ್.ಲಕ್ಷ್ಮಿನಾರಾಯಣ್ ಸಿನೆಮಾ ಯಾಕೆ ಅರ್ಥವಾಗಲಿಲ್ಲ. ಪುಟ್ಟಣ್ಣ ಕಣಗಾಲ್ ಅವರ ಸ್ಥಾಪಿತ ಬ್ರಾಹ್ಮಣಶಾಹಿ ಗ್ರಹಿಕೆ ಈಗಾಗಲೇ ಇರುವ ಅವರ ಗ್ರಹಿಕೆಯನ್ನು ಇನ್ನಷ್ಟು ಗಟ್ಟಿಗೊಳಿಸಿದ್ದು ಕಾರಣ. ಇಂತಹ ಯಜಮಾನಿಕೆಯನ್ನು ಮುರಿದು ಇದಕ್ಕೆ ಬದಲಿ ಕಟ್ಟಲು ಮೂರು ನಿಟ್ಟಿನಲ್ಲಿ ಒಟ್ಟಿಗೆ ಕೆಲಸ ಆಗಬೇಕಾಗಿದೆ. 'ಮುಖ್ಯಧಾರೆ'ಯ ಸಿನೆಮಾದ ಭಿನ್ನಮತೀಯರು (ತಮಿಳಿನ 'ಅಸುರನ್'ನಂತಹ ಚಿತ್ರಗಳ ಮೂಲಕ) ಈ ಯಜಮಾನಿಕೆಯನ್ನು ಮುರಿಯಬೇಕು. ಚಿತ್ರಸಮಾಜ ಚಳುವಳಿಯ ಮೂಲಕ ಪ್ರೇಕ್ಷಕರಲ್ಲಿ ಹೊಸ ರಸಾಭಿಜ್ಞತೆಯನ್ನು ಬೆಳೆಸಬೇಕು. ಕಲಾ ಸಿನಿಮಾ ಪ್ರೇಕ್ಷಕರ ಬಳಿಗೆ ಹೋಗಬೇಕು. ಡಿಜಿಟಲ್ ವೇದಿಕೆಗಳು ಇವುಗಳಿಗೆ ಪರಿಕರಗಳನ್ನು ಒದಗಿಸುತ್ತಿವೆ. ಆದರೆ ಅದನ್ನು ಬಳಸಿಕೊಳ್ಳಬೇಕು. ಉದಾಹರಣೆಗೆ ಸಣ್ಣ ಫಿಲಂ ತಯಾರಿಗೆ, ವಿತರಣೆಗೆ ಬೇಕಾದ ಪರಿಕರಗಳು ಲಭ್ಯತೆ ಸುಲಭವಾಗಿದ್ದರೂ, ಅದನ್ನು ಬಳಸುವುದಕ್ಕೆ ಬೇಕಾದ ಜವಾಬ್ದಾರಿ, ತಯಾರಿ ಅದನ್ನು ಬಳಸಲು ಮುಂದಾಗುತ್ತಿರುವ ಯುವಜನರಲ್ಲಿ ಕಾಣುತ್ತಿಲ್ಲ, ಎಂದವರು ಸರ್ವಾಧ್ಯಕ್ಷರಾಗಿ ಅಭಯಸಿಂಹ ಅವರ ವಿಷಯ ಮಂಡನೆ ಪ್ರತಿಕ್ರಿಯಿಸಿದ ಪ್ರೊ. ಕೆ. ಫಣಿರಾಜ್.

ಮಹಿಳಾ ಸೌಂದರ್ಯಮೀಮಾಂಸೆ ಎಂಬುದಿದೆಯೆ?

ಮುಂದುವರೆದ ಸಿನೆಮಾ ಸಹಯಾನದಲ್ಲಿ 'ಮಹಿಳಾ ಸೌಂದರ್ಯ ಮೀಮಾಂಸೆ ಎಂಬುದಿದೆಯೆ?' ಎಂಬ ಪ್ರಶ್ನೆ ಎತ್ತಿ ಅದನ್ನು ಉತ್ತರಿಸಲು ಪ್ರಯತ್ನಿಸಿದವರು ಡಾಕ್ಯುಮೆಂಟರಿ ಫೀಚರ್ ಸಿನೆಮಾ ಎರಡರಲ್ಲೂ ಮಹತ್ವದ ಮಹಿಳಾ ನಿರ್ದೇಶಕರಾಗಿ ಹೊಮ್ಮಿರುವ ಅನನ್ಯಾ ಕಾಸರವಳ್ಳಿ. ಸಿನೆಮಾ ಮತ್ತು ಮಹಿಳಾವಾದ ಪರಸ್ಪರ ಪ್ರಭಾವಿಸಿದ ಅಂತರ್ರಾಷ್ಟ್ರೀಯ ಚರಿತ್ರೆಯನ್ನು ಅವರು ಮೊದಲಿಗೆ ಕಟ್ಟಿಕೊಟ್ಟರು. ಅಂತರಾಷ್ಟ್ರೀಯ ಸಿನೆಮಾದ ಮೇಲೆ ಆರಂಭದಿಂದಲೂ ಮಹಿಳಾವಾದ ಪ್ರಭಾವಿಸಿದ್ದರ, ಸಿನೆಮಾ ಮಹಿಳಾವಾದಿ ಚಳುವಳಿಯ ಸಾಧನ ಆಗಿದ್ದರ ಕುರಿತು ಹೇಳಿದರು. ಭಾರತದ ಸಿನೆಮಾದಲ್ಲಿ ಮಹಿಳೆಯ ಪ್ರತಿನಿಧೀಕರಣದ ಹಲವು ಮಜಲುಗಳ ಚರಿತ್ರೆಯನ್ನು ಸಹ ಅವರು ಕಟ್ಟಿಕೊಟ್ಟರು. 'ಹಂಟರ್‌ವಾಲಿ' ಸರಣಿಯಲ್ಲಿ ಸಾಂಪ್ರದಾಯಿಕ ಮಹಿಳಾ ಇಮೇಜು (ತಾಯಿ, ಹೆಂಡತಿ, ತಂಗಿ) ಒಡೆಯುವ ಸ್ವತಂತ್ರ ಮಹಿಳೆಯಿರುವ


ಪುಸ್ತಕ ಬಿಡುಗಡೆ

ಹಿರೋಯಿನ್-ಪ್ರಧಾನ ಚಿತ್ರಣ, 'ಕಾಗಜ್ ಕೆ ಫೂಲ್' ಮಹಿಳೆಯ ಸಾಮಾಜಿಕ ಪರಿಸ್ಥಿತಿಯ ಸೂಕ್ಷ್ಮಚಿತ್ರಣ, ಮಹಿಳಾ ಬಂಡಾಯಗಾರ್ತಿಯರ ಚಿತ್ರಣ, ಸಮಾಜದಲ್ಲಿ 'ಭಾರತೀಯ ಮಹಿಳೆ' ಹೇಗಿರಬೇಕು ಎಂಬ ಪುರುಷಪ್ರಧಾನ ಧೋರಣೆಯ ಚಿತ್ರಣ - ಮುಂತಾದ ಮಹಿಳೆಯ ಪ್ರತಿನಿಧೀಕರಣದ ಹಲವು ಮಜಲುಗಳನ್ನು ವಿವರಿಸಿದರು. ಭಾರತದಲ್ಲಿ 2000ದ ನಂತರ ಮಹಿಳೆಯರು ಸಿನೆಮಾದ ಪರದೆಯ ಹಿಂದೆ ಹೋಗಲಾರಂಭಿಸಿದಾಗ ಸಿನೆಮಾದಲ್ಲಿ ಮಹಿಳೆಯರ ಪ್ರತಿನಿಧೀಕರಣದಲ್ಲಿ ಆದ ಬದಲಾವಣೆ ಬೇರೆ ರೀತಿಯದು. ಮಹಿಳಾ ನಿರ್ದೇಶಕರು ಮತ್ತು ಚಿತ್ರಕತೆಗಾರರೊಂದಿಗೆ ಮಹಿಳೆಯರ ಕುರಿತ ➚

ಸಿನೆಸಂವಾದ...ನೆನಪಿನಲ್ಲಿ ಉಳಿದದ್ದು

ಸಿನೆಮಾದ ಸೌಂದರ್ಯ ಮೀಮಾಂಸೆ ಎಂದರೆ ಸಿನೆಮಾವನ್ನು ಅರ್ಥ ಮಾಡಿಕೊಳ್ಳುವ ಮತ್ತು ಕಟ್ಟುವ ರೀತಿ. ಸಿನೆಮಾದಲ್ಲಿ ಇರುವ ಮತ್ತು ಅದು ಕೊಡುವ ಗ್ರಹಿಕೆ, ಅನುಭೂತಿ, ಅನುಭವ- ಇದರ ಪ್ರಮುಖ ಅಂಶಗಳು.

- ಅಭಯಸಿಂಹ, ಚಿತ್ರ ನಿರ್ದೇಶಕರು

ಭಾರತದಲ್ಲಿ 2000ದ ನಂತರ ಮಹಿಳೆಯರು ಸಿನೆಮಾದ ಪರದೆಯ ಹಿಂದೆ ಹೋಗಲಾರಂಭಿಸಿದಾಗ ಸಿನೆಮಾದಲ್ಲಿ ಆದ ಬದಲಾವಣೆ 'ಮಹಿಳಾ ಸೌಂದರ್ಯ ಮೀಮಾಂಸೆ' ಎಂಬುದಿದೆಯೆ ಎಂಬ ಪ್ರಶ್ನೆಯನ್ನು ಮುನ್ನೆಲೆಗೆ ತಂದಿದೆ. ಜಾಗತಿಕಸಿನೆಮಾದಲ್ಲಿ ಕೆಲವು ದಶಕಗಳ ಮೊದಲೇ ಈ ಪ್ರಶ್ನೆಯನ್ನು ಎತ್ತಲಾಗಿತ್ತು. ಭಾರತದಲ್ಲೂ ಈ ಪ್ರಶ್ನೆಗಳು ಚಿತ್ರಕಲೆ ಮತ್ತು ಸಾಹಿತ್ಯಗಳಲ್ಲಿ ಈಗಾಗಲೇ ವ್ಯಾಪಕವಾಗಿ ಚರ್ಚೆಯಲ್ಲಿವೆ.

- ಅನನ್ಯಾ ಕಾಸರವಳ್ಳಿ, ನಟಿ ನಿರ್ದೇಶಕಿ

ಬಾಲಿವುಡ್ ನಲ್ಲಿ ಇತ್ತೀಚಿನ ವರ್ಷಗಳಲ್ಲಿ 'ಸ್ಮಾಲ್ ಟೌನ್ ಸ್ಟೋರೀಸ್' ಎಂಬ ಒಂದು ಹೊಸ ಸಿನೆಮಾಪ್ರಕಾರವುಹೊಮ್ಮಿದೆ. ಇದು ಹೊಸ ತಲೆಮಾರು ಸಿನೆಮಾದಲ್ಲಿ ತಂದ ಬದಲಾವಣೆ ಮತ್ತು ಯುವಜನರು ಹೆಚ್ಚೆಚ್ಚು ನೋಡುವ ಮೆಚ್ಚುತ್ತಿರುವ ಸಿನೆಮಾಪ್ರಕಾರ ಆಗುತ್ತಿದೆ. ತಮಿಳು, ಮಲಯಾಳಂಗಳಲ್ಲೂ ಈ ಟ್ರೆಂಡ್ ಬಲವಾಗಿದೆ. ತೆಲುಗಲ್ಲೂ ಆರಂಭವಾಗಿದೆ. ಕನ್ನಡದಲ್ಲಿ ಇಂತಹ ಸೂಚನೆಗಳು ಕಾಣುತ್ತಿವೆ. ಅದನ್ನು ಬಲಗೊಳಿಸಬೇಕು.

- ಟಿ.ಕೆ. ದಯಾನಂದ್, ಕತೆಗಾರರು

ಈಗ ಹೊಮ್ಮುತ್ತಿರುವ ಡಿಜಿಟಲ್ ವೇದಿಕೆಗಳು ವ್ಯಸನವನ್ನು ವ್ಯಾಪಕವಾಗಿಸಲು ಪ್ರಯತ್ನಿಸುತ್ತಿವೆ. ಸಿನೆಮಾ ವಿತರಣೆಗೆ ದಿಡ್ಡಿ ಬಾಗಿಲು ತೆರೆಯುತ್ತಿವೆ.ಸಿನೆಮಾ ಪ್ರಚಾರದ ಹೊಸ ಸಾಧ್ಯತೆಗಳನ್ನು ತೆರೆಯುತ್ತಿವೆ. ಇವು ಮನೆಯಲ್ಲಿಯೇ ಒಂದು ಸಿನೆಮಾ ಸಂತೆ ನೆರೆಸುತ್ತಿವೆ. ಈ ಸಂತೆಯಲ್ಲಿ ಯಾವುದು ಸಾಚಾ ಯಾವುದು ಖೋಟಾ, ಯಾವುದು ಒಳ್ಳೆಯದು ಯಾವುದು ಕೆಟ್ಟದ್ದು ಎಂದು ಆರಿಸಿಕೊಳ್ಳುವ ಸಾಮರ್ಥ್ಯ ನಮಗೆ ಇರುತ್ತದೆಯೆ?

- ವಿಶಾಖ, ಪತ್ರಕರ್ತರು

ಕಣ್ಣೋಟದಲ್ಲಿ ಮಹತ್ವದ ಬದಲಾವಣೆ ಆಗಿದೆ. ಹಿಂದೆ ಅಂತರ್‍ರಾಷ್ಟ್ರೀಯವಾಗಿ ಆಗಲೇ ಇದ್ದ ಪ್ರಶ್ನೆಯನ್ನು ಭಾರತದ ಸಂದರ್ಭದಲ್ಲಿ ಮತ್ತೆ ಹುಟ್ಟು ಹಾಕಿದೆ. ಮಹಿಳಾವಾದಿಗಳು ಹೆಚ್ಚಿನ (ಅದರಲ್ಲೂ ಮುಖ್ಯಧಾರೆಯ) ಸಿನೆಮಾಗಳಲ್ಲಿ ಮಹಿಳೆಯ ಬಿಂಬವನ್ನು ಪ್ರಚೋದಕ ರೀತಿಯಲ್ಲಿ ಪ್ರತಿನಿಧಿಸುವ ಕಣ್ಣೋಟವನ್ನು 'ಪುರುಷ ನೋಟ'(ಮೇಲ್ ಗೇಝ್) ವೆಂದು ಕರೆದಿದ್ದರು. ಅದನ್ನು ಒಡೆದು ಹಾಕಬೇಕಾದರೆ 'ಮಹಿಳಾ ನೋಟ' (ಫೀಮೇಲ್ ಗೇಝ್) ವನ್ನು ಸಿನೆಮಾದಲ್ಲಿ ತರಬೇಕೆ? ಹಾಗೆಂದರೇನು? ಮಹಿಳಾ ಸೌಂದರ್ಯಮೀಮಾಂಸೆ ಎಂಬುದಿದೆಯೆ? ಈ ಪ್ರಶ್ನೆಗಳನ್ನು ಎತ್ತಿ ಅವರು ಉತ್ತರಿಸಲು ಪ್ರಯತ್ನಿಸಿದರು. ಈ ಪ್ರಶ್ನೆಗಳನ್ನು ಭಾರತದ ಚಿತ್ರಕಲೆ ಮತ್ತು ಸಾಹಿತ್ಯಗಳಲ್ಲಿ ಎತ್ತಲಾಗಿದ್ದು ಈಗಾಗಲೇ ವ್ಯಾಪಕವಾಗಿ ಚರ್ಚೆಯಲ್ಲಿವೆ. ಇದಕ್ಕೆ ಚಿತ್ರಕಲೆಯಲ್ಲಿ ಅಮೃತಾ ಶೇರ್ ಗಿಲ್ ಮತ್ತು ಸಾಹಿತ್ಯದಲ್ಲಿ ವೈದೇಹಿಯವರ ಕತೆಗಳ ಉದಾಹರಣೆಗಳನ್ನು ಕೊಟ್ಟು ಅವರು ವಿವರಿಸಿದರು. ಕನ್ನಡ ಸಿನೆಮಾದಲ್ಲಿ ಮಹಿಳಾ ಸೌಂದರ್ಯಮೀಮಾಂಸೆ ಅರ್ಥೈಸಲು ಇರುವ ಸವಾಲುಗಳ ಬಗೆಗೂ ವಿವರಿಸಿದರು. ಆ ಮೂಲಕ ಉತ್ತಮ ಸಂವಾದವನ್ನು ಹುಟ್ಟು ಹಾಕಿದರು.

'ಸ್ಮಾಲ್ ಟೌನ್ ಸ್ಟೋರೀಸ್' ಕನ್ನಡದಲ್ಲೂ ಬರಬೇಕು

ಹೊಸ ತಲೆಮಾರಿನವರು ಸಿನಿಮಾವನ್ನು ಹೇಗೆ ನೋಡುತ್ತಾರೆ, ವಿಮರ್ಶಿಸುತ್ತಾರೆ, ಕಟ್ಟಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ ಎಂಬುದರ ಕುರಿತು ತಮ್ಮ ಅನುಭವದ ಆಧಾರದ ಮೇಲೆ, ಕತೆಗಾರ ಪತ್ರಕರ್ತ ಮತ್ತು ಸಿನಿಮಾ ಚಿತ್ರಕತೆಗಾರ ಯುವಪ್ರತಿಭೆ ಟಿ.ಕೆ. ದಯಾನಂದ ವಿವರವಾಗಿ ಮಾತನಾಡಿದರು. ಬಾಲಿವುಡ್ ಯಾವರೀತಿಯ ಖಳನಾಯಕರನ್ನು ಸೃಷ್ಟಿಸುತ್ತಾ ಬಂದಿದೆ ಎಂಬುದನ್ನು ನಿರೂಪಿಸುವ ಮೂಲಕ ಅವರು ಮಾತು ಆರಂಭಿಸಿದರು. ಸಾಮಾನ್ಯವಾಗಿ ಮುಸ್ಲಿಂ/ಕ್ರಿಶ್ಚಿಯನ್ ಹೆಸರುಳ್ಳ ಖಳನಾಯಕರಿಂದ ಆರಂಭಿಸಿ, ಹೀರೋನೇ ಖಳನಾಯಕನಂತಿರುವ 'ಬಾಜಿಗರ್', 'ಡರ್' ಮುಂತಾದವುಗಳನ್ನು ಹಾದು, ತನ್ನ ಪ್ರೇಯಸಿಗೆ ಹೊಡೆಯುವುದೂ ಪ್ರೇಮದ ಭಾಗ ಎನ್ನುವ ಮಹಿಳಾ-ವಿರೋಧಿ ಕಬೀರ್ ಸಿಂಗ್/ಅರ್ಜುನ್ ರೆಡ್ಡಿ ಯಂತಹ ಸಿನಿಮಾದವರೆಗೆ ಮುಖ್ಯಧಾರೆಯ ಸಿನಿಮಾ ಯುವಜನರಲ್ಲಿ ಅಪರಾಧಿ ಮನೋಭಾವ ಮತ್ತಿತರ ತಪ್ಪು ಮೌಲ್ಯಗಳನ್ನು ಪ್ರಚೋದಿಸುವ ಅಥವಾ ಹುಟ್ಟಿಸುವ ಪ್ರಯತ್ನ ಮಾಡುತ್ತಾ ಬಂದಿದೆ. ಅವರ ಹತಾಶೆಗೆ ಹಿಂಸೆಯ ಔಟ್‌ಲೆಟ್ ತೋರಿಸುತ್ತಾ ಬಂದಿದೆ. ಇನ್ನೊಂದು ಕಡೆ ಖಾನ್-ತ್ರಯರ ಶತಕೋಟಿ ಬಜೆಟ್ ಗೋತಾ ಹೊಡೆಯುತ್ತಿದ್ದರೆ, ಆಯುಷ್ಮನ್ ಖುರಾನಾ ರಂತಹವರ ಸಿನೆಮಾ ಬಾಕ್ಸ್ ಆಫಿಸ್ ನಲ್ಲಿ ಯಶಸ್ವಿಯಾಗುತ್ತಿರುವುದು ಹೊಸ ಟ್ರೆಂಡ್. ಇದು ಯುವಜನರ ಯಾವುದನ್ನು ನೋಡಬಯಸುತ್ತಾರೆ, ಹೇಗೆ ವಿಮರ್ಶಿಸುತ್ತಾರೆ ಎಂಬುದನ್ನು ತೋರಿಸುತ್ತದೆ. ಇದು ಒಟ್ಟಾರೆಯಾಗಿ 'ಸ್ಮಾಲ್ ಟೌನ್ ಸ್ಟೋರೀಸ್' ಎಂಬ ಹೊಸ ಸಿನೆಮಾಪ್ರಕಾರದ ಉದಯವನ್ನು ಸೂಚಿಸುತ್ತದೆ. ಇದು ಹೊಸ ತಲೆಮಾರು ಮುಖ್ಯಧಾರೆಯ ಸಿನೆಮಾದಲ್ಲಿ ತಂದ ಬದಲಾವಣೆ ಮತ್ತು ಯುವಜನರು ಹೆಚ್ಚೆಚ್ಚು ನೋಡುವ ಮೆಚ್ಚುತ್ತಿರುವ ಸಿನೆಮಾಪ್ರಕಾರ ಆಗುತ್ತಿದೆ. ತಮಿಳು, ಮಲಯಾಳಂಗಳಲ್ಲೂ ಈ ಟ್ರೆಂಡ್ ಬಲವಾಗಿದೆ. ತೆಲುಗಿನಲ್ಲೂ ಆರಂಭವಾಗಿದೆ. ಕನ್ನಡದಲ್ಲಿ ಇಂತಹ ಸೂಚನೆಗಳು ಕಾಣುತ್ತಿವೆ. ಮೈಸೂರು-ಬೆಂಗಳೂರಿಗೆ ಸೀಮಿತಗೊಂಡ ಕನ್ನಡ ಸಿನಿಮಾಕ್ಕೆ ಅದರ ಎಲ್ಲ ಕ್ಷೇತ್ರಗಳಲ್ಲೂ ಹೊನ್ನಾವರ ದಂತಹ ಸಣ್ಣ ಪಟ್ಟಣಗಳಿಂದ ಯುವಜನರು ಬರಬೇಕಾಗಿದೆ. ಇಲ್ಲೆಲ್ಲ ಅಸಂಖ್ಯಾತ 'ಕಥನ'ಗಳು ಸಿನೆಮಾ ಆಗಲಿಕ್ಕೆ ಕಾಯುತ್ತಿವೆ. ಕನ್ನಡದಲ್ಲೂ ಇಂತಹ ಪ್ರಕ್ರಿಯೆ ಆರಂಭವಾಗಿದೆ. ಇಂತಹ ಸಂವಾದಗಳು ಕಾರ್ಯಾಗಾರಗಳು ಯುವಜನರನ್ನು ಇದಕ್ಕೆ ಸಜ್ಜುಗೊಳಿಸಲು ಸಹಾಯ ಮಾಡಬಲ್ಲವು. ಈ ಪ್ರಕ್ರಿಯೆ ಭಾಗವಾಗಿ ಎಂದು ನೆರೆದಿದ್ದ ಸಿನಿಮಾಸಕ್ತ ಯುವಜನರಿಗೆ ಅವರು ಕರೆ ನೀಡಿದರು. ಅವರು ತಾವು ಬರೆಯಲು ಆರಂಭಿಸಿರುವ 'ಮರ್ಯಾದಾ ಹತ್ಯೆ' ಚಿತ್ರಕತೆಗೆ ಸಂಶೋಧನೆ ಮಾಡುವಾಗ ಆಚೆಗೆ ಬಂದ ಹುದುಗಿರುವ ನೂರಾರು ಕಥನಗಳ



ವಿಶಾಕ್

ಉದಾಹರಣೆಯೊಂದಿಗೆ ಇದನ್ನು ವಿವರಿಸಿದರು. ಈವರೆಗಿನ ಕನ್ನಡದ ಕಮರ್ಶಿಯಲ್, ಕಲಾತ್ಮಕ, ಬ್ರಿಜ್ ಸಿನಿಮಾಗಳಿಗಿಂತ ಭಿನ್ನವಾದ ಸಿನೆಮಾ ಸಾಧ್ಯವಿದೆ ಎಂದರು. ಪತ್ರಿಕೆ ಮತ್ತಿತರ ಮುಖ್ಯವಾಹಿನಿ ಮಾಧ್ಯಮಗಳಲ್ಲಿ ಸಿನೆಮಾ ವಿಮರ್ಶೆ ಸಾಯುತ್ತಿದೆ. ಸಿನೆಮಾದ ಪ್ರಚಾರ ಇದ್ದಬದ್ದ ವಿಮರ್ಶೆ ಮೇಲೆ ಪ್ರಭಾವ ಬೀರುತ್ತಿದೆ. ಮೊದಮೊದಲು ಸಾಮಾಜಿಕ ಮಾಧ್ಯಮಗಳಲ್ಲಿ ಕೆಲವು ವ್ಯಕ್ತಿಗಳು, ವೆಬ್ ತಾಣಗಳು ಉತ್ತಮ ವಿಮರ್ಶೆ ಆರಂಭಿಸಿದ್ದು ಅದೂ ಸಿನೆಮಾದ ಪ್ರಚಾರದ ಹಣಕ್ಕೆ ಬಲಿಯಾಗುತ್ತಿರುವಂತೆ ಕಾಣುತ್ತಿದೆ. ಸಿನೆಮಾದ ಬಗ್ಗೆ ವಿಮರ್ಶೆಯನ್ನು ಸಾಮಾಜಿಕ ಮಾಧ್ಯಮದಲ್ಲಿ ಹೇಗೆ ಕಟ್ಟುವುದು ಎಂಬುದರ ಕುರಿತು ಗಂಭೀರವಾಗಿ ಯೋಚಿಸಬೇಕಾಗಿದೆ ಎಂದರು. ಅವರ ಮಂಡನೆ ಸಹ ಉತ್ತಮ ಸಂವಾದಕ್ಕೆ ಹಾದಿ ಮಾಡಿಕೊಟ್ಟಿತು.

ಡಿಜಿಟಲ್ ವೇದಿಕೆಯ ಸಾಧ್ಯತೆಗಳು

ಸಿನೆಮಾ ಮತ್ತು ಇತರ ವಿಡಿಯೊಗಳ ದೃಷ್ಟಿಯಿಂದ ಡಿಜಿಟಲ್ ವೇದಿಕೆಗಳ ಸಾಧ್ಯತೆಗಳ ಕುರಿತು ಸಂವಾದ ಆರಂಭಿಸಿದವರು ಪತ್ರಕರ್ತ ವಿಶಾಖ ಅವರು. ಅಮೆರಿಕದ ಬಾಲಕನೊಬ್ಬ ಯುಟ್ಯೂಬ್ ನಲ್ಲಿ ಆಟಿಕೆಗಳ ವಿಮರ್ಶೆ ಮಾಡುತ್ತಾ 3.75 ಕೋಟಿ ಬಳಕೆದಾರರನ್ನು ಗಳಿಸಿದ ಮತ್ತು 380 ಕೋಟಿ ನೋಟಗಳು ಸಿಕ್ಕಿ ಮಕ್ಕಳ ಯೂಟ್ಯೂಬ್ ಗಳಲ್ಲಿ ಟಾಪ್ 1 ಆಗಿದ್ದಾನೆ. ಇದೇ ರೀತಿ ಚೆನ್ನೈ ಬಾಲಕನೊಬ್ಬ ವಿಡಿಯೊ ನೋಡಿ ಕೀ ಬೋರ್ಡ್ ಕಲಿತು ಮೋಹನಲಾಲ್ ಅವರ ಮುಂದಿನ ಸಿನಿಮಾಕ್ಕೆ ಸಂಗೀತ ನಿರ್ದೇಶನ ಮಾಡುವಷ್ಟು ಬೆಳೆದುಬಿಟ್ಟಿದ್ದಾನೆ. ಇವರಿಡೂ ಡಿಜಿಟಲ್ ವೇದಿಕೆಯ ಅಪಾರ ಸಾಧ್ಯತೆಗಳ ಜೀವಂತ ರೂಪಕಗಳು. ಸಿನೆಮಾದಲ್ಲಿ ಡಿಜಿಟಲ್ ಯುಗ ಸಿಡಿಯಲ್ಲಿ ಅದನ್ನು ವಿತರಿಸುವುದರೊಂದಿಗೆ ಶುರುವಾಯಿತು ಎನ್ನಬಹುದು. ಡಿಜಿಟಲ್ ಕ್ಯಾಮೆರಾ, ಎಡಿಟಿಂಗ್, ಸ್ಪೆಷಲ್ ಇಫೆಕ್ಟ್ಸ್ ಇತ್ಯಾದಿ ಸಿನೆಮಾ ತಯಾರಿಯಲ್ಲಿ ಡಿಜಿಟಲ್ ಬಳಕೆಗಿಂತ ಹೆಚ್ಚಾಗಿ ಈಗಲೂ ಸಿನೆಮಾ ವಿತರಣೆ, ಪ್ರಚಾರ ಇತ್ಯಾದಿ ಮಾರ್ಕೆಟಿಂಗಿಗೆ ಬಳಕೆಯೇ ಪ್ರಧಾನವಾಗಿದೆ. ಇದಕ್ಕೆ ಅವರು ಸಿನೆಮಾದ ಬಿಡುಗಡೆಗೆ ಪೂರ್ವದಲ್ಲಿ ನಡೆಸುತ್ತಿದ್ದ ಮುಹೂರ್ತ ಶಾಟ್, ಆಡಿಯೋ ರಿಲೀಸ್ ಗಳ ಮೂಲಕ ಪತ್ರಿಕೆ, ಟಿವಿ ಗಳಲ್ಲಿ ಪ್ರಚಾರದ ಬದಲು, ಯೂಟ್ಯೂಬ್ ಮತ್ತಿತರ ಡಿಜಿಟಲ್ ವೇದಿಕೆಗಳಲ್ಲಿ ಹಾಡಿನ ತುಣುಕನ್ನೋ ಟ್ರೈಲರ ನ್ನೋ ಬಿಟ್ಟು ಪ್ರಚಾರಕ್ಕೆ ಇಳಿದಿರುವ ಉದಾಹರಣೆ ಕೊಟ್ಟರು. ಡಿಜಿಟಲ್ ವೇದಿಕೆಗಳು ಸಿನೆಮಾ ಪ್ರಚಾರದ ಹೊಸ ಸಾಧ್ಯತೆಗಳನ್ನು ತೆರೆಯುತ್ತಿವೆ. ಈಗ ಹೊಮ್ಮುತ್ತಿರುವ ನೆಟ್‌ಫ್ಲಿಕ್ಸ್, ಅಮೆಜಾನ್, ವೂಟ್ ಮುಂತಾದ ಒಟಿಟಿ (ಓವರ್ ದಿ ಟಾಪ್) ಡಿಜಿಟಲ್ ವೇದಿಕೆಗಳು ಸಿನೆಮಾ ವಿತರಣೆಗೆ ದಿಡ್ಡಿ ಬಾಗಿಲು ತೆರೆಯುತ್ತಿವೆ. ತಮ್ಮದೇ ಉತ್ಪನ್ನಗಳನ್ನು ಮಾಡುತ್ತಿವೆ. ವೆಬ್ ಸೀರಿಯಲುಗಳು ಬರುತ್ತಿವೆ. ವ್ಯಸನವನ್ನು ವ್ಯಾಪಕವಾಗಿಸಲು ಪ್ರಯತ್ನಿಸುತ್ತಿವೆ. ಸಿನೆಮಾ ವಿತರಣೆಗೆ ಈಗಿನ ಏಕಪರದೆ ಅಥವಾ ಮಲ್ಟಿಪ್ಲೆಕ್ಸಿಗೆ ಬದಲಿಯಾದ ದಿಡ್ಡಿ ಬಾಗಿಲು ತೆರೆಯುತ್ತಿವೆ. ಇವು ಮನೆಯಲ್ಲಿಯೇ ಒಂದು ದೊಡ್ಡ ಸಿನೆಮಾ/ವಿಡಿಯೊ ಸಂತೆ ನೆರೆಸುತ್ತಿವೆ. ಈ ಸಂತೆಯಲ್ಲಿ ಯಾವುದು ಸಾಚಾ ಯಾವುದು ಖೋಟಾ, ಯಾವುದು ಒಳ್ಳೆಯದು ಯಾವುದು ಕೆಟ್ಟದ್ದು ಎಂದು ಆರಿಸಿಕೊಳ್ಳುವ ಸಾಮರ್ಥ್ಯ ನಮಗೆ ಇರುತ್ತದೆಯೆ ಎಂಬುದು ನಮ್ಮ ಮುಂದಿರುವ ಪ್ರಶ್ನೆ ಎಂದರು. ಸಿನಿಮಾ ವಿಮರ್ಶೆಯಲ್ಲೂ ಹೊಸ ಸಾಧ್ಯತೆಗಳ ಉದಾಹರಣೆಯಾಗಿ ತೌಲನಿಕ ಫಿಲಂ ವಿಮರ್ಶೆಯ ರೌಂಡ್ ಟೇಬಲ್ ನ ಒಂದು ವೆಬ್ ಸೈಟಿನ ಉದಾಹರಣೆ ಕೊಟ್ಟು ವಿಶಾಖ ಅವರು ವಿವರಿಸಿದರು. ಸಿನೆಮಾದ ಕುರಿತು ಸುಮಾರು ಒಂದು ಗಂಟೆಯ ಗಂಭೀರ ಸಂವಾದವನ್ನು ಹಿಂದೆ ಪ್ರಜಾವಾಣಿ ಸಂಘಟಿಸಿದ ಉದಾಹರಣೆಯನ್ನು ಕೊಟ್ಟರು. ಇದನ್ನು ಪ್ರಿಂಟಿನಲ್ಲಿ ಕೊಡಬೇಕಾದರೆ ಅರ್ಧ 'ಸುಧಾ' ಅದಕ್ಕೆ ಮೀಸಲಾಗಿಡಬೇಕಿತ್ತು. ಆದ್ದರಿಂದ ಪತ್ರದಲ್ಲಿ ಮಾತ್ರ ಗಂಭೀರ ದೀರ್ಘ ನಿರೂಪಣೆ ಸಾಧ್ಯ, ಅದು ವಿಡಿಯೋದಲ್ಲಿ ಸಾಧ್ಯವಿಲ್ಲ ಎಂದುಕೊಳ್ಳುವುದು ತಪ್ಪಾಗುತ್ತದೆ. ಈಗ ಇದು ನಿಜವಾಗಿಯೂ ತಿರುವುಮುರುವಾಗಿದೆ ಎಂದು ವಿಶಾಖ ಅವರು ಹೇಳಿದರು.

ಪ್ರತಿರೋಧದ ಹೊಸ ಸಾಧ್ಯತೆಗಳು

ಕೊನೆಯದಾಗಿ ನಡೆದ ಸಮಾರೋಪದಲ್ಲಿ ವಿನಯ ಒಕ್ಕುಂದ ಅವರು ಕ್ರಿಯಾ ಮಾಧ್ಯಮ ಪ್ರಕಟಿಸಿದ ಎನ್.ಆರ್.ಸಿ ಗೆ ಕಲಾಪ್ರತಿರೋಧದ ಸಂಕಲನ "ನಿನ್ನ ದಾಖಲೆ ಯಾವಾಗ ನೀಡುತ್ತಿ'ಯನ್ನು ಬಿಡುಗಡೆ ಮಾಡಿದರು. ಸಮಾರೋಪದ ಮಾತನಾಡುತ್ತಾ ತಮ್ಮ ವಿದ್ಯಾರ್ಥಿ ಜೀವನದಲ್ಲಿ ತೀವ್ರ ಪ್ರತಿಬಂಧಗಳ ನಡುವೆ ಸಿನೆಮಾ ನೋಡಲು ಫಜೀತಿ ಪಡುತ್ತಿದ್ದ ಹೆಣ್ಣು ಮಕ್ಕಳ ಅನುಭವವನ್ನು ಹಂಚಿಕೊಂಡರು. ಇಂದಿನ ಯುವಜನತೆಯ ಜತೆ ಸಕಾರಾತ್ಮಕ ಮೌಲ್ಯಗಳ ಕುರಿತು ಸಂವಾದದ ಪ್ರಮುಖ ಮಾಧ್ಯಮವಾಗಬಹುದಾದ ಸಿನೆಮಾವನ್ನು ಬಳಸಬೇಕಾದ ತುರ್ತಿನ ಬಗ್ಗೆ ಒತ್ತಿ ಹೇಳಿದರು. ಇಂದು ಅಭಿವ್ಯಕ್ತಿ ಅಸಾಧ್ಯ ಎಂಬ ತಲ್ಲಣ ಮಡುಗಟ್ಟಿದೆ. ಇಂಥ ಸಂದರ್ಭದಲ್ಲಿ ಸಿನೆಮಾ ಮಾತ್ರವಲ್ಲದೆ, ಯಾವುದೇ ಕಲೆ ತನ್ನ ಕಲಾತ್ಮಕ ತಾಂತ್ರಿಕತೆಯ ಬಗ್ಗೆ ತಲೆ ಕೆಡಿಸಿಕೊಳ್ಳಲು ಸಕಾಲವಲ್ಲ. ಕಲಾತ್ಮಕ ಬದ್ಧತೆಗಿಂತ ಸಾಮಾಜಿಕ ಬದ್ಧತೆಯೇ ವರ್ತಮಾನದ ಅಗತ್ಯವಾಗಿದೆ. ಎಲ್ಲ ಕಲಾ ಮಾಧ್ಯಮಗಳು ಸಹ ಈ ನಿಟ್ಟಿನಲ್ಲಿ ಕ್ರಿಯಾಶೀಲವಾದರೆ ಒಂದಿಷ್ಟು ಉಸಿರಾಡಬಹುದಾದ ಸಾಂಸ್ಕೃತಿಕ ವಾತಾವರಣ ಉಳಿಸಿಕೊಳ್ಳಲು ಸಾಧ್ಯ ಎಂದು ವಿನಯ ಅವರು ಕಳಕಳಿಯಿಂದ ನುಡಿದರು.



ಸಮಾರೋಪ

ವಿಶಾಖ ಅವರ ಡಿಜಿಟಲ್ ವೇದಿಕೆಯ ಸಾಧ್ಯತೆಗಳ ಕುರಿತ ಮತ್ತು ವಿನಯ ಅವರ ಸಮಾರೋಪದ ನುಡಿಗಳಿಗೆ ಪ್ರತಿಕ್ರಿಯಿಸುತ್ತಾ, ಸಿನೆಮಾ ಕಳೆದ 110 ವರ್ಷಗಳಲ್ಲಿ ಮೂಕಿ ಚಿತ್ರದೊಂದಿಗೆ ಆರಂಭವಾಗಿ ಡಿಜಿಟಲ್ ಸಿನೆಮಾದ ವರೆಗೆ ನಾಲ್ಕು ಹಂತಗಳಲ್ಲಿ ಮಹತ್ವದ ಬದಲಾವಣೆಗಳೊಂದಿಗೆ ಅದರ ಕಲಾಮೀಮಾಂಸೆ ಸಹ ಬದಲಾಗುತ್ತಾ ಬಂದಿದ್ದರ ನಿರೂಪಣೆಯನ್ನು, ಫಣಿರಾಜ್ ಅವರು ಮಾಡಿದರು. 1910ರಲ್ಲಿ ಭಾರತದಲ್ಲಿ ರಾಷ್ಟ್ರೀಯತೆಯ ಸಂದೇಶ ಕೊಡುವ ಮಾಧ್ಯಮವಾಗಿ ಸಿನೆಮಾದ ಉದಯವಾಯಿತು. ಅಮೆರಿಕಕ್ಕೆ ಗ್ರಿಫಿತ್ ರಾಷ್ಟ್ರೀಯ ಅಧಿಪತ್ಯದ ಹಾಲಿವುಡ್ ನ ಯಜಮಾನಿಕೆಯ ಮಾದರಿಯನ್ನು ಹಾಕಿಕೊಟ್ಟ. ಮೂಕಿಯಿಂದ ಟಾಕಿಗೆ ಸಿನೆಮಾ ಬದಲಾದಾಗ ಮೂಕಿ ಚಿತ್ರಗಳಲ್ಲಿ ವಿಶ್ವಾತ್ಮಕತೆ, ಮಾಂತ್ರಿಕತೆ ಮತ್ತು ಸಾಮಾಜಿಕತೆಯ ಕಲಾಮೀಮಾಂಸೆಯನ್ನು ರೂಢಿಸಿಕೊಂಡಿದ್ದ ಚಾಪ್ಲಿನ್ ನಂತಹ ಮಾಸ್ಟರ್ ನಿರ್ದೇಶಕರು ಗೊಂದಲಕ್ಕೊಳಗಾದರು. ಮಾತು ಬಂದ ಕೂಡಲೇ, ಭಾಷೆ ಮತ್ತು ಅದರ ಜತೆಗೆ ಸ್ಥಳೀಯತೆ ಬಂದು ವಿಶ್ವಾತ್ಮಕತೆ, ಮಾಂತ್ರಿಕತೆ ಮತ್ತು ಸಾಮಾಜಿಕತೆಗಳಿಗೆ ಅವಕಾಶವಿರುವುದಿಲ್ಲ ಎಂಬುದು ಚಾಪ್ಲಿನ್ ವಾದವಾಗಿದ್ದು ಸಿನೆಮಾವನ್ನೇ ಮಾಡುವುದಿಲ್ಲ ಎಂದು ಕೂತಿದ್ದ. ಆದರೆ ಜರ್ಮನಿಯ ಫ್ಯಾಸಿಸಂಗೆ ಪ್ರತಿರೋಧಕ್ಕಾಗಿ 'ಗ್ರೇಟ್ ಡಿಕ್ಟೇಟರ್' ಎಂಬ ಸಿನೆಮಾದ ಜತೆಗೆ ಟಾಕಿ ಸಿನಿಮಾದ ಹೊಸ ಕಲಾಮೀಮಾಂಸೆಯನ್ನು ಕಟ್ಟಿಕೊಂಡ. ಭಾರತದಲ್ಲಿ ರಾಷ್ಟ್ರೀಯತೆಯ ಸಂದೇಶ ಕೊಡುವ ಮಾಧ್ಯಮವಾಗಿ ಸಿನೆಮಾ ಉದಯವಾದರೂ, ರಾಜ್ ಕಪೂರ್-ಗುರುದತ್ ದೇಶ ಕಟ್ಟುವ ಸಾಮಾಜಿಕತೆಯ ಮಾಧ್ಯಮವಾಗಿ ಅದನ್ನು ಬೆಳೆಸಿದರು. ಇದರ ಮುಂದುವರಿಕೆಯಾಗಿ 70ರ ದಶಕದಲ್ಲಿ ದೇಶ ಕಟ್ಟುವ ಪ್ರಕ್ರಿಯೆಯ ವೈಫಲ್ಯದಿಂದ ಆಕ್ರೋಶಗೊಂಡ 'ಆಂಗ್ರಿ ಯಂಗ್ ಮ್ಯಾನ್' ಫಿಲಂಗಳು ಬಂದವು. ಆದರೆ 80-90ರ ದಶಕದ ಕಾರ್ಪೊರೇಟೀಕರಣ-ಜಾಗತೀಕರಣದ ಭಾಗವಾಗಿ ಸಾಮಾಜಿಕತೆ ಮಾಯವಾಗಿ, ಸಿನೆಮಾ ಅನಿವಾಸಿ ಮದುವೆ ವಿಡಿಯೋ ಅಲ್ಬಂ ಆಯಿತು. ಇದೇ ಅವಧಿಯಲ್ಲಿ ಸೆಕ್ಯುಲರ್ ಸಾಮಾಜಿಕ ಕೂಡುಸ್ಥಳವಾಗಿ ಒಂದು ಬಗೆಯ ಸಾಮಾಜಿಕ ಸಂವಾದಕ್ಕೆ ಪ್ರಜಾಸತ್ತೀಕರಣಕ್ಕೆಅವಕಾಶ ಕಲ್ಪಿಸಿದ್ದ ಏಕಪರದೆ ಸಿನಿಮಾ ಥಿಯೇಟರ್ ಅವನತಿಗೊಂಡು, ಟಿವಿ ಮನೆಯನ್ನು ಆವರಿಸಿಕೊಂಡಿತು. ಟಿವಿ ಮಧ್ಯಮ ವರ್ಗದ ಕುಟುಂಬವನ್ನು ಸಾಮಾಜಿಕತೆಯಿಂದ ವಿಮುಖವಾದ ಸ್ವಲೋಲುಪ್ತತೆಗೆ ಸೆಳೆಯಿತು. ಡಿಜಿಟಲ್ ವಿತರಣೆ ವ್ಯಾಪಕವಾಗುತ್ತಿದ್ದಂತೆ ಪ್ರತಿಯೊಬ್ಬ ಸದಸ್ಯ ತನ್ನದೇ ಡಿವೈಸಿನಲ್ಲಿ ತನಗೆ ಬೇಕಾದ ಸಿನೆಮಾ/ವಿಡಿಯೊ ನೋಡಿಕೊಂಡು, ಕುಟುಂಬದೊಳಗಿನ ಸಂವಾದ ಸಹ ಮಾಯವಾಗಿ ಅದು ವಿಘಟನೆಗೊಂಡಿದೆ. ಡಿಜಿಟಲ್ ವೇದಿಕೆಗಳು ಒಬ್ಬರೇ ನೋಡುವ ಸಿನೆಮಾಗೆ ಪ್ರೋತ್ಸಾಹ ಕೊಡುತ್ತಾ ಸಮುದಾಯದಿಂದ ವ್ಯಕ್ತಿಯನ್ನು ಒಡೆಯುತ್ತಾ ನಡೆದಿವೆ.ಅದೇ ಸಮಯದಲ್ಲಿ ಪ್ರತಿ ಒಂದು ಬೆಳವಣಿಗೆಯ ಹಂತದಲ್ಲಿ ಒಂದಲ್ಲ ಒಂದು ರೀತಿಯ ಪ್ರಜಾಸತ್ತೀಕರಣ ಸಹ ಬೆಳೆಯುತ್ತಾ ಬಂದಿದೆ. ಸಿನೆಮಾದ ಉತ್ಪಾದನೆ ಮತ್ತು ವಿತರಣೆ ಡಿಜಿಟಲ್ ಆಗುವುದರೊಂದಿಗೆ ಯಾವುದೇ ಒಬ್ಬ ಆಸಕ್ತ ವ್ಯಕ್ತಿ ತನ್ನದೇ ಆದ ಆಸಕ್ತಿಯ ವಿಷಯದ ಬಗ್ಗೆ ತನ್ನದೇ ಆದ ಬಜೆಟಿನಲ್ಲಿ ಸಿನೆಮಾ ಮಾಡಬಹುದು. ಅದೇ ಸಮಯದಲ್ಲಿ ನೆಟ್‌ಫ್ಲಿಕ್ಸ್, ಅಮೆಜಾನ್, ರಿಲಾಯನ್ಸ್ ನಂತಹ ದೈತ್ಯ ಕಂಪನಿಗಳು ವಿತರಣೆಯನ್ನು ಹೆಚ್ಚು ಹೆಚ್ಚಾಗಿ ನಿಯಂತ್ರಿಸಲಿವೆ. ಮೂಕಿಯಿಂದ ಟಾಕಿಗೆ, ಥೀಯೇಟರಿನಲ್ಲಿ ಸಾಮೂಹಿಕ ವೀಕ್ಷಣೆಯಿಂದ ವ್ಯಕ್ತಿ ತನ್ನದೇ ಡಿವೈಸಿನಲ್ಲಿ ನೋಡುವ ಬದಲಾವಣೆ - ಹೀಗೆ ಎಲ್ಲದರ ಜತೆಗೆ ಕಲಾಮೀಮಾಂಸೆಯೂ ಬದಲಾಗಬೇಕಾಗುತ್ತದೆ. ಕಲಾತ್ಮಕ ಬದ್ಧತೆಗಿಂತ ಸಾಮಾಜಿಕ ಬದ್ಧತೆಯೇ ವರ್ತಮಾನದ ಅಗತ್ಯ ಎಂದು ಹೇಳುವುದು ಸರಿಯಾಗುವುದಿಲ್ಲ. ಸಾಮಾಜಿಕತೆಗಾಗಿ ಪ್ರತಿರೋಧಕ್ಕಾಗಿ ಹೊಸ ಕಲಾಮೀಮಾಂಸೆ ಕಟ್ಟಬೇಕಾಗುತ್ತದೆ. ಸೌಂದರ್ಯಮೀಮಾಂಸೆಯ ಚರಿತ್ರೆ, ಸಾಮಾಜಿಕತೆಗಾಗಿ ಪ್ರತಿರೋಧದ ಚರಿತ್ರೆ ನೋಡಿದರೆ ಇದು ಸ್ಪಷ್ಟವಾಗುತ್ತದೆ. ಎಕ್ಸ್‌ಪ್ರೆಶನಿಸಂ, ಸರ್ರಿಯಲಿಸಂ ಮುಂತಾದ ಕಲಾಮೀಮಾಂಸೆಗಳು ಹುಟ್ಟಿಕಂಡದ್ದು ಪ್ರತಿರೋಧವನ್ನು ಕಟ್ಟಲೆಂದೇ. ಪ್ರತಿ ಹಂತದಲ್ಲಿ ಪ್ರತಿರೋಧದ ಹೊಸ ಸಾಧ್ಯತೆಗಳು ಸಹ ಹುಟ್ಟಿಕೊಳ್ಳುತ್ತಾ ಬಂದಿವೆ. ಡಿಜಿಟಲ್ ಸಿನೆಮಾದ ಈಗಿನ ಹಂತ ಇದಕ್ಕೆ ಅಪವಾದವಾಗಲಿಕ್ಕಿಲ್ಲ ಎಂದು ಫಣಿರಾಜ್ ಅವರು ಆಶಿಸಿದರು.

ಇಡೀ ದಿನದ ಸಂವಾದದಲ್ಲಿ ಹೊಸ ತಲೆಮಾರಿನ ಸಿನೆಮಾದಲ್ಲಿ ತೊಡಗಿಸಿಕೊಂಡಿರುವ ಮತ್ತು ತೊಡಗಿಸಿಕೊಳ್ಳಬೇಕೆಂದಿರುವ ಹಲವು ಆಸಕ್ತ ಯುವಜನರು ಸಹಯಾನಿಗಳಾಗಿದ್ದು ಕನ್ನಡದಲ್ಲಿ ಹೊಸ ಸಿನೆಮಾ ಕಟ್ಟುವತ್ತ ಇದೊಂದು ಮಹತ್ವದ ಸಂವಾದವಾಗಿತ್ತು ಎನ್ನಬಹುದು. ಸಹಯಾನದ ಸಾಹಿತ್ಯೋತ್ಸವಗಳಲ್ಲೇ ಹಲವು ರೀತಿಯಲ್ಲಿ ವಿಶಿಷ್ಟವಾದದ್ದು ಮತ್ತು ಯಶಸ್ವಿಯಾದದ್ದು ಎಂದು ನಿಸ್ಸಂದೇಹವಾಗಿ ಹೇಳಬಹುದು.

ರಾಷ್ಟ್ರಪತಿಗಳಿಗೆ ಏಳು ಪ್ರತಿಪಕ್ಷಗಳ ಮುಖಂಡರ ಮನವಿ ಪತ್ರ

"ಮಾನವೀಯತೆಯ ಆಧಾರದಲ್ಲಿ ತುರ್ತುಕ್ರಮಗಳಿಗೆ ತಕ್ಷಣ ಮಧ್ಯಪ್ರವೇಶಿಸಬೇಕು"

ದೇಶದ ರಾಜಧಾನಿಯಲ್ಲಿ ಉಂಟಾಗಿರುವ ಪ್ರಕ್ಷುಬ್ಧ ಪರಿಸ್ಥಿತಿಯ ಬಗ್ಗೆ ಭೇಟಿಯಾಗಿ ಅಭಿಪ್ರಾಯಗಳನ್ನು ಮಂಡಿಸಲು ಅವಕಾಶ ಮಾಡಿಕೊಡಬೇಕು ಎಂದು ಹಲವು ಪ್ರತಿಪಕ್ಷಗಳ ಪರವಾಗಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ರಾಷ್ಟ್ರಪತಿಗಳಿಗೆ ಫೆಬ್ರುವರಿ 26ರಂದು ಪತ್ರ ಬರೆದಿದ್ದರು. ಫೆಬ್ರುವರಿ 28ರಿಂದ ಮಾರ್ಚ್ 2 ರವರೆಗೆ ರಾಷ್ಟ್ರಪತಿಗಳನ್ನು ಭೇಟಿಯಾಗಲು ಆಗುವುದಿಲ್ಲ ಎಂಬ ಮಾಹಿತಿಯ ನಂತರ ಏಳು ಪಕ್ಷಗಳ ಮುಖಂಡರು ಫೆಬ್ರುವರಿ 28ರ ಸಂಜೆ ರಾಷ್ಟ್ರಪತಿಗಳಿಗೆ ಒಂದು ಜಂಟಿ ಮನವಿಪತ್ರ ಸಲ್ಲಿಸಿ, ರಾಷ್ಟ್ರಪತಿಗಳು ತಕ್ಷಣವೇ ಮಧ್ಯಪ್ರವೇಶಿಸಿ ಮಾನವೀಯತೆಯ ಆಧಾರದಲ್ಲಿ, ಮನವಿ ಪತ್ರದಲ್ಲಿ ಪಟ್ಟಿ ಮಾಡಿರುವ ಆರು ಕ್ರಮಗಳನ್ನು ತುರ್ತಾಗಿ ಕೈಗೊಳ್ಳುವಂತೆ ಖಾತ್ರಿ ಪಡಿಸಬೇಕು ಮತ್ತು ಗಲಭೆ ಪೀಡಿತ ಪ್ರದೇಶಗಳಲ್ಲಿ ಶಾಂತಿಯಾತ್ರೆ ಕೈಗೊಳ್ಳಲು ಹಾಗೂ ಶಾಂತಿ ಸಮಿತಿಗಳನ್ನು ರಚಿಸಲು ತಮಗೆ ಬಿಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವರಿಕೆ ಮಾಡಿಸಬೇಕು ಎಂದು ಕೋರಿದ್ದಾರೆ.

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ, ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ.ರಾಜ, ಡಿಎಂಕೆಯ ಸಂಸದೀಯ ಪಕ್ಷದ ಮುಖಂಡರಾದ ಟಿ.ಆರ್.ಬಾಲು, ಎನ್‌ಸಿಪಿಯ ಸಂಸತ್ ಸದಸ್ಯ ಪ್ರಫುಲ್ ಪಟೇಲ್, ಲೋಕತಾಂತ್ರಿಕ್ ಜನತಾದಳದ ಅಧ್ಯಕ್ಷ ಶರದ್ ಯಾದವ್, ಆಮ್ ಆದ್ಮಿ ಪಾರ್ಟಿಯ ಸಂಸತ್ ಸದಸ್ಯ ಸಂಜಯ್ ಸಿಂಗ್ ಮತ್ತು ಆರ್‌ಜೆಡಿಯ ಸಂಸತ್ ಸದಸ್ಯ ಪ್ರೊ. ಮನೋಜ್ ಕುಮಾರ್ ಝಾ ಈ ಮನವಿ ಪತ್ರಕ್ಕೆ ಸಹಿ ಹಾಕಿದ್ದಾರೆ.

ರಾಷ್ಟ್ರೀಯ ರಾಜಧಾನಿ ದಿಲ್ಲಿಯನ್ನು ಮೂರು ದಿನಗಳ ಕಾಲ ತಲ್ಲಣಗೊಳಿಸಿರುವ ಗಲಭೆಗಳ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸುತ್ತ ಈ ಮನವಿ ಪತ್ರ, ಅದನ್ನು ಸಲ್ಲಿಸುವ ವೇಳೆಗೆ 37ಹೆಣಗಳನ್ನು ಬೀಳಿಸಿದೆ, ಅದು ಈಗಲೂ ಹೆಚ್ಚುತ್ತಲೇ ಇದೆ, 200ಕ್ಕೂ ಹೆಚ್ಚು ಮಂದಿಯನ್ನು ಗಾಯಾಳುಗಳಾಗಿ ಮಾಡಿದೆ. ಮನೆಮಾರುಗಳು, ಆಸ್ತಿಗಳನ್ನು ಸುಟ್ಟುಹಾಕಿದ್ದು, ಇದರಿಂದಾಗಿ ಸಾವಿರಾರು ಮಂದಿ ಗುಳೆ ಹೋಗಬೇಕಾಗಿ ಬಂದಿದೆ. ಇದು ಸಶಸ್ತ್ರ, ನಿಯಮಹೀನ ಗೂಂಡಾ ಪಡೆಗಳು ಸೃಷ್ಟಿಸಿರುವ ಒಂದು ಬೃಹತ್ ಪ್ರಮಾಣದ ಮಾನವ ವೇದನೆ. ಈ ಗೂಂಡಾ ಪಡೆಗಳು ಮುಕ್ತವಾಗಿ, ಯಾವುದೇ ಅಡೆತಡೆಯಿಲ್ಲದೆ ಅಡ್ಡಾಡಲು ಭದ್ರತಾ ಪಡೆಗಳು ಬಿಟ್ಟಿವೆ ಎಂಬ ಸಂಗತಿಯನ್ನು ಈ ಮನವಿ ಪತ್ರ ರಾಷ್ಟ್ರಪತಿಗಳ ಗಮನಕ್ಕೆ ತಂದಿದೆ. ಇದು ಅತ್ಯಂತ ಖಂಡನೀಯ, ಭಾರತೀಯ ಸಂವಿಧಾನದ ಅಡಿಯಲ್ಲಿ ಕಾರ್ಯನಿರ್ವಹಿಸಬೇಕಾದ ಜಾತ್ಯತೀತ ಪ್ರಜಾಸತ್ತಾತ್ಮಕ ಗಣತಂತ್ರದಲ್ಲಿ ಇದನ್ನು ಖಂಡಿತಾ ಒಪ್ಪಲು ಸಾಧ್ಯವಿಲ್ಲ ಎಂದು ಮನವಿ ಪತ್ರ ಹೇಳಿದೆ. ರಾಷ್ಟ್ರಪತಿಗಳು ತಕ್ಷಣವೇ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳುವಂತೆ ಮಧ್ಯಪ್ರವೇಶಿಸಬೇಕು ಎಂದು ಅದು ಕೋರಿದೆ:

1. ತಕ್ಷಣವೇ ಶಾಂತಿಯು ಸ್ಥಾಪನೆ ಮತ್ತು ರಾಷ್ಟ್ರಪತಿಗಳಿಗೆ ನೇರವಾಗಿ ಉತ್ತರದಾಯಿಯಾಗಿರುವ ಉಪರಾಜ್ಯಪಾಲ ಮತ್ತಿತರ ಅಧಿಕಾರಿಗಳಿಗೆ ತ್ವರಿತವಾಗಿ ಪರಿಸ್ಥಿತಿಯನ್ನು ಸಾಮಾನ್ಯಗೊಳಿಸುವಂತೆ ನಿರ್ದೇಶನ ನೀಡಬೇಕು, ಹಾಗೂ ಉದ್ರೇಕಕಾರಿ ದ್ವೇಷ ಭಾಷಣಗಳನ್ನು ಮಾಡಿದ ಎಲ್ಲರ ವಿರುದ್ಧ ತಕ್ಷಣವೇ ಎಫ್‌ಐಆರ್ ಹಾಕುವಂತೆ ಮತ್ತು ಹಿಂಸಾಚಾರ ನಡೆಸಿದವರನ್ನು ಶಿಕ್ಷಿಸುವಂತೆ ಖಾತ್ರಿಪಡಿಸಬೇಕು

2. ಮನೆಮಾರು ಕಳಕೊಂಡವರಿಗೆ ಪರಿಹಾರ ಶಿಬಿರಗಳನ್ನು ರಚಿಸಬೇಕು, ಅವರ ಮೇಲೆ ಇನ್ನಷ್ಟು ಹಲ್ಲೆಗಳು ನಡೆಯದಂತೆ ಭದ್ರತೆ ಹಾಗೂ ಅಗತ್ಯ ಸರಕುಗಳ ಸಾಕಷ್ಟು ಪೂರೈಕೆ ಒದಗಿಸಬೇಕು.

3. ಸತ್ತವರ ಕುಟುಂಬಗಳಿಗೆ, ಮತ್ತು ಈ ಹಲ್ಲೆಗಳಲ್ಲಿ ಗಾಯಗೊಂಡವರಿಗೆ ಸೂಕ್ತ ಪರಿಹಾರಗಳನ್ನು ಪ್ರಕಟಿಸಬೇಕು.

4. ಮನೆ, ಆಸ್ತಿ, ವ್ಯಾಪಾರದ ಸ್ಥಳಗಳು ಧ್ವಂಸಗೊಂಡುದರಿಂದ ಆಗಿರುವ ನಷ್ಟಗಳಿಗೆ ಸಾಕಷ್ಟು ಪರಿಹಾರ.

5. ಗಲಭೆಪೀಡಿತ ಪ್ರದೇಶಗಳಲ್ಲಿ ಬಹುಧರ್ಮೀಯ ಮತ್ತು ಅಂತರಧರ್ಮೀಯ ಶಾಂತಿಯನ್ನು ಮತ್ತು ಜನಗಳ ನಡುವೆ ಸಾಮಾಜಿಕ ಸಾಮರಸ್ಯದ ಸಂದೇಶವನ್ನು ಬಲಪಡಿಸಲು ಶಾಂತಿಯಾತ್ರೆಗಳನ್ನು ಸಂಘಟಿಸ ಬಯಸುವ ನಮ್ಮಲ್ಲಿನ ಕೆಲವರಿಗೆ ಅನುಮತಿ ನೀಡಬೇಕು

6. ಈ ಗಲಭೆಗಳು ಜನಗಳ ನಡುವೆ, ಅದರಲ್ಲೂ ಮಕ್ಕಳ ನಡುವೆ ಕಲ್ಪಿಸಲೂ ಆಗದ ಮಾನಸಿಕ ವೇದನೆಯನ್ನು ಉಂಟು ಮಾಡಿರುವುದರಿಂದ, ಪೀಡಿತ ಪ್ರದೇಶಗಳಲ್ಲಿ ಇವನ್ನು ನಿರ್ವಹಿಸಲು ಟ್ರೌಮಾ(ಭಾವಾಘಾತ) ಕೇಂದ್ರಗಳನ್ನು ತೆರೆಯಬೇಕು.

ಈ ಕ್ರಮಗಳನ್ನು ತುರ್ತಾಗಿ ಕೈಗೊಳ್ಳುವಂತೆ ಖಾತ್ರಿ ಪಡಿಸಬೇಕು ಮತ್ತು ಗಲಭೆ ಪೀಡಿತ ಪ್ರದೇಶಗಳಲ್ಲಿ ಶಾಂತಿಯಾತ್ರೆ ಕೈಗೊಳ್ಳಲು ಹಾಗೂ ಶಾಂತಿ ಸಮಿತಿಗಳನ್ನು ರಚಿಸಲು ತಮಗೆ ಬಿಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವರಿಕೆ ಮಾಡಿಸಬೇಕು ಎಂದು ಈ ಏಳು ಪಕ್ಷಗಳ ಮುಖಂಡರು ರಾಷ್ಟ್ರಪತಿಗಳನ್ನು ಕೋರಿದ್ದಾರೆ.

ಪೋಲೀಸ್ ವಿಫಲವಾಗಿದೆ, ಸೇನೆಯನ್ನು ಕರೆಸಿ

ಪುಟ 8 ರಿಂದ

ಸುಮ್ಮನೇ ನಿಂತಿದ್ದುದು ಕಂಡು ಬಂದರೆ, ಇತರ ಹಲವು ಸಂದರ್ಭಗಳಲ್ಲಿ ಪೋಲೀಸರು ಜನಜಂಗುಳಿಯೊಂದಿಗೆ ಶಾಮೀಲಾಗಿರುವುದು ಮತ್ತು ನೆರವಾಗಿರುವುದು ಕೂಡ ಕಂಡು ಬಂದಿದೆ.

ಪೋಲೀಸರ ವಿಫ್‌ಲತೆ ಎಷ್ಟು ಎದ್ದು ಕಾಣುತ್ತಿದೆಯೆಂದರೆ, ಸುಪ್ರಿಂ ಕೋರ್ಟ್ ಇಂದು ಗಲಭೆಗಳಿಗೆ ಸಂಬಂಧಪಟ್ಟಂತೆ, ಪೋಲಿಸರಲ್ಲಿ ವೃತ್ತಿಪರತೆ ಮತ್ತು ಸ್ವಾತಂತ್ರ್ಯದ ಕೊರತೆ ಇದೆ ಎಂದು ಟಿಪ್ಪಣಿ ಮಾಡಿದೆ. ದಿಲ್ಲಿ ಹೈಕೋರ್ಟ್ ಕೂಡ ತನ್ನ ಅಸಮ್ಮತಿಯನ್ನು ವ್ಯಕ್ತಪಡಿಸಿದೆ. ದಿಲ್ಲಿ ಪೋಲಿಸರ ಜವಾಬ್ದಾರಿ ನೇರವಾಗಿ ಕೇಂದ್ರದ ಗೃಹ ಮಂತ್ರಾಲಯದ್ದು. ಗೃಹಮಂತ್ರಿ ಅಮಿತ್ ಷಾ ಇದು ಸ್ವಯಂಸ್ಫೂರ್ತಿಯಿಂದ ಉಂಟಾಗಿರುವಂತದ್ದು ಎನ್ನುತ್ತ, ಅದರ ಯೋಜಿತ ಹಿಂಸಾಚಾರದ ಸ್ವರೂಪದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದಾರೆ.

ಈ ಹಿಂಸಾಚಾರದಲ್ಲಿ ಸ್ವಯಂಸ್ಫೂರ್ತತೆ ಎಂಬುದೇನೂ ಇಲ್ಲ. ಭಾನುವಾರ (ಫೆಬ್ರುವರಿ 23) ದಂದು ಒಬ್ಬ ಸ್ಥಳೀಯ ಬಿಜೆಪಿ ಮುಖಂಡ, ಕಪಿಲ್ ಮಿಶ್ರ, ಜಫರಾಬಾದ್‌ನಲ್ಲಿ ಒಬ್ಬ ಹಿರಿಯ ಪೋಲೀಸ್ ಅಧಿಕಾರಿಯ ಎದುರಲ್ಲೇ ಒಂದು ಉದ್ರೇಕಕಾರಿ ಭಾಷಣ ಮಾಡಿ, ಸಿಎಎ–ವಿರೋಧಿ ಪ್ರತಿಭಟನಾಕಾರರನ್ನು ಎಬ್ಬಿಸಿ ಬಿಡುವ ಬೆದರಿಕೆ ಹಾಕಿದ್ದರು. ಆದರೂ ಪೋಲಿಸ್ ಪಡೆ ಪರಿಸ್ಥಿತಿಯನ್ನು ನಿರ್ವಹಿಸಲು ಸಿದ್ಧವಾಗಿರಲಿಲ್ಲ.

ಜನಗಳ ನಡುವೆ ವಿಶ್ವಾಸವನ್ನು ಮತ್ತೆ ಕುದುರಿಸಲು ಮತ್ತು ಗಲಭೆಕೋರರ ವಿರುದ್ಧ ಕಟ್ಟುನಿಟ್ಟಾದ ಕ್ರಮಗಳನ್ನು ಕೈಗೊಳ್ಳಲು ಇರುವ ಏಕೈಕ ದಾರಿಯೆಂದರೆ ನಾಗರಿಕ ಅಧಿಕಾರಿಗಳ ನೆರವಿಗೆ ಸೇನೆಯನ್ನು ಕರೆ ತರುವುದು ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ ಪ್ರಾಣ ಕಳಕೊಂಡ ಎಲ್ಲರ ಕಟುಂಬಗಳಿಗೆ ಸಾಕಷ್ಟು ಪರಿಹಾರವನ್ನು ತೆರಬೇಕು, ಮತ್ತು ಗಾಯಗೊಂಡವರಿಗೂ ಪರಿಹಾರ ಒದಗಿಸಬೇಕು ಎಂದು ಆಗ್ರಹಿಸಿದೆ.

ಉದ್ರೇಕಿತರಾಗದೆ ಶಾಂತಿಯನ್ನು ಕಾಪಾಡಿಕೊಳ್ಳಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಎಲ್ಲ ಜನವಿಭಾಗಗಳಿಗೆ ಮನವಿ ಮಾಡಿಕೊಂಡಿದೆ. ಶಾಂತಿ ಮೆರವಣಿಗೆಗಳನ್ನು ಸಂಘಟಿಸುವಲ್ಲಿ, ಮತ್ತು ಪರಿಹಾರ ಹಾಗೂ ಮರುವಸತಿ ಚಟುವಟಿಕೆಗಳನ್ನು ನಡೆಸುವಲ್ಲಿ ಪಕ್ಷ ಎಲ್ಲ ಶಾಂತಿಪ್ರಿಯ ಶಕ್ತಿಗಳೊಂದಿಗೆ ಕೈಜೋಡಿಸುತ್ತದೆ ಎಂದು ಅದು ಹೇಳಿದೆ.

"ರಾಜಧಾನಿಯಲ್ಲಿ ಶಾಂತಿಯನ್ನು ಖಾತ್ರಿಪಡಿಸಲು ಒಂದು ನಿಷ್ಪಕ್ಷಪಾತೀ ಮತ್ತು ನ್ಯಾಯಯುತ ಮಧ್ಯಪ್ರವೇಶ ಈಗಿನ ಪ್ರಮುಖ ಆವಶ್ಯಕತೆ"

ಪುಟ 8 ರಿಂದ

ದಿಲ್ಲಿಯ ಹೊರಗಿಂದ ಯಾವುದೇ ಗಲಭೆಕೋರರು ರಾಜಧಾನಿಯನ್ನು ಪ್ರವೇಶಿಸಲು ಬಿಡಬಾರದು ಎಂದೂ ಕೇಳಿದ್ದಾ.ರೆ .

ಸಿ..ಎ.ಎ ವಿರುದ್ಧ ಪ್ರತಿಭಟನೆಗಳು, ಮುಖ್ಯವಾಗಿ ಮಹಿಳೆಯರ ನೇತೃತ್ವದಲ್ಲಿ ನಡೆಯುತ್ತಿರುವವುಗಳು ಶಾಂತಿಯುತವಾಗಿಯೇ ಇವೆ. ಕಳೆದ ಎರಡು ತಿಂಗಳಿಂದ ದಿಲ್ಲಿಯಲ್ಲಿ ಹಿಂಸಾಚಾರದ ಯಾವ ಘಟನೆಗಳೂ ನಡೆದಿಲ್ಲ. ಇದಕ್ಕೆ ಅಪವಾದಗಳೆಂದರೆ, ಕೇಂದ್ರ ಸರಕಾರದ ಒಬ್ಬ ಮಂತ್ರಿಯ ಚಿತಾವಣೆಗೊಳಗಾದವರು ಪ್ರತಿಭಟನಾಕಾರರ ಮೇಲೆ ನಡೆಸಿದ ಗುಂಡು ಹಾರಾಟಗಳು. ಇದು ಪೋಲೀಸರು ಮತ್ತು ಬೇಹುಗಾರಿಕೆ ಸಂಸ್ಥೆಗಳು ಶಾಂತಿಯುತ ಪ್ರತಿಭಟನೆಗಳನ್ನು ಛಿದ್ರಗೊಳಿಸಲು ಮತ್ತು ಅದಕ್ಕೊಂದು ಕೋಮು ಬಣ್ಣವನ್ನು ಕೊಡಲು ಕೆಲವರು ಪ್ರಯತ್ನಿಸುತ್ತಿದ್ದಾರೆ ಎಂಬ ಬಗ್ಗೆ ಜಾಗೃತರಾಗಬೇಕಾಗಿತ್ತು.

ಆದರೆ, ಒಂದೋ, ಬೇಹುಗಾರಿಕೆ ಸಂಸ್ಥೆಗಳು ವಿಫಲವಾಗಿರಬೇಕು, ಇಲ್ಲವೇ ಅವುಗಳ ವರದಿಗಳನ್ನು ಉಪೇಕ್ಷಿಸಿರಬೇಕು ಎಂದು ಬೃಂದಾ ಕಾರಟ್ ಮತ್ತು ಕೆ.ಎಂ. ತಿವಾರಿ ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ಮಂಗಳವಾರ ರಾತ್ರಿ ಕಂಡಲ್ಲಿ ಗುಂಡು ಆದೇಶ ಹೊರಡಿಸಲಾಗಿದೆ ಎಂದು ವರದಿಯಾಗಿದೆ. ಆದರೆ ಕಪಿಲ್ ಮಿಶ್ರರಂತ ದ್ವೇಷ ಹರಡುವವರ ಬಂಧನ ಇನ್ನೂ ಆಗಿಲ್ಲ.

ರಾಜಧಾನಿಯಲ್ಲಿ ಶಾಂತಿಯನ್ನು ಖಾತ್ರಿಪಡಿಸಲು ಒಂದು ನಿಷ್ಪಕ್ಷಪಾತೀ ಮತ್ತು ನ್ಯಾಯಯುತ ಮಧ್ಯಪ್ರವೇಶ ಈಗಿನ ಪ್ರಮುಖ ಆವಶ್ಯಕತೆ ಎಂದು ಅವರು ಕೇಂದ್ರ ಗೃಹಮಂತ್ರಿಗಳಿಗೆ ನೆನಪಿಸಿದ್ದಾರೆ.

ಅವರ ಪತ್ರದ ಪೂರ್ಣಪಾಠವನ್ನು ಈ ಮುಂದೆ ಕೊಡಲಾಗಿದೆ:

ಪ್ರಿಯ ಶ್ರೀ ಅಮಿತ್ ಷಾ ಜೀ,

ದಿಲ್ಲಿಯ ಆಘಾತಕಾರೀ ಹಿಂಸಾಚಾರದ ಘಟನೆಗಳಲ್ಲಿ ಒಬ್ಬ ಪೋಲೀಸ್ ಕಾನ್ ಸ್ಟೇಬಲ್ ದುರಂತಮಯ ಸಾವು ಮತ್ತು ಆರು ನಾಗರಿಕರ ಸಾವುಗಳು ಬಹಳ ಆತಂಕ ಉಂಟು ಮಾಡುವ ಸಂಗತಿ. ದಿಲ್ಲಿಯಲ್ಲಿ ಪೋಲೀಸ್ ಕಾನಸ್ಟೇಬಲ್ ಸಾವು ಮತ್ತು ಹಿಂಸಾಚಾರಕ್ಕೆ ಹೊಣೆಯಾಗಿರುವವರನ್ನು ನಾವು ಬಲವಾಗಿ ಖಂಡಿಸುತ್ತೇವೆ. ದಿಲ್ಲಿ ಪೋಲೀಸ್ ಮತ್ತು ಸಂಬಂಧಪಟ್ಟ ಏಜೆನ್ಸಿಗಳು ತಮ್ಮ ಮಂತ್ರಾಲಯದ ಹತೋಟಿಯಡಿ ಬರುತ್ತವೆ. ಆದ್ದರಿಂದ ನಾವು ಈ ಪತ್ರವನ್ನು ತಮಗೆ ಬರೆಯುತ್ತಿದ್ದೇವೆ. ತಮ್ಮಡನೆ ನಮ್ಮ ಆತಂಕಗಳನ್ನು ಹಂಚಿಕೊಳ್ಳಲು ಅನುವಾಗುವಂತೆ ತಮ್ಮ ಭೇಟಿಗೆ ಅವಕಾಶ ಕೊಡಬೇಕು ಎಂದು ತಮ್ಮ ಕಚೇರಿಯನ್ನು ನಾವು ಕೇಳಿಕೊಂಡಿದ್ದೇವೆ.

ಸಿ..ಎ.ಎ ವಿರುದ್ಧ ಪ್ರತಿಭಟನೆಗಳು, ಮುಖ್ಯವಾಗಿ ಮಹಿಳೆಯರ ನೇತೃತ್ವದಲ್ಲಿ ನಡೆಯುತ್ತಿರುವವುಗಳು ಶಾಂತಿಯುತವಾಗಿಯೇ ಇವೆ. ಕಳೆದ ಎರಡು ತಿಂಗಳಿಂದ ದಿಲ್ಲಿಯಲ್ಲಿ ಹಿಂಸಾಚಾರದ ಯಾವ ಘಟನೆಗಳೂ ನಡೆದಿಲ್ಲ. ಇದಕ್ಕೆ ಅಪವಾದಗಳೆಂದರೆ, ಕೇಂದ್ರ ಸರಕಾರದ ಒಬ್ಬ ಮಂತ್ರಿಯ ಚಿತಾವಣೆಗೊಳಗಾದವರು ಪ್ರತಿಭಟನಾಕಾರರ ಮೇಲೆ ನಡೆಸಿದ ಗುಂಡು ಹಾರಾಟಗಳು. ಇದು ಪೋಲೀಸರು ಮತ್ತು ಬೇಹುಗಾರಿಕೆ ಸಂಸ್ಥೆಗಳು ಶಾಂತಿಯುತ ಪ್ರತಿಭಟನೆಗಳನ್ನು ಛಿದ್ರಗೊಳೀಸಲು ಮತ್ತು ಅದಕ್ಕೊಂದು ಕೋಮು ಬಣ್ಣವನ್ನು ಕೊಡಲು ಕೆಲವರು ಪ್ರಯತ್ನಿಸುತ್ತಿದ್ದಾರೆ ಎಂಬ ಬಗ್ಗೆ ಜಾಗೃತರಾಗಬೇಕಾಗಿತ್ತು.

ಆದರೆ, ಒಂದೋ, ಬೇಹುಗಾರಿಕೆ ಸಂಸ್ಥೆಗಳು ವಿಫಲವಾಗಿರಬೇಕು, ಇಲ್ಲವೇ ಅವುಗಳ ವರದಿಗಳನ್ನು ಉಪೇಕ್ಷಿಸಿರಬೇಕು.

ಭಾನುವಾರದಂದು, ಒಬ್ಬ ಬಿಜೆಪಿ ಮುಖಂಡ ಕಪಿಲ್ ಮಿಶ್ರ ವಿವಿಧೆಡೆಗಳಲ್ಲಿ ಪ್ರತಿಭಟನೆ ನಡೆಸುತ್ತಿರುವವರನ್ನು ಬಲವಂತವಾಗಿ ಹೊರಹಾಕಬೇಕು ಎಂದು ಬಹಿರಂಗವಾಗಿಯೇ ಒಂದು ಕರೆ ನೀಡಿದರು. ಪ್ರತಿಭಟನಾ ಸ್ಥಳಗಳ ಸುತ್ತಲಿನ ಪ್ರದೇಶಗಳಲ್ಲಿ ಲಾಠಿಗಳು ಮತ್ತು ಇಟ್ಟಿಗೆಗಳಿಂದ ಸಜ್ಜಿತರಾಗಿದ್ದ ಮಂದಿಗಳ ಗುಂಪುಗಳು ಅತ್ಯಂತ ಉದ್ರೇಕಕಾರಿ ಮತ್ತು ಕೋಮುವಾದಿ ಘೋಷಣೆಗಳನ್ನು ಹಾಕುತ್ತಿದ್ದ ವಿವರವಾದ ವರದಿಗಳು ಮತ್ತು ವೀಡಿಯೊ ಚಿತ್ರಗಳು ಲಭ್ಯ ಇವೆ. ಪ್ರತಿಭಟನಾ ಸ್ಥಳಗಳನ್ನು ಅಸ್ತವ್ಯಸ್ತಗೊಳಿಸಲು ಮತ್ತು ಅವುಗಳ ಮೇಲೆ ದಾಳಿ ಮಾಡಲು ಸಜ್ಜುಗೊಳಿಸುತ್ತಿದ್ದುದರ ಕೋಮುವಾದಿ ಸ್ವರೂಪವನ್ನು ಕುರಿತಂತೆ ಒಬ್ಬ ಪತ್ರಕರ್ತರ ನಿರೂಪಣೆ ಒಂದು ಸಚಿತ್ರ ಸಾಕ್ಷ್ಯ. ಇದು ಹಿಂಸಾತ್ಮಕ ಘರ್ಷಣೆಗೆ ಮತ್ತು ಪ್ರತಿಹಿಂಸಾಚಾರಕ್ಕೆ ಕಾರಣವಾಗಿದೆ. ಒಬ್ಬ ವ್ಯಕ್ತಿ, ನಂತರ ಶಾರುಕ್ ಎಂದು ಗುರುತಿಸಲ್ಪಟ್ಟವ, ಒಬ್ಬ ಪೋಲೀಸ್ ಸಿಬ್ಬಂದಿಯ ಮೇಲೆ ಒಂಧು ರಿವಾಲ್ವರ್ ಝಳಪಿಸಿದ್ದು ಮತ್ತು ನಂತರ ಗುಂಡು ಹಾರಿಸಿದ್ದು, ಪ್ರತಿ–ಹಿಂಸಾಚಾರದಲ್ಲಿ ಕ್ರಿಮಿನಲ್ ವ್ಯಕ್ತಿಗಳು ಸೇರಿಕೊಂಡದ್ದನ್ನು ತೋರಿಸುತ್ತ.ದೆ

ವೀಡಿಯೊ ಚಿತ್ರಗಳಲ್ಲಿ ಕಾಣುವಂತೆ, ಪೋಲೀಸ್ ಪಡೆಯ ಒಂದು ವಿಭಾಗ ಕಲ್ಲೆಸೆಯುತ್ತಿದ್ದ ಜನಜಂಗುಳಿಯೊಂದಿಗೆ ಸೇರಿಕೊಂಡು ತಮ್ಮ ವೃತ್ತಿಪರತೆಯನ್ನು ಸಂಪೂರ್ಣ ಬದಿಗೊತ್ತಿ ವರ್ತಿಸಿರುವುದು ಆಘಾತಕಾರಿ. ಅವರ ವಿರುದ್ಧ ಬಲವಾದ ಕ್ರಮವನ್ನು ಕೈಗೊಳ್ಳಬೇಕು, ಏಕೆಂದರೆ, ಇದರಿಂದಾಗಿ ದಿಲ್ಲಿ ಪೋಲೀಸ್ ಒಂದು ನಿಷ್ಪಕ್ಷಪಾತೀ ಪಡೆ ಎಂಬ ಅದರ ವಿಶ್ವಾಸಾರ್ಹತೆಗೆ ತೀವ್ರ ಕುಂದು ಬಂದಿದೆ.

ರಾಜಧಾನಿಯಲ್ಲಿ ಶಾಂತಿಯನ್ನು ಖಾತ್ರಿಪಡಿಸಲು ಒಂದು ನಿಷ್ಪಕ್ಷಪಾತೀ ಮತ್ತು ನ್ಯಾಯಯುತ ಮಧ್ಯಪ್ರವೇಶ ಈಗಿನ ಪ್ರಮುಖ ಆವಶ್ಯಕತೆ. ಗೃಹಮಂತ್ರಿಯಾಗಿ ನೀವು ಶಾಂತಿಗಾಗಿ ತಕ್ಷಣ ಮಧ್ಯಪ್ರವೇಶ ಮಾಡುತ್ತೀರಿ ಎಂದು ಆಶಿಸಿದ್ದ ರಾಜಧಾನಿಯ ಜನಗಳು, ನಿಮ್ಮ ಶಾಂತಿಯ ಮನವಿ ಒಂದೂವರೆ ದಿನದ ವಿಳಂಬದ ನಂತರ ಬಂತು ಎಂಬುದನ್ನು ನೋಡಿ ನಿರಾಶರಾಗಿದ್ದಾರೆ,

ನಿಮ್ಮ ಮನವಿಯನ್ನು ಅನುಸರಿಸಿ ನೀವು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು , ಮತ್ತು ನಿಮ್ಮ ಪ್ರಭಾವದೊಳಗಿರುವ ರಾಜಕೀಯ ಶಕ್ತಿಗಳು ಶಾಂತಿಯ ಅಗತ್ಯದತ್ತ ಗಮನ ಹರಿಸುವಂತೆ ಖಾತ್ರಿಗೊಳಿಸಬೇಕು ಎಂದೂ ನಾವು ಕೋರುತ್ತೇವೆ. ಶಾಂತಿಗಾಗಿ ನಿಮ್ಮ ಮಧ್ಯಪ್ರವೇಶ, ಕಳೆದೆರಡು ದಿನಗಳ ಘಟನೆಗಳು ಚುನಾವಣಾ ಫಲಿತಾಂಶಗಳಿಗೆ 'ಸೇಡು' ಎಂದು ಸಾರ್ವಜನಿಕರ ನಡುವೆ ಉಂಟಾಗಿರುವ ಸಂದೇಹಗಳನ್ನು ನಿವಾರಿಸುತ್ತದೆ. ಈ ಸಂದರ್ಭದಲ್ಲಿ ಕಪಿಲ್ ಮಿಶ್ರ ವಿರುದ್ಧ ಕ್ರಮ, ಜನಗಳಲ್ಲಿ, ತಾವು ಶಾಂತಿಗಾಗಿ ಮತ್ತು ಗಲಭೆಕೋರರ ವಿರುದ್ಧ ನಿಜವಾಗಿಯೂ ನಿಷ್ಪಕ್ಷಪಾತಪೂರ್ಣ ಕ್ರಮಗಳನ್ನು ಕೈಗೊಳ್ಳುತ್ತೀರಿ ಎಂಬ ವಿಶ್ವಾಸವನ್ನು ತರುತ್ತದೆ. ದ್ವೇಷ ಮತ್ತು ಹಿಂಸಾಚಾರವನ್ನು ಹರಡುವುದರಲ್ಲಿ ತೊಡಗಿರುವ ಎಲ್ಲರನ್ನೂ, ಅವರ ರಾಜಕೀಯ ಸಂಪರ್ಕಗಳು ಮತ್ತು ಬಣ್ಣ ಏನೇ ಇರಲಿ, ಬಂಧಿಸಬೇಕು.

ದಿಲ್ಲಿಯ ಹೊರಗಿಂದ ಯಾವುದೇ ಗಲಭಕೋರರು ರಾಜಧಾನಿಯನ್ನು ಪ್ರವೇಶಿಸಲು ಬಿಡಬಾರದು ಎಂದೂ ನಾವು ನಿಮ್ಮನ್ನು ಕೇಳಿಕೊಳ್ಳುತ್ತೇವೆ.

ನ್ಯಾಯಾಂಗ ತನಿಖೆಯೇ ನಡೆಯಬೇಕು

ಪುಟ 8 ರಿಂದ

ಹುವಾ ಸೋ ಹುವಾ) ಎಂಬ ಆಘಾತಕಾರೀ ಹೇಳಿಕೆಯನ್ನು ಕೊಟ್ಟಿದ್ದಾರೆ. ದಿಲ್ಲಿ ಹೈಕೋರ್ಟಿನಲ್ಲಾದ ಅಸಭ್ಯ ಬೆಳವಣಿಗೆಯಗಳಲ್ಲೂ ಇದೇ ನಿಲುವು ಕಾಣ ಬಂದಿದೆ. ಅಲ್ಲಿ ದಿಲ್ಲಿ ಪೋಲೀಸರು ಕೋಮುವಾದಿ ಧ್ರುವೀಕರಣವನ್ನು ಪ್ರಚೋದಿಸಿದ ಸಾರ್ವಜನಿಕ ಭಾಷಣಗಳನ್ನು ಕೊಟ್ಟವರನ್ನು ತಪ್ಪಿತಸ್ಥರು ಎಂದು ಗುರುತಿಸಲೂ ಮುಲಾಜಿಲ್ಲದೆ ನಿರಾಕರಿಸಿದ್ದಾರೆ.

ಜನಗಳ ನಡುವೆ, ಹಿಂಸಾಚಾರದ ನಂತರದ ಮನೋಘಾತವನ್ನು ಎದುರಿಸಬೇಕಾದ ಈಶಾನ್ಯ ದಿಲ್ಲಿಯ ಜನಗಳು ಮತ್ತು ಅಭದ್ರತೆಯ ಭಾವ ಕಾಡುತ್ತಿರುವ ಇತರೆಡೆಗಳಲ್ಲಿನ ಜನಗಳ ನಡುವೆ ವಿಶ್ವಾಸವನ್ನು ಮೂಡಿಸುವುದು ಈಗಿನ ಅಗತ್ಯ ಎಂದು ತಾನು ಭಾವಿಸುವುದಾಗಿ ಹೇಳಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಇದನ್ನು ಮಾಡುವ ಬದಲು, ತಥಾಕಥಿತ ತನಿಖೆಯನ್ನು ಹಿಂಸಾಚಾರಗಳನ್ನು ನಡೆಸಿದವರ ಕೃತ್ಯಗಳನ್ನು ಮುಚ್ಚಿ ಹಾಕಲು ಹಾಗೂ ಆಯ್ದಾಯ್ದು 'ಕ್ಲೀನ್ ಚಿಟ್'ಗಳನ್ನು ಕೊಡಲು ಬಳಸಿಕೊಂಡರೆ ಇದು ಕಂದರವನ್ನು ಮತ್ತಷ್ಟು ಆಳಗೊಳಿಸುತ್ತದಲ್ಲದೇ ಖಂಡಿತಾ ಬೇರೇನೂ ಮಾಡಲಾರದು ಎಂದು ಎಚ್ಚರಿಸಿದೆ.

ಆದ್ದರಿಂದ, ಕೇಂದ್ರ ಸರಕಾರ, ದಿಲ್ಲಿ ಪೋಲೀಸರ ಪಾತ್ರದ ಮೇಲೆ ಭಾರೀ ಕರಿಮೋಡಗಳು ಕವಿದಿರುವಾಗ, ಸರ್ವತೋಮುಖ ವಿಶ್ವಾಸವನ್ನು ಮತ್ತೆ ನೆಲೆಗೊಳಿಸುವಲ್ಲಿ ಪಕ್ಷಪಾತದ ನಿಲುವಿನ ಬಗ್ಗೆ ಸಂದೇಹಗಳನ್ನು ನಿವಾರಿಸಬೇಕಾಗಿದೆ, ಅದಕ್ಕೆ ಸುಪ್ರಿಂ ಕೋರ್ಟಿನ ನ್ಯಾಯಾಧೀಶರಿಂದ ನ್ಯಾಯಾಂಗ ತನಿಖೆ, ಅಥವ ಸುಪ್ರಿಂ ಕೋರ್ಟಿನ ಉಸ್ತುವಾರಿಯ ತನಿಖೆಯನ್ನೇ ಮಾಡಬೇಕಾದ್ದು ಅನಿವಾರ್ಯವಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.



ಅಖಿಲ ಭಾರತ ಸಾಮೂಹಿಕ ಸಂಘಟನೆಗಳ ಸ್ಥಾಪನೆ

ಪುನರ್ಸಂಘಟಿತ ಸಿಪಿಐ ಉದಯ ಮತ್ತು ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷದೊಂದಿಗಿನ ಐಕ್ಯ ಕಾರ್ಯಾಚರಣೆಯು ನಮ್ಮ ದೇಶದ ಸಮಾಜೋ-ರಾಜಕೀಯ ಬದುಕಿನ ಮೇಲೆ ಗಾಢ ಪ್ರಭಾವ ಬೀರಿದೆ. ವಾರ್ಷಿಕ ಕಾಂಗ್ರೆಸ್ ಅಧಿವೇಶನದಲ್ಲಿನ ಅಧ್ಯಕ್ಷೀಯ ಭಾಷಣ ಹಾಗೂ ಅಂಗೀಕರಿಸಿದ ನಿರ್ಣಯಗಳಲ್ಲಿ ಕೂಡ ಎಡ ಚಿಂತನೆಗಳು ಪ್ರತಿಧ್ವನಿಸಿದವು. ಹೊಸ ಎಡ ಪ್ರವೃತ್ತಿಯು ರಾಜಕೀಯ ಹಾಗೂ ಆರ್ಥಿಕ ವಲಯಗಳ ಮೇಲೆ ಮಾತ್ರವಲ್ಲದೇ ಸಾಂಸ್ಕೃತಿಕ ಚಳುವಳಿಯ ಮೇಲೂ ತನ್ನ ಅಚ್ಚೊತ್ತಲು ಆರಂಭಿಸಿತು. 1936ರಲ್ಲೇ, ಮೂರು ಅಖಿಲ ಭಾರತ ಸಂಘಟನೆಗಳನ್ನು ಆಲ್ ಇಂಡಿಯಾ ಕಿಸಾನ್ ಸಭಾ(ಎಐಕೆಎಸ್), ಆಲ್ ಇಂಡಿಯಾ ಸ್ಟೂಡೆಂಟ್ಸ್ ಫೆಡರೇಷನ್(ಎ.ಐ.ಎಸ್.ಎಫ್) ಮತ್ತು ಪ್ರೋಗ್ರೆಸಿವ್ ರೈಟರ್ಸ್ ಅಸೋಶಿಯೇಷನ್(ಪಿಡಬ್ಲ್ಯುಎ) – ಸ್ಥಾಪಿಸಲಾಯಿತು. ಕಾಂಗ್ರೆಸ್ಸಿನಲ್ಲಿದ್ದ ಎಡ ಮತ್ತು ಪ್ರಗತಿಪರ ವಿಭಾಗಗಳೊಂದಿಗೆ ಸೇರಿ ಕಮ್ಯುನಿಸ್ಟರು ಅವುಗಳ ಸ್ಥಾಪನೆಯಲ್ಲಿ ಮಹತ್ವದ ಪಾತ್ರ ವಹಿಸಿದರು.

ಕನ್ನಡಕ್ಕೆ: ಟಿ.ಸುರೇಂದ್ರ ರಾವ್

ಸಾಮಾಜಿಕ ಬದಲಾವಣೆಗಾಗಿ ಅಪಾರ ಜನ ವಿಭಾಗಗಳನ್ನು ಅಣಿನೆರೆಸುವ ತಮ್ಮ ಪ್ರಯತ್ನದ ಭಾಗವಾಗಿ ಹಲವಾರು ವರ್ಗ ಹಾಗೂ ಸಾಮೂಹಿಕ ಸಂಘಟನೆಗಳನ್ನು ಸ್ಥಾಪಿಸಲು ಕಮ್ಯುನಿಸ್ಟರು ಮುತುವರ್ಜಿ ವಹಿಸಿದರು. 1936ರಲ್ಲೇ, ಮೂರು ಅಖಿಲ ಭಾರತ ಸಂಘಟನೆಗಳನ್ನು – ಆಲ್ ಇಂಡಿಯಾ ಕಿಸಾನ್ ಸಭಾ(ಅಖಿಲ ಭರತ ಕಿಸಾನ್ ಸಭಾ–ಎಐಕೆಎಸ್), ಆಲ್ ಇಂಡಿಯಾ ಸ್ಟೂಡೆಂಟ್ಸ್ ಫೆಡರೇಷನ್(ಅಖಿಲ ಭಾರತ ವಿದ್ಯಾರ್ಥಿ ಒಕ್ಕೂಟ–ಎ.ಐ.ಎಸ್.ಎಫ್) ಮತ್ತು ಪ್ರೊಗ್ರೆಸಿವ್ ರೈಟರ್ಸ್ ಅಸೋಶಿಯೇಷನ್(ಪ್ರಗತಿಶೀಲ ಲೇಖಕರ ಸಂಘ–ಪಿಡಬ್ಲ್ಯುಎ) – ಸ್ಥಾಪಿಸಲಾಯಿತು. ಕಾಂಗ್ರೆಸ್ಸಿನಲ್ಲಿದ್ದ ಎಡ ಮತ್ತು ಪ್ರಗತಿಪರ ವಿಭಾಗಗಳೊಂದಿಗೆ ಸೇರಿ ಕಮ್ಯುನಿಸ್ಟರು ಅವುಗಳ ಸ್ಥಾಪನೆಯಲ್ಲಿ ಮಹತ್ವದ ಪಾತ್ರ ವಹಿಸಿದರು.

ಕಿಸಾನ್ ಸಭಾ:

ಕಮ್ಯುನಿಸ್ಟರ ಚಟುವಟಿಕೆಗಳು ಬಹಳ ಮುಖ್ಯವಾಗಿ ಅಖಿಲ ಭಾರತ ಕಾರ್ಮಿಕರ ಮತ್ತು ರೈತರ ಪಕ್ಷ ಮತ್ತು ಮೀರತ್ ಪಿತೂರಿ ಪ್ರಕರಣದ ಆರೋಪಿಗಳ ಸಾರ್ವತ್ರಿಕ ಹೇಳಿಕೆಗಳ ಮೂಲಕ ಪ್ರಚುರಪಡಿಸಿದ ಚಿಂತನೆಗಳು ಎಡಪಂಥೀಯರ ವಿಸ್ತರಣೆಗೆ ಕೊಡುಗೆ ನೀಡಿದವು ಮತ್ತು ಅವು ರೈತಾಪಿಗಳ ಮೇಲೆ ಗಮನಾರ್ಹ ಪ್ರಭಾವ ಬೀರಿದವು. ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡಲು ತಮ್ಮದೇ ಆದ ಒಂದು ಸ್ವತಂತ್ರ ವರ್ಗ ಸಂಘಟನೆಯನ್ನು ಸ್ಥಾಪನೆ ಮಾಡಬೇಕೆಂಬ ದೃಷ್ಟಿಕೋನದಿಂದ ಅವರು ಕೆಲಸ ಮಾಡಲು ಪ್ರಾರಂಭಿಸಿದರು. ಕಿಸಾನ್ ಸಭಾದ ಅಡಿಯಲ್ಲಿ ರೈತರನ್ನು ಸಂಘಟಿಸುವ ಮೂಲಕ ರೈತಾಪಿ ಜನಗಳ ಸಮಸ್ಯೆಯನ್ನು ಕೈಗೆತ್ತಿಕೊಳ್ಳುವಲ್ಲಿ ಕಮ್ಯುನಿಸ್ಟರು ಮುಂಚೂಣಿಯಲ್ಲಿದ್ದರು.

ಈ ಅವಧಿಯಲ್ಲಿ ದಮನಕಾರೀ ತೆರಿಗೆ ವ್ಯವಸ್ಥೆ ಮತ್ತು ಶೋಷಣೆಯ ವಿರುದ್ಧ ಭಾರಿ ರೈತ ಹೋರಾಟಗಳು ನಡೆದವು. ಮುವ್ವತ್ತರ ದಶಕದ ಆದಿ ಹಾಗೂ ಮಧ್ಯದಲ್ಲಿ ನಡೆದ ಈ ಶಕ್ತಿಯುತ ಕಿಸಾನ್ ಚಳುವಳಿಗಳು ಪ್ರಮುಖವಾಗಿ ಭೂಮಾಲಕರ ದಾಳಿ, ಬಲವಂತ ದುಡಿಮೆ ಮತ್ತಿತರ ಶೋಷಣೆಗಳಿಂದ ರೈತರನ್ನು ರಕ್ಷಿಸುವುದೇ ಆಗಿದ್ದವು. 1930 ರ ಅರ್ಥಿಕ ಮಹಾ ಕುಸಿತವು ರೈತರನ್ನು ಇನ್ನಷ್ಟು ಕಂಗೆಡಿಸಿದವು. 1936 ರ ಅಖಿಲ ಭಾರತ ಕಿಸಾನ್ ಸಭಾದ ಸ್ಥಾಪನೆಗೂ ಮುಂಚೆ ಹಲವಾರು ರಾಜ್ಯ ಮಟ್ಟದ ಸಂಘಗಳು ರಚನೆಯಾದವು; ತಕ್ಷಣದ ಪರಿಹಾರಕ್ಕಾಗಿ ಮಾತ್ರವಲ್ಲದೇ ಭೂಮಾಲಕ ಪದ್ಧತಿಯ ವಿರುದ್ಧದ ಸ್ಪಷ್ಟ ಉದ್ದೇಶಗಳೊಂದಿಗೆ ಈ ಸಂಘಗಳು ರಚಿಸಲ್ಪಟ್ಟವು. ಕಮ್ಯುನಿಸ್ಟ್ ಮುಖಂಡರುಗಳು ಕಾಂಗ್ರೆಸ್ ಸೋಶಿಯಲಿಸ್ಟರ ಜತೆ ಕೈಜೋಡಿಸಿ ರೈತರನ್ನು ಸಂಘಟಿಸಿದರು ಹಾಗೂ ಹಲವಾರು ಹೋರಾಟಗಳಿಗೆ ನಾಯಕತ್ವ ನೀಡಿದರು.

ಕಿಸಾನ್ ಸಭಾದ 1936ರ ಸ್ಥಾಪನಾ ಸಮ್ಮೇಳನವು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ವಾರ್ಷಿಕ ಸಭೆಯ ಸಮಯದಲ್ಲಿಯೇ ನಡೆಯಿತು. ವರ್ಗ ಸಂಘಟನೆಯಾಗಿ ತನ್ನ ಪ್ರತ್ಯೇಕ ಅಸ್ತಿತ್ವ ಕಾಯ್ದುಕೊಳ್ಳುತ್ತಲೇ ರೈತ ಚಳುವಳಿಯನ್ನು ರಾಷ್ಟ್ರೀಯ ಚಳುವಳಿಯ ಭಾಗವಾಗಿಯೇ ಕಾಣುವಂತೆ ಯೋಜಿಸಲಾಗಿತ್ತು. ಮುಂದಿನ ತಲೆಮಾರಿನ ಕಮ್ಯುನಿಸ್ಟ್ ನಾಯಕರುಗಳಾಗಿ ಹೊರಹೊಮ್ಮಿದ ಇಎಂಎಸ್ ನಂಬೂದಿರಿಪಾಡ್ ಮತ್ತು ಹರಿಕಿಷನ್ ಸಿಂಗ್ ಸುರ್ಜಿತ್ ಅವರುಗಳಂತಹ ಅನೇಕರು ಈ ಸ್ಥಾಪನಾ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

'ಆರ್ಥಿಕ ಶೋಷಣೆಯಿಂದ ರೈತರು ಸಂಪೂರ್ಣ ವಿಮೋಚನೆ ಹೊಂದಬೇಕು ಮತ್ತು ರೈತರು, ಕಾರ್ಮಿಕರು ಹಾಗೂ ದಮನಿತ ವರ್ಗಗಳು ಆರ್ಥಿಕ ಮತ್ತು ರಾಜಕೀಯ ಅಧಿಕಾರ ಸಾಧಿಸಬೇಕು' ಎಂಬ ಧ್ಯೇಯೋದ್ದೇಶಗಳನ್ನು ಕಿಸಾನ್ ಸಭಾದ ಸ್ಥಾಪನಾ ಸಮ್ಮೇಳನವು ಹೊಂದಿತ್ತು. ಈ ಸಮ್ಮೇಳನವು ಎರಡು ಮಹತ್ವದ ನಿರ್ಣಯಗಳನ್ನು ಅಂಗೀಕರಿಸಿತು. ಒಂದು, ಎಲ್ಲಾ ಸ್ವರೂಪಗಳಲ್ಲಿರುವ ಭೂಮಾಲಕತ್ವವನ್ನು ರದ್ದುಮಾಡಬೇಕು ಮತ್ತು ಉಳುವವರಿಗೇ ಜಮೀನಿನ ಒಡೆತನ ನೀಡಬೇಕು ಎಂಬ ಹಕ್ಕೊತ್ತಾಯ; ಎರಡನೆಯದು, ರೈತವಾರಿ ಪ್ರದೇಶಗಳಲ್ಲಿನ ಕಂದಾಯ ಪದ್ಧತಿಯನ್ನು ಆಮೂಲಾಗ್ರವಾಗಿ ಬದಲಾಯಿಸಬೇಕು ಮತ್ತು ಕಂದಾಯ ಪಾವತಿಯಿಂದ ಬಡರೈತರಿಗೆ ವಿನಾಯಿತಿ ನೀಡಿ ಶ್ರೇಣೀಕೃತ ಕಂದಾಯ ಪದ್ಧತಿ ಜಾರಿಯಾಗಬೇಕು ಎಂಬ ಹಕ್ಕೊತ್ತಾಯ. ಲಾಗುವಾಡುಗಳ ಬೆಲೆಗಳು, ಕೃಷಿ ಉತ್ಪನ್ನಗಳ ಮಾರಾಟ ಬೆಲೆಗಳು, ಋಣಭಾರಗಳು, ಬಿಟ್ಟಿ ದುಡಿಮೆ ಮತ್ತು ಗೇಣಿದಾರರಿಂದ ಭೂಮಾಲಕರ ಕಾನೂನುಬಾಹಿರ ವಸೂಲಿ ಇವುಗಳಲ್ಲದೇ ಭೂಮಾಲಕರ ಜಮೀನುಗಳನ್ನು ಭೂಹೀನರಿಗೆ ಹಂಚಬೇಕು ಹಾಗೂ ಖರಾಬು ಜಮೀನು ಮತ್ತು ಗೋಮಾಳಗಳನ್ನು ಗ್ರಾಮ ಮಟ್ಟದ ಪಂಚಾಯತುಗಳಿಗೆ ವಹಿಸಬೇಕು ಎಂಬ ಒತ್ತಾಯಗಳನ್ನೂ ಆ ನಿರ್ಣಯಗಳಲ್ಲಿ ಸೇರಿಸಲಾಗಿತ್ತು. ಕೃಷಿ ಕೂಲಿಗಾರರಿಗೆ ಕನಿಷ್ಠ ಕೂಲಿ ನಿಗದಿ ಮತ್ತು ಅವರ ಸಂಘಟನೆಗಳಿಗೆ ಕಾನೂನಾತ್ಮಕ ರಕ್ಷಣೆಗೆ ಕೇಂದ್ರ ಕಾನೂನುಗಳನ್ನು ತರಬೇಕು ಎಂದು ಎಐಕೆಎಸ್ ಒತ್ತಾಯ ಮಾಡಿತು. ಈ ಧ್ಯೇಯೋದ್ದೇಶಗಳು ಮತ್ತು ನಿರ್ಣಯಗಳ ಅಂಗೀಕಾರದಲ್ಲಿ ಕಮ್ಯುನಿಸ್ಟ್ ಮತ್ತು ಸೋಶಿಯಲಿಸ್ಟ್ ಚಿಂತನೆಗಳ ಸ್ಪಷ್ಟ ಪ್ರಭಾವ ಇರುವುದನ್ನು ಕಾಣಬಹುದು. ಈಹೋರಾಟದಲ್ಲಿ ರೈತಾಪಿ ಜನಗಳಿಗೆ ನೇತೃತ್ವ ನೀಡುವ ಮೂಲಕ





ಮಾತ್ರವೇ ಕಾರ್ಮಿಕ ವರ್ಗವು ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಯನ್ನು ಬಲಪಡಿಸುವ ಸಾಮರ್ಥ್ಯವುಳ್ಳ ಒಂದು ವರ್ಗವಾಗಿ ಎದ್ದು ಬರುತ್ತದೆ ಎಂಬ ಕಾರ್ಯತಂತ್ರವು ಕಮ್ಯುನಿಸ್ಟರಿಗೆ ಮಾರ್ಗದರ್ಶಿಯಾಗಿತ್ತು.

ವಿದ್ಯಾರ್ಥಿ ಒಕ್ಕೂಟ:

ರಷ್ಯನ್ ಕ್ರಾಂತಿಯ ಸಾಹಿತ್ಯ, ಸಮಾಜವಾದದ ಮುನ್ನಡೆ ಮತ್ತು ಭಗತ್ ಸಿಂಗ್‌ರಂತಹ ಭಾರತೀಯ ಕ್ರಾಂತಿಕಾರಿಗಳ ಚಟುವಟಿಕೆಗಳು ಯುವಜನರ ನಡುವೆ ಗಾಢವಾದ ಪ್ರಭಾವ ಬೀರಿದ್ದವು. ಕಮ್ಯುನಿಸ್ಟರ ಪ್ರಭಾವ ವಾಸ್ತವವನ್ನು ಕಾಂಗ್ರೆಸ್ಸಿನವರು ಒಲ್ಲದ ಮನಸ್ಸಿನಿಂದ ಒಪ್ಪಿಕೊಂಡಿದ್ದ ಮತ್ತು ಬ್ರಿಟಿಷರು ಬಹಳಷ್ಟು ಆತಂಕದಿಮದ ನೋಡುತ್ತಿದ್ದ ಒಂದು ವಾಸ್ತವವಾಗಿತ್ತು.

ಭಗತ್‌ಸಿಂಗ್ ಮತ್ತವರ ಒಡನಾಡಿಗಳಿಂದ ಸ್ಥಾಪಿಸಲ್ಪಟ್ಟ ನೌಜವಾನ್ ಭಾರತ್ ಸಭಾವು ಪಂಜಾಬ್ ಪ್ರದೇಶದ ದೊಡ್ಡ ಸಂಖ್ಯೆಯ ವಿದ್ಯಾರ್ಥಿ ಹಾಗೂ ಯುವಜನರ ವಿಭಾಗವನ್ನು ಆಕರ್ಷಿಸಿತು. ದಿ ಬಾಂಬೇ ಪ್ರದೇಶ್ ಯೂಥ್ ಲೀಗ್ ಮತ್ತು ಆಲ್ ಬೆಂಗಾಲ್ ಸ್ಟೂಡೆಂಟ್ಸ್ ಅಸೋಶಿಯೇಷನ್(ನಂತರ ಅದನ್ನು ವಿಭಜಿಸಿ ಬೆಂಗಾಲ್ ಪ್ರದೇಶ್ ಸ್ಟೂಡೆಂಟ್ಸ್ ಅಸೋಶಿಯೇಷನ್ ರಚಿಸಲಾಯಿತು) ಮುಂತಾದ ಸಂಘಟನೆಗಳು ಆ ಅವಧಿಯಲ್ಲಿ ಅಸ್ತಿತ್ವಕ್ಕೆ ಬಂದವು. ಈ ಸಂಘಟನೆಗಳ ಸಮ್ಮೇಳನಗಳು ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಒತ್ತಾಯಿಸಿ ಮತ್ತು ಬಹಳ ಮುಖ್ಯವಾಗಿ ಕೋಮುವಾದದ ವಿರುದ್ಧ ನಿರ್ಣಯಗಳನ್ನು ಅಂಗೀಕರಿಸಿದವು. ರಷ್ಯಾ ಕ್ರಾಂತಿಯ ಸಾಧನೆಗಳು ಮತ್ತು ಪ್ರಗತಿ ಈ ಎಲ್ಲ ಸಮ್ಮೇಳನಗಳಲ್ಲಿ ತಪ್ಪದೇ ಪ್ರಸ್ತಾಪಿಸಲ್ಪಟ್ಟವು.

ಮೀರತ್ ಪಿತೂರಿ ಪ್ರಕರಣ ಮತ್ತು ಲಾಹೋರ್ ಪಿತೂರಿ ಪ್ರಕರಣ(ಭಗತ್ ಸಿಂಗ್ ಮತ್ತವರ ಒಡನಾಡಿಗಳ ವಿರುದ್ಧ) ವಿದ್ಯಾರ್ಥಿ ಮತ್ತು ಯುವಜನರ ನಡುವೆ ವ್ಯಾಪಕ ಪ್ರಭಾವ ಬೀರಿದ್ದವು. ದೇಶದ ಅನೇಕ ಕಡೆಗಳಲ್ಲಿ, ಮುಖ್ಯವಾಗಿ ಮೀರತ್, ಪಂಜಾಬ್ ಮತ್ತು ಬೊಂಬಾಯಿಯಲ್ಲಿ, ವಿದ್ಯಾರ್ಥಿ ಸಂಘಗಳು ಈ ವಿಚಾರಣೆಗಳನ್ನು ಖಂಡಿಸಿ ನಿರ್ಣಯಗಳನ್ನು ಅಂಗೀಕರಿಸಿದ್ದವು ಮತ್ತು ಆರೋಪಿಗಳ ಪರ ವಾದ ಮಂಡನೆಗೆ ಸಮಿತಿಗಳನ್ನೂ ರಚಿಸಿದ್ದವು. ಮೀರತ್ ಕಾಲೇಜಿನ ವಿದ್ಯಾರ್ಥಿಗಳು ಈ ಉದ್ದೇಶಕ್ಕಾಗಿ ಮೀರತ್ ಕಮ್ಯುನಿಸ್ಟ್ ಸೇವಾ ಸಂಘ್ ರಚಿಸಿಕೊಂಡಿದ್ದರು.


ಈ ಅವಧಿಯಲ್ಲಿ, ಚಂದ್ರ ರಾಜೇಶ್ವರ್ ರಾವ್ ಮತ್ತವರ ಒಡನಾಡಿಗಳು 1931 ರಲ್ಲಿ ಬನಾರಸ್ ವಿಶ್ವವಿದ್ಯಾಲಯದಲ್ಲಿ ಯಂಗ್ ಕಮ್ಯುನಿಸ್ಟ್ ಲೀಗ್‌ಗಳನ್ನು ರಚಿಸಿಕೊಂಡಿದ್ದರು. ಅವರು ಆ ವಿಶ್ವವಿದ್ಯಾಲಯದಲ್ಲಿ ನಿಯತಕಾಲಿಕವಾಗಿ ಅಧ್ಯಯನ ಶಿಬಿರಗಳನ್ನು ನಡೆಸುತ್ತಿದ್ದರು ಮತ್ತು ದೈಹಿಕ ತರಬೇತಿಯನ್ನೂ ನೀಡುತ್ತಿದ್ದರು. ಅನೇಕ ಬಾರಿ ಅವರು ಆರ್.ಎಸ್.ಎಸ್ ಹಾಗೂ ಕೋಮುವಾದಿ ರಾಜಕೀಯವನ್ನು ಎದುರಿಸಬೇಕಾಗುತ್ತಿತ್ತು.

ಸಂಪೂರ್ಣ ಸ್ವಾತಂತ್ರ್ಯ ಗಳಿಸುವ ಉದ್ದೇಶ ಹೊತ್ತು ಮದ್ರಾಸ್ ಪ್ರಸಿಡೆನ್ಸಿಯಲ್ಲಿ, ರ್‍ಯಾಡಿಕಲ್ ಯೂಥ್ ಕಾನ್ಫರೆನ್ಸ್ (ತೀವ್ರಗಾಮಿ ವಿದ್ಯಾರ್ಥಿ ಸಮ್ಮೇಳನ)ವನ್ನು 1935 ರಲ್ಲಿ ನಡೆಸಿದ್ದರು. ಆಂಧ್ರ ಕರ್ನಾಟಕ, ಕೇರಳ, ತಮಿಳುನಾಡು ಮತ್ತು ಮದ್ರಾಸ್ ನಗರದಲ್ಲಿ ಸ್ಥಳೀಯ ಲೀಗ್ ಗಳನ್ನು ಸಂಘಟಿಸಲು ಸಮಿತಿಗಳನ್ನು ರಚಿಸಿಕೊಂಡಿದ್ದರು. ಗೃಹ ಇಲಾಖೆಯ ವರದಿಗಳು ಈ ವಿದ್ಯಮಾನಗಳ ಬಗ್ಗೆ ತನ್ನ ಎಲ್ಲಾ ಪಡೆಗಳಿಗೆ ಎಚ್ಚರಿಕೆಯ ಸಂದೇಶಗಳನ್ನು ಕಳಿಸಿ ಈ ರೀತಿ ಹೇಳಿತ್ತು: 'ಗಣನೀಯ ಪ್ರಮಾಣದ ಕಮ್ಯುನಿಸ್ಟ್ ಸಾಹಿತ್ಯವನ್ನು ಮದ್ರಾಸ್ ಪ್ರೆಸಿಡೆನ್ಸಿಯ ಹಲವಾರು ವಿದ್ಯಾರ್ಥಿಗಳಿಂದ ವಶಪಡಿಸಿಕೊಳ್ಳಲಾಗಿದೆ'.

ಈ ಹಿನ್ನೆಲೆಯಲ್ಲಿ ಈ ಎಲ್ಲಾ ಪ್ರಾಂತೀಯ ವಿದ್ಯಾರ್ಥಿ ಸಂಘಟನೆಗಳನ್ನು ಒಂದುಗೂಡಿಸಲು ಮತ್ತು ಅಖಿಲ ಭಾರತ ಸಂಘಟನೆಯನ್ನು ಸ್ಥಾಪಿಸಲು ಪ್ರಯತ್ನಗಳನ್ನು ಮಾಡಲಾಯಿತು. 1936ಲ್ಲಿ ಉತ್ತರ ಪ್ರದೇಶದ ವಿದ್ಯಾರ್ಥಿಗಳು ಸಮ್ಮೇಳನ ನಡೆಸಲು ಮುಂದಾಗುವ ಮೂಲಕ ಈ ಪ್ರಯತ್ನ ಕೈಗೂಡಿತು. ಈ ಸಮ್ಮೇಳನದ ಅಧ್ಯಕ್ಷತೆಯನ್ನು ಮಹಮದ್ ಆಲಿ ಜಿನ್ನಾ ವಹಿಸಿದ್ದರೆ ಉದ್ಘಾಟನಾ ಭಾಷಣವನ್ನು ಜವಾಹರ್ ಲಾಲ್ ನೆಹರೂ ಅವರು ಮಾಡಿದರು. ಈ ಸಮ್ಮೇಳನದಲ್ಲಿ ಅಂಗೀಕರಿಸಿದ ವಿದ್ಯಾರ್ಥಿಗಳ ಸಮಸ್ಯೆಗಳ ಕುರಿತ ಬೇರೆಲ್ಲಾ ನಿರ್ಣಯಗಳ ಜತೆ ಎದ್ದು ಕಾಣುವ ನಿರ್ಣಯ ಯಾವುದೆಂದರೆ ಕೋಮುವಾದದ ವಿರುದ್ಧದ ನಿರ್ಣಯ. ಎಲ್ಲಾ ರಾಜಕೀಯ ಸದಸ್ಯತ್ವ ಹೊಂದಿರುವ ವಿದ್ಯಾರ್ಥಿಗಳನ್ನು ಎ.ಐ.ಎಸ್.ಎಫ್. ಸೇರಲು ಉತ್ತೇಜನ ನೀಡಲಾಯಿತು. ಈ ಪರಿಣಾಮವಾಗಿ, ಗಾಂಧಿವಾದಿ ವಿದ್ಯಾರ್ಥಿಗಳು, ಮುಸ್ಲಿಂಲೀಗ್ ಚಿಂತನೆಗಳನ್ನು ಹೊಂದಿರುವ ವಿದ್ಯಾರ್ಥಿಗಳು, ಸಂಘಟನೆಯನ್ನು ಕಟ್ಟುವಲ್ಲಿ ನಾಯಕತ್ವ ವಹಿಸಿದ ಕಮ್ಯುನಿಸ್ಟ್ ಮತ್ತು ಸೋಶಿಯಲಿಸ್ಟ್ ಮನಸ್ಸುಗಳ ವಿದ್ಯಾರ್ಥಿಗಳೊಂದಿಗೆ ಎ.ಐ.ಎಸ್.ಎಫ್.ನ ಭಾಗವಾದರು.

ಕಮ್ಯುನಿಸ್ಟರ ಪ್ರಭಾವದಿಂದಾಗಿ ಉಚಿತ ಶಿಕ್ಷಣ, ವಿದ್ಯಾರ್ಥಿನಿಲಯ, ಶಾಲೆಗಳು, ಸಹಕಾರಿ ಕ್ರೆಡಿಟ್

ಪುಟ 14 ಕ್ಕೆ



1936ರಲ್ಲಿ ಎಐಕೆಎಸ್‌ನ ಸ್ಥಾಪನಾಸಮ್ಮೇಳದಲ್ಲಿ ಅಧ್ಯಕ್ಷತೆ ವಹಿಸಿದ್ದ ಸ್ವಾಮಿ ಸಹಜಾನಂದ ಸರಸ್ವತಿ





ಎಐಎಸ್‌ಎಫ್ ಸ್ಥಾಪನಾ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಮಹಮ್ಮದ್ ಅಲಿ ಜಿನ್ನಾ ಮತ್ತು ಉದ್ಘಾಟಿಸಿದ್ದ ಜವಹರಲಾಲ್ ನೆಹರು



ಪ್ರಗತಿಪರ ಲೇಖಕರ ಸಂಘದ ಮೊದಲ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಮುನ್ಷಿ ಪ್ರೇಮಚಂದ್

ಸರ್ವ ಪಕ್ಷ ಸಭೆಯನ್ನು ಕರೆಯಿರಿ
–ದಿಲ್ಲಿ ಮುಖ್ಯಮಂತ್ರಿಗೆ ಸಿಪಿಐ(ಎಂ) ಪತ್ರ

ದಿಲ್ಲಿ ಸರಕಾರದ ಕೆಲಸಕ್ಕೆ ಬಹಳಷ್ಟು ಮಿತಿಗಳಿವೆ ನಿಜ, ಏಕೆಂದರೆ ದಿಲ್ಲಿ ಪೋಲೀಸ್ ದಿಲ್ಲಿ ರಾಜ್ಯ ಸರಕಾರದ ಅಧಿಕಾರ ವ್ಯಾಪ್ತಿಗೆ ಬರುವುದಿಲ್ಲ, ಕೇಂದ್ರ ಸರಕಾರದ ಅಡಿಯಲ್ಲಿ ಬರುತ್ತದೆ. ಆದರೂ "ನಿಮ್ಮ ಸರಕಾರ ಕೆಲವು ಹೆಚ್ಚುವರಿ ಕ್ರಮಗಳನ್ನು ಕೈಗೊಳ್ಳಬಹುದು. ತುರ್ತಾಗಿ ದಿಲ್ಲಿಯಲ್ಲಿ ಒಂದು ಸರ್ವ ಪಕ್ಷ ಸಭೆಯನ್ನು ಕರೆಯಿರಿ. ನಾವು ಒಟ್ಟುಗೂಡಿ ಹೇಗೆ ದಿಲ್ಲಿಯಲ್ಲಿ ಕೋಮು ಸೌಹಾರ್ದವನ್ನು ಮತ್ತು ಶಾಂತಿಯನ್ನು ಖಾತ್ರಿಪಡಿಸಬಹುದು ಎಂಬ ಬಗ್ಗೆ ನಿರ್ಧರಿಸಬಹುದು" ಎಂದು ಸಿಪಿಐ(ಎಂ) ಪರವಾಗಿ ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಮತ್ತು ದಿಲ್ಲಿ ರಾಜ್ಯ ಕಾರ್ಯದರ್ಶಿ ಕೆ.ಎಂ.ತಿವಾರಿ ದಿಲ್ಲಿ ಮುಖ್ಯಮಂತ್ರಿ ಕೇಜ್ರಿವಾಲ್‌ರವರಿಗೆ ಫೆಬ್ರುವರಿ 27ರಂದು ಪತ್ರ ಬರೆದಿದ್ದಾರೆ.

ಈ ಸಂದರ್ಭದಲ್ಲಿ ಒಬ್ಬ ಆಮ್ ಆದ್ಮಿ ಪಾರ್ಟಿ ಕೌನ್ಸಿಲರ್ ತನ್ನ ಮನೆಯ ತಾರಸಿಯಲ್ಲಿ ನಿಂತಿರುವಾಗ ಅಲ್ಲಿಂದಲೇ ಪೆಟ್ರೋಲ್ ಬಾಂಬ್‌ಗಳು, ಕಲ್ಲುಗಳನ್ನು ಕೆಲವರು ಎಸೆಯುತ್ತಿರುವ ವೀಡಿಯೋ ಪ್ರಸಾರದಲ್ಲಿರುವುದರತ್ತ ಈ ಪತ್ರದಲ್ಲಿ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತ, ಇದು ಬಹಳ ಕಳವಳಕಾರಿ, ತಕ್ಷಣವೇ ಆತನ ವಿರುದ್ಧ ಕ್ರಮವನ್ನು ಕೈಗೊಳ್ಳಬೇಕು ಎಂದೂ ಸಿಪಿಐ(ಎಂ) ಮುಖಂಡರು ಆಗ್ರಹಿಸಿದ್ದಾರೆ. "ನೀವು ಎ.ಎ.ಪಿ.ಯ ಮುಖ್ಯಸ್ಥರಾಗಿ ಆತನ ವಿರುದ್ಧ ಸಂಘಟನಾ ಮಟ್ಟದಲ್ಲಿಯೂ ಕ್ರಮ ಕೈಗೊಂಡರೆ, ಇದು ದಿಲ್ಲಿಯ ಜನತೆಗೆ ಒಂದು ಬಲವಾದ ಸಂದೇಶವನ್ನು ಕೊಡುತ್ತದೆ. ತಮ್ಮ ಪಕ್ಷದವರ ದ್ವೇಷ ಭಾಷಣಗಳನ್ನು ಮತ್ತು ಕ್ರಿಯೆಗಳನ್ನು ಸಮರ್ಥಿಸಿಕೊಳ್ಳಲು ಸರ್ವ ಪ್ರಯತ್ನಗಳನ್ನು ನಡೆಸಿರುವ ರಾಜಕೀಯ ಮುಖಂಡರುಗಳಿಗೆ ಇದೊಂದು ಮಾದರಿಯಾಗುತ್ತದೆ" ಎಂದು ಸಿಪಿಐ(ಎಂ) ಮುಖಂಡರು ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ಈ ವ್ಯಕ್ತಿಯನ್ನು ಈಗ ಆಮ್ ಆದ್ಮಿ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಅಮಾನತು ಮಾಡಲಾಗಿದೆ ಎಂದು ವರದಿಯಾಗಿದೆ. ಅತ್ತ ಕೇಂದ್ರ ಸರಕಾರ ಈ ಎಲ್ಲ ಗಲಭೆಗಳನ್ನು ಪ್ರಚೋದಿಸಿದ ದ್ವೇಷ ಭಾಷಣಗಳನ್ನು ನೀಡಿದ ತಮ್ಮ ಪಕ್ಷದ ಮುಖಂಡರ ವಿರುದ್ಧ ಎಫ್‌ಐಆರ್ ದಾಖಲಿಸಲು ಕೂಡ ನಾಲ್ಕು ವಾರಗಳ ಸಮಯವನ್ನು ದಿಲ್ಲಿ ಹೈಕೋರ್ಟಿನಿಂದ ಪಡೆದುಕೊಂಡಿದೆ.ದಿದಕ್ಕೆ ಮೊದಲು ದಿಲ್ಲಿ ಪೋಲಿಸರ ವಿಫಲತೆಯನ್ನು ಕಟುವಾಗಿ ಪ್ರಶ್ನಿಸಿದ ನ್ಯಾಯಾಧೀಶರನ್ನು ತರಾತುರಿಯಿಂದ ವರ್ಗಾವಣೆ ಮಾಡಲಾಗಿದೆ

ವರದಿಗಾರರ ಮೇಲೆ ಗಲಭೆಕೋರರ ಹಲ್ಲೆಗಳು
–ಪ್ರತಿಭಟನೆಗೆ ಎನ್‌ಎಜೆ–ಡಿಯುಜೆ ಕರೆ

ರಾಷ್ಟ್ರೀಯ ಪರ್ತಕರ್ತರ ಮೈತ್ರಿಕೂಟ (ಎನ್‌ಎಜೆ) ಮತ್ತು ದಿಲ್ಲಿ ಪತ್ರಕರ್ತರ ಸಂಘ(ಡಿಯುಜೆ) ಕಳೆದ ಮೂರು ದಿನಗಳಲ್ಲಿ ದಿಲ್ಲಿ ಗಲಭೆಗಳನ್ನು ಕೆಚ್ಚೆದೆಯಿಂದ ವರದಿ ಮಾಡಿರುವ ಯುವ ಪತ್ರಕರ್ತರು ಮತ್ತು ಕ್ಯಾಮರ ನಿರ್ವಾಹಕರಿಗೆ ನಮನ ಸಲ್ಲಿಸಿದೆ. ಇವರು ತಮ್ಮ ಸುರಕ್ಷಿತತೆಯನ್ನೂ ಲೆಕ್ಕಿಸದೆ ವರದಿ ಮಾಡಿದ್ದಾರೆ. ಕರ್ತವ್ಯನಿರತ ಪತ್ರಕರ್ತರ ಮೇಲೆ ಹಲ್ಲೆ ನಡೆಸಿರುವ ಅಪರಾಧಿಗಳ ವಿರುದ್ಧ ಸಂಬಂಧಪಟ್ಟ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದಿದ್ದರೆ ಸೋಮವಾರ(ಮಾರ್ಚ್ 2) ಕರಾಳ ದಿನದ ಆಚರಣೆಗೆ ಸಿದ್ಧವಾಗಬೇಕು ಎಂದು ತಮ್ಮ ಸದಸ್ಯರಿಗೆ ಕರೆ ನೀಡಿವೆ.

ಗಲಭೆಗಳನ್ನು ನಡೆಸುತ್ತಿದ್ದ ಜನಜಂಗುಳಿ ಹಲವು ಪತ್ರಕರ್ತರ ಮೇಲೆ ಹಲ್ಲೆ ನಡೆಸಿದವು, ಆದರೆ ಪೋಲಿಸರು ಮತ್ತು ಇತರ ಅಧಿಕಾರಿಗಳು ಮೂಕಪ್ರೇಕ್ಷಕರಾಗಿ ನಿಂತಿದ್ದರು ಎಂದು ಎನ್‌ಎಜೆ ಅಧ್ಯಕ್ಷ ಎಸ್.ಕೆ.ಪಾಂಡೆ, ಪ್ರಧಾನ ಕಾರ್ಯದರ್ಶಿ ಎನ್ ಕೊಂಡಯ್ಯ ಮತ್ತು ಡಿಯುಜೆ ಪ್ರಧಾನ ಕಾರ್ಯದರ್ಶಿ ಸುಜಾತ ಮಧೋಕ್ ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ದಿಲ್ಲಿನಗರ ಹೆಚ್ಚೆಚ್ಚು ಕೋಮುಗ್ರಸ್ತವಾಗುತ್ತಿರುವ ಬಗ್ಗೆ, ಸಾವುಗಳು, ಗಾಯಾಳುಗಳು ಮತ್ತು ಆಸ್ತಿ ಹಾಗೂ ಪ್ರಾರ್ಥನಾಸ್ಥಳಗಳ ನಾಶದ ಬಗ್ಗೆ ಹೇಳಿಕೆ ಆಳವಾದ ನೋವು ಮತ್ತು ಕಳವಳವನ್ನು ವ್ಯಕ್ತಪಡಿಸಿದೆ.

ಜೆಕೆ24 X 7 ಟಿವಿ ಯ ಆಕಾಶ್ ನಾಪರವರು ಗುಂಡೇಟಿನಿಂದಾಗಿ ಆಸ್ಪತ್ರೆಗೆ ದಾಖಲಾಗಬೇಕಾಗಿ ಬಂದಿದೆ. ಎನ್‌ಡಿಟಿವಿಯ ಅರವಿಂದ ಗುಣಶೇಖರ ಮೂರು ಹಲ್ಲುಗಳನ್ನು ಕಳಕೊಂಡರು, ಸಹಯೋಗಿಗಳ ನೆರವಿನಿಂದಾಗಿ ಇನ್ನಷ್ಟು ಅಪಾಯದಿಂದ ಪಾರಾದರು; ಎನ್‌ಡಿಟಿವಿಯ ಸೌರಭ್ ಶುಕ್ಲ, ಮರಿಯಂ ಅಳ್ವಿ, ಸುಶೀಲ್ ರಥಿ ಮತ್ತು ನ್ಯೂಸ್18ನ ರುಂಝುನ್ ಶರ್ಮ , ಆಜ್‌ತಕ್‌ನ ಅಕ್ಷಯ ಕುಮಾರ್ ದೊಂಗಾರೆ ಮತ್ತು ತನುಶ್ರೀ ಪಾಂಡೆಯವರ ಮೇಲೂ ಹಲ್ಲೆ ನಡೆದಿವೆ; ಲಾಠಿಧಾರೀ ಜನಜಂಗುಳಿ 'ಟೈಮ್ಸ್‌ನೌ'ನ ಪರ್ವಿನಾ ಪುರಕಾಯಸ್ಥರವರನ್ನು ಬೆದರಿಸಿದೆ.

ಪದೇಪದೇ ವರದಿಗಾರರ ಹೆಸರುಗಳು ಮತ್ತು ಧರ್ಮದ ಬಗ್ಗೆ ಕೇಳಲಾಗಿದೆ, ಗಲಭೆಕೋರರ ವೀಡಿಯೋ ತೆಗೆಯುವುದನ್ನು ನಿಲ್ಲಿಸಬೇಕು ಎಂದು ಬೆದರಿಸಲಾಗಿದೆ, ಫೋನ್‌ಗಳನ್ನು ಕಸಿದು ಅದರಲ್ಲಿನ ಫೋಟೋ, ವೀಡಿಯೋಗಳನ್ನು ತೆಗೆದು ಹಾಕಿದ್ದಾರೆ. ಆದರೂ ಹಲವು ವರದಿಗಾರರು, ಕೆಲವರ, ಅದರಲ್ಲೂ ಟಿವಿ ಆಂಕರುಗಳ, ಬಾಸ್‌ಗಳ ಮತ್ತು ಮಾಲಕರ ಪಕ್ಷಪಾತದ ಹೊರತಾಗಿಯೂ ವಸ್ತುನಿಷ್ಟವಾಗಿ ವರದಿ ಮಾಡಿದ್ದಾರೆ. 'ಮಿರರ್ ನೌ'ನ ವರದಿಗಾರ ಅಲೋಕ್ ಒಂದು ಜನಜಂಗುಳಿ ಒಬ್ಬ ಯುವಕನನ್ನು ಸಾಯಿಸಲು ಪ್ರಯತ್ನಿಸುತ್ತಿದ್ದಾಗ ಮಧ್ಯಪ್ರವೇಶಿಸಲು ಮನಸ್ಸಿಲ್ಲದ ಪೋಲಿಸರನ್ನು ಕೂಡಲೇ ಆ ಯುವಕನನ್ನು ರಕ್ಷಿಸಲು ಧಾವಿಸುವಂತೆ ಮತ್ತೆ–ಮತ್ತೆ ಆಗ್ರಹಿಸಿದರು. ಇದೆಲ್ಲ ಆ ಚಾನಲ್‌ನಲ್ಲಿ ಸ್ಪಷ್ಟವಾಗಿ ಕಾಣುತ್ತಿತ್ತು.

ದಿಲ್ಲಿ ಪೋಲೀಸ್ ವರದಿ ಮಾಡಲು ಬಂದಿರುವ ಎಲ್ಲರಿಗೂ ರಕ್ಷಣೆ ಕೊಡಬೇಕು, ಗಾಯಗೊಂಡ ಪತ್ರಕರ್ತರಿಗೆ ಮತ್ತು ಅವರ ಧ್ವಂಸಗೊಳಿಸಲ್ಪಟ್ಟ ಅವರ ಸಲಕರಣೆಗಳಿಗೆ ಪೂರ್ಣ ಪರಿಹಾರ ಕೊಡಬೇಕು, ಭಾರತದ ಪತ್ರಿಕಾ ಮಂಡಳಿ ಮತ್ತು ಇತರ ಉಸ್ತುವಾರಿ ಸಂಸ್ಥೆಗಳು ತಾವಾಗಿಯೇ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿರುವ ಎನ್‌ಎಜೆ–ಡಿಯುಜೆ ಹೇಳಿಕೆ ಪತ್ರಕರ್ತರು ತಮ್ಮ ಸುರಕ್ಷಿತತೆಗಾಗಿ ಸಾಧ್ಯವಾದಷ್ಟೂ ದೊಡ್ಡ ತಂಡಗಳಲ್ಲಿ ವರದಿಗೆ ಹೋಗಬೇಕು ಎಂದೂ ಸಲಹೆ ನೀಡಿದೆ. ಅದೇ ವೇಳೆಗೆ ದ್ವೇಷ ಭಾಷಣಗಳನ್ನು ಮತ್ತೆ–ಮತ್ತೆ ತೋರಿಸಿ ಪರಿಸ್ಥಿತಿಯನ್ನು ಮತ್ತಷ್ಟು ಕೋಮುಗ್ರಸ್ತಗೊಳಿಸುವ ಪ್ರಯತ್ನಗಳು ಮತ್ತು ಹುಸಿ ಸುದ್ದಿಗಳ ಬಗ್ಗೆ ಎಚ್ಚರದಿಂದಿರಬೇಕು ಎಂದೂ ಹೇಳಿಕೆ ತಿಳಿಸಿದೆ.

ಅಲೆಮಾರಿ ಬುಡಕಟ್ಟು ಶಿಳ್ಳೆಕ್ಯಾತ ಸಮುದಾಯದ ಸಮಸ್ಯೆಗಳ ಪರಿಹಾರಕ್ಕೆ ಮನವಿ

ಮಂಗಳೂರು ನಗರ ವ್ಯಾಪ್ತಿ ಮಿತಿಯಲ್ಲಿ ಹರಿಯುತ್ತಿರುವ ನೇತ್ರಾವತಿ, ಗುರುಪುರ ನದಿ ಪಾತ್ರ ಮತ್ತು ತೋಕೂರುಗಳಲ್ಲಿ ಸುಮಾರು 7 ಪ್ರದೇಶದಲ್ಲಿ ಅಲೆಮಾರಿ ಬುಡಕಟ್ಟು ಸಮುದಾಯವೆಂದು ಘೋಷಿಸಲಾಗಿರುವ ಶಿಳ್ಳೆಕ್ಯಾತ ಸಮುದಾಯದ ಕುಟುಂಬಗಳು ಟೆಂಟ್ ಗಳಲ್ಲಿ ವಾಸಿಸುತ್ತಿದ್ದು ತೆಪ್ಪಗಳ ಮೂಲಕ ನದಿಯಲ್ಲಿ ಬಲೆ ಬೀಸಿ ಮೀನು ಹಿಡಿದು ಮಾರಾಟ ಮಾಡುವ ಕಷ್ಟದಾಯಕ ಮತ್ತು ಅಪಾಯಕಾರಿ ವೃತ್ತಿಯಲ್ಲಿ ಜೀವನ ಸಾಗಿಸುತ್ತಿದ್ದಾರೆ. ಪ್ರಸ್ತುವ ಇವರು ಟೆಂಟ್ ಗಳಲ್ಲಿ ವಾಸಿಸುತ್ತಿದ್ದು ಬುಡಕಟ್ಟು ಸಮುದಾಯ ಆಗಿರುವ ಇವರ ಬದುಕಿಗೆ ಜಿಲ್ಲಾಡಳಿತವು ಸರಕಾರದ ಕಲ್ಯಾಣಾಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ಜ್ಯಾರಿಗೊಳಿಸುವ ಮೂಲಕ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಅಭಿವೃದ್ಧಿಗಾಗಿ ಮುಂದಡಿಯಿಡಬೇಕೆಂದು ವಿನಂತಿಸಿಕೊಳ್ಳುತ್ತಿದ್ದೇವೆ. ಈ ಹಿನ್ನಲೆಯಲ್ಲಿ ಕೆಳಕಂಡ ಬೇಡಿಕೆಗಳ ಬಗ್ಗೆ ಗಮನ ಹರಿಸಬೇಕೆಂದು ಒತ್ತಾಯಿಸಿ ದ.ಕ ಜಿಲ್ಲಾಧಿಕಾರಿಯವರಿಗೆ ತಾ. 26–02–2020ರಂದು ಮನವಿ ಅರ್ಪಿಸಲಾಯಿತು.

ಬೇಡಿಕೆಗಳು:

1. ಜಿಲ್ಲಾಡಳಿತವು ವಿವಿಧೆಡೆಗಳಲ್ಲಿ ಟೆಂಟ್ ಗಳಲ್ಲಿ ವಾಸಿಸುತ್ತಿರುವ ಶಿಳ್ಳೆಕ್ಯಾತ ಸಮುದಾಯದ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಹಿನ್ನಲೆಯ ಸರ್ವೆ ನಡೆಸುವುದು.
2. ಶಿಳ್ಳೆಕ್ಯಾತ ಸಮುದಾಯದ ಕುಟುಂಬಗಳ ಆರೋಗ್ಯ ಕಾರ್ಡು, ಮತ್ತು ಇತರೆ ಗುರುತಿನ ಕಾರ್ಡುಗಳನ್ನು ವಿತರಿಸುವುದು.
3. ಶಿಳ್ಳೆಕ್ಯಾತ ಸಮುದಾಯದ ಕುಟುಂಬಗಳಿಗೆ ಉಚಿತ ಮನೆ ನಿವೇಶನ ಒದಗಿಸುವುದು.
4. ಪ್ರಸ್ತುವ ವಾಸಿಸುತ್ತಿರುವ ಟೆಂಟ್ ಗಳಲ್ಲಿ ಕನಿಷ್ಟ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ದಾರಿ, ವಿದ್ಯುತ್ ಮತ್ತು ಶೌಚಾಲಯದ ವ್ಯವಸ್ಥೆ ಮಾಡುವುದು.
5. ಅಲೆಮಾರಿ ಬುಡಕಟ್ಟು ಸಮುದಾಯಕ್ಕೆ ಸಂಬಂಧಿಸಿ ರಾಜ್ಯದ ಸಮಾಜ ಕಲ್ಯಾಣ ಇಲಾಖೆಯ ವಿಶೇಷ ಕೋಶದ ಸೌಲಭ್ಯಗಳನ್ನು ಈ ಟೆಂಟ್ ಪ್ರದೇಶಗಳಿಗೆ ಅಳವಡಿಸುವುದು.
6. ಅಲೆಮಾರಿ ಶಿಳ್ಳೆಕ್ಯಾತ ಸಮುದಾಯದ ಮೀನುಗಾರಿಕಾ ವೃತ್ತಿಯಲ್ಲಿ ನಿರತರಾಗಿರುವಾಗ ನಡೆಯುವ ದೌರ್ಜನ್ಯ ಘಟನೆಗಳನ್ನು ಸಂಬಂಧಿಸಿ ಕಾನೂನು ಕ್ರಮ ಕೈಗೊಳ್ಳುವುದು.

ಆದುದರಿಂದ ದಯಾಳುಗಳಾದ ತಾವು ಕೂಡಲೇ ಈ ಬಗ್ಗೆ ಕಾರ್ಯಪ್ರವೃತ್ತರಾಗಬೇಕೆಂದು ವಿನಂತಿಸಿಕೊಳ್ಳುತ್ತಿದ್ದೇವೆ.

ಅಖಿಲ ಭಾರತ ಸಾಮೂಹಿಕ ಸಂಘಟನೆಗಳ ಸ್ಥಾಪನೆ

ಪುಟ 13 ರಿಂದ

ಸೊಸೈಟಿ ಮುಂತಾದ ವಿಷಯಗಳನ್ನು ಈ ವಿದ್ಯಾರ್ಥಿ ಚಳುವಳಿಯು ಎತ್ತಿತು. ಈ ವಿದ್ಯಾರ್ಥಿ ಸಂಘಟನೆಯು ವಿಶೇಷವಾಗಿ ಅಸ್ಪೃಶ್ಯತೆಯ ಸಮಸ್ಯೆಯನ್ನು ಕೈಗೆತ್ತಿಕೊಂಡಿತು ಮತ್ತು ದಲಿತ ವಿದ್ಯಾರ್ಥಿಗಳನ್ನು ಸಂಘಟಿಸಲು ಮುಂದಾಯಿತು. ವಿವಿಧ ಜಾತಿಗಳ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಊಟದ ಮನೆಯಂತಹ ಹಲವಾರು ತಾರತಮ್ಯ ಪದ್ಧತಿಗಳ ವಿರುದ್ಧ ಯಶಸ್ವಿ ಹೋರಾಟಗಳನ್ನು ನಡೆಸಲಾಯಿತು.

ಅದೇ ರೀತಿಯಲ್ಲಿ, ವಿದ್ಯಾರ್ಥಿನಿಯರನ್ನು ಕೀಟಲೆ ಮಾಡುವುದನ್ನು ತಡೆಯಲು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸುವ ಜತೆಯಲ್ಲೇ ಈ ಹಾವಳಿಯಿಂದ ವಿದ್ಯಾರ್ಥಿನಿಯರನ್ನು ರಕ್ಷಿಸಲು ತಂಡಗಳನ್ನು ರಚಿಸಲಾಯಿತು. ವಿದ್ಯಾರ್ಥಿನಿಯರನ್ನು ಸಂಘಟಿಸುವ ಸಲುವಾಗಿ 1939ರಲ್ಲಿ ಮತ್ತೊಂದು ಮಹತ್ವದ ಹೆಜ್ಜೆ ಇಡಲಾಯಿತು: ಪ್ರತ್ಯೇಕ ಮಹಿಳಾ ಸಂಚಾಲನಾ ಸಮಿತಿಗಳನ್ನು ರಚಿಸಲಾಯಿತು. ಕನಕ್ ಮುಖರ್ಜಿಯವರು ಇಂತಹ ಮಹಿಳಾ ಸಮಿತಿಯ ಮೊದಲ ಸಂಚಾಲಕಿಯಾಗಿದ್ದರು.

ಪ್ರಗತಿಪರ ಬರಹಗಾರರ ಸಂಘ

(ಪ್ರೊಗ್ರೆಸ್ಸಿವ್ ರೈಟರ್ಸ್ ಅಸೋಶಿಯೇಷನ್): 1936ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ವಾರ್ಷಿಕ ಅಧಿವೇಶನ ನಡೆಯುವಾಗಲೇ ಪಿಡಬ್ಲ್ಯುಎನ ಸ್ಥಾಪನಾ ಸಮ್ಮೇಳನ ಕೂಡ ಲಕ್ನೋದಲ್ಲಿ ನಡೆಯಿತು. ಮ್ಯಾಕ್ಸಿಂ ಗಾರ್ಕಿ ನೇತೃತ್ವದ ಫ್ಯಾಸಿಸ್ಟ್ ವಿರೋಧಿ ಬರಹಗಾರರ ಸಂಘ ಮತ್ತು ಯೂರೋಪಿನ ಇತರ ಪ್ರಗತಿಪರ ಬರಹಗಾರರು ಅಖಿಲ ಭಾರತ ಪ್ರಗತಿಪರ ಬರಹಗಾರರ ಸಂಘ ಸ್ಥಾಪನೆಗೆ ಸ್ಫೂರ್ತಿ ನೀಡಿದರು. ಕಮ್ಯುನಿಸ್ಟರ ಮುತುವರ್ಜಿಯಿಂದ ರಚಿಸಲ್ಪಟ್ಟ ಸಂಘವು ರವೀಂದ್ರನಾಥ್ ಟ್ಯಾಗೋರ್, ಸರೋಜಿನಿ ನಾಯಿಡು, ಮುನ್ಶಿ ಪ್ರೇಮ್‌ಚಂದ್, ಮುಲ್ಕ್ ರಾಜ್ ಆನಂದ್ ಹಾಗೂ ದೇಶದ ಇತರ ಉನ್ನತ ದರ್ಜೆಯ ಬರಹಗಾರರ ಆಶೀರ್ವಾದ ಪಡೆದಿತ್ತು.

ನಿಜ ಹೇಳಬೇಕೆಂದರೆ, ಭಾರತೀಯ ಬರಹಗಾರರ ಲಕ್ನೋ ಸಮ್ಮೇಳನದ ಅಧ್ಯಕ್ಷತೆಯನ್ನು ಪ್ರೇಮ್‌ಚಂದ್ ವಹಿಸಿದ್ದರು. ಅವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ, "ಭಾಷೆಯ ಮುಖ್ಯ ಉದ್ದೇಶ ನಮ್ಮ ಚಿಂತನೆಗಳನ್ನು ಮತ್ತು ಭಾವನೆಗಳನ್ನು ರೂಪಿಸುವುದು ಮತ್ತು ಸರಿಯಾದ ಮಾರ್ಗ ತೋರಿಸುವುದೇ ಆಗಿದೆ" ಎಂದರು. ಮುಂದುವರಿದು ಹೇಳಿದರು:"ಬರಹಗಾರರು ಮಾನವೀಯತೆಯ ಮುಂದಾಳುಗಳಾಗಬೇಕು ಮತ್ತು ದಮನಿತರು, ತುಳಿತಕ್ಕೊಳಗಾದವರು ಮತ್ತು ಶೋಷಣೆಗೆ ಒಳಗಾದ ವ್ಯಕ್ತಿಗಳು ಹಾಗೂ ಗುಂಪುಗಳಿಗೆ ಸಹಾಯ ಮಾಡಬೇಕು ಮತ್ತು ಅವರ ಪರ ದನಿ ಎತ್ತಬೇಕು."

ಇಂತಹ ಕಾಳಜಿಗಳನ್ನು ಬಿಂಬಿಸುತ್ತಾ, ಪಿಡಬ್ಲ್ಯುಎನ ಸ್ಥಾಪನಾ ಸಮ್ಮೇಳನವು ಅಂಗೀಕರಿಸಿದ ಪ್ರಣಾಳಿಕೆಯು "ಭಾರತೀಯ ನಾಗರೀಕತೆಯ ಅತ್ಯುತ್ತಮ ಪರಂಪರೆಯ ವಾರಸುದಾರರು ಎಂದು ಹೇಳಿಕೊಳ್ಳುವಾಗಲೇ, ನಾವು ನಮ್ಮ ದೇಶದ ಪ್ರತಿಗಾಮಿ ಮನೋಭಾವಗಳನ್ನು ಎಲ್ಲಾ ಆಯಾಮಗಳಿಂದಲೂ ಖಂಡಿಸೋಣ, ನಮ್ಮ ದೇಶವಿಂದು ತುಡಿಯುತ್ತಿರುವ ಹೊಸ ಬದುಕಿನತ್ತ ಕೊಂಡೊಯ್ಯಲು ಅಗತ್ಯವಾದ ಎಲ್ಲವನ್ನೂ, ವಿಸ್ತಾರವಾದ ಹಾಗೂ ಸೃಜನಾತ್ಮಕವಾದ ಕೃತಿಗಳ(ಭಾರತೀಯ ಹಾಗೂ ವಿದೇಶಿ ಸಂಪನ್ಮೂಲ ಎರಡರಿಂದಲೂ)ಮೂಲಕ ಬೆಳೆಸೋಣ. ಭಾರತದ ಹೊಸ ಸಾಹಿತ್ಯವು ಇಂದಿನ ನಮ್ಮ ಅಸ್ತಿತ್ವದ ಮೂಲಭೂತ ಸಮಸ್ಯೆಗಳಾದ ಹಸಿವು ಮತ್ತು ಬಡತನ, ಸಾಮಾಜಿಕ ಹಿಂದುಳಿದಿರುವಿಕೆ ಹಾಗೂ ರಾಜಕೀಯ ದಾಸ್ಯಗಳ ಬಗ್ಗೆ ಇರಬೇಕೆಂದು ನಾವು ಭಾವಿಸುತ್ತೇವೆ. ಜಡತ್ವ, ನಿಷ್ಕ್ರಿಯತೆ ಹಾಗೂ ಮೌಢ್ಯದತ್ತ ನಮ್ಮನ್ನು ಎಳೆದೊಯ್ಯುವ ಎಲ್ಲವನ್ನೂ ಪ್ರತಿಗಾಮಿಯೆಂದು ನಾವು ತಿರಸ್ಕರಿಸುತ್ತೇವೆ. ಯಾವುದು ನಮ್ಮಲ್ಲಿ ವಿಮರ್ಶಾತ್ಮಕ ಚೈತನ್ಯವನ್ನು ಬಡಿದೆಬ್ಬಿಸಿ ವಿವೇಕದ ಬೆಳಕಿನಲ್ಲಿ ಆಚಾರಗಳನ್ನು ಮತ್ತು ಸಂಪ್ರದಾಯಗಳನ್ನು ಪರಿವೀಕ್ಷಿಸುತ್ತವೆಯೋ, ನಮ್ಮನ್ನು ಕ್ರಿಯಾಶೀಲಗೊಳಿಸಿ, ಸಂಘಟಿತರಾಗಿಸಿ, ಪರಿವರ್ತನೆಗೊಳಿಸುತ್ತದೋ ಅಂಥವನ್ನು ನಾವು ಪ್ರಗತಿಪರ ಎಂದು ಸ್ವೀಕರಿಸುತ್ತೇವೆ." ಪ್ರಣಾಳಿಕೆಯು ಬರಹಗಾರರಿಗೆ ಕರೆ ನೀಡುತ್ತಾ "ಕೋಮುವಾದವನ್ನು, ಜನಾಂಗೀಯ ವೈಷಮ್ಯವನ್ನು ಮತ್ತು ಮಾನವನಿಂದ ಮಾನವನ ಶೋಷಣೆಯನ್ನು ಬಿಂಬಿಸುವ ಸಾಹಿತ್ಯ ಪ್ರವೃತ್ತಿಗಳನ್ನು ಪ್ರತಿಭಟಿಸಿ" ಎನ್ನುತ್ತದೆ.

ಈ ಸಂಘಟನೆಯ ಸ್ಥಾಪನೆಯಿಂದಾಗಿ ವಿಚಾರವಂತರ ಮೇಲೆ ಸೋಶಿಯಲಿಸ್ಟರ, ಸಾಮ್ರಾಜ್ಯಶಾಹಿ–ವಿರೋಧಿ, ಫ್ಯಾಸಿಸ್ಟ್ ವಿರೋಧಿ ಚಿಂತನೆಗಳು ಪ್ರಭಾವ ಬೀರಿದ್ದರ ಸ್ಪಷ್ಟ ಸೂಚನೆಯಾಗಿದೆ.

ಪುನರ್ಸಂಘಟಿತ ಸಿಪಿಐ ಉದಯ ಮತ್ತು ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷದೊಂದಿಗಿನ ಐಕ್ಯ ಕಾರ್ಯಾಚರಣೆಯು ನಮ್ಮ ದೇಶದ ಸಮಾಜೋ–ರಾಜಕೀಯ ಬದುಕಿನ ಮೇಲೆ ಗಾಢ ಪ್ರಭಾವ ಬೀರಿದೆ. ವಾರ್ಷಿಕ ಕಾಂಗ್ರೆಸ್ ಅಧಿವೇಶನದಲ್ಲಿನ ಅಧ್ಯಕ್ಷೀಯ ಭಾಷಣ ಹಾಗೂ ಅಂಗೀಕರಿಸಿದ ನಿರ್ಣಯಗಳಲ್ಲಿ ಕೂಡ ಎಡ ಚಿಂತನೆಗಳು ಪ್ರತಿಧ್ವನಿಸಿದವು. ಹೊಸ ಎಡ ಪ್ರವೃತ್ತಿಯು ರಾಜಕೀಯ ಹಾಗೂ ಆರ್ಥಿಕ ವಲಯಗಳ ಮೇಲೆ ಮಾತ್ರವಲ್ಲದೇ ಸಾಂಸ್ಕೃತಿಕ ಚಳುವಳಿಯ ಮೇಲೂ ತನ್ನ ಅಚ್ಚೊತ್ತಲು ಆರಂಭಿಸಿತು.

ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿಗೆ ನಿಂದನೆ ಶಾಸಕ ಯತ್ನಾಳ್ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿ ಧರಣಿ

ಬೆಂಗಳೂರು, ಫೆ.27: ಹಿರಿಯ ಸ್ವಾತಂತ್ರ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ಅವರನ್ನು ಪಾಕ್ ಏಜೆಂಟ್ ಎಂದು ಆಪಾದಿಸುವ ಮೂಲಕ ಉದ್ಧಟತನ ತೋರಿರುವ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಸಾಹಿತಿಗಳು, ಚಿಂತಕರು, ಹೋರಾಟಗಾರರು ಆಗ್ರಹಿಸಿದ್ದಾರೆ.

ಗುರುವಾರ ನಗರದ ಗಾಂಧೀ ಭವನ ಬಳಿ ಹೋರಾಟಗಾರರು, ಚಿಂತಕರು, ಸಾಹಿತಿಗಳು ಪ್ರತಿಭಟನೆ ನಡೆಸುವ ಮೂಲಕ ಯತ್ನಾಳ್ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಈ ವೇಳೆ ಮಾತನಾಡಿದ ಸಾಹಿತಿ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಸ್.ಜಿ.ಸಿದ್ದರಾಮಯ್ಯ, ಗಾಂಧಿ ತತ್ವಗಳಲ್ಲಿ ನಂಬಿಕೆಯಿಟ್ಟುಕೊಂಡಿರುವ ಹಾಗೂ ಸ್ವಾತಂತ್ರ ಚಳವಳಿಯಲ್ಲಿ ತೊಡಗಿಸಿಕೊಂಡಿದ್ದ ಹಿರಿಯರಾದ ದೊರೆಸ್ವಾಮಿ ನಾಡಿನ ಸಾಕ್ಷಿಪ್ರಜ್ಞೆಯಾಗಿದ್ದಾರೆ ಎಂದು ಹೇಳಿದರು.



ದೊರೆಸ್ವಾಮಿಯು ನಾಡಿನ ಅನೇಕ ಸಾಮಾಜಿಕ ಸಮಸ್ಯೆಗಳ ವಿರುದ್ಧ, ಬಡವರ, ಶೋಷಿತರ ಧ್ವನಿಯಾಗಿ ಚಳವಳಿ ನಡೆಸುತ್ತಿದ್ದಾರೆ. ಅಂತಹ ವ್ಯಕ್ತಿಯನ್ನು ಪಾಕಿಸ್ತಾನದ ಏಜೆಂಟ್ ಹಾಗೂ ನಕಲಿ ಹೋರಾಟಗಾರ ಎಂದಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ದೊರೆಸ್ವಾಮಿ ಅವರನ್ನು ಟೀಕಿಸುವಂತಹ ಕೀಳುಮಟ್ಟಕ್ಕೆ ಯತ್ನಾಳ್ ಇಳಿದಿರುವುದು ಅವರ ಮನಃಸ್ಥಿತಿಯನ್ನು ತೋರಿಸುತ್ತದೆ. ನಿರ್ಗತಿಕರು, ಬಡವರು, ಶೋಷಿತರ ಪರವಾಗಿ ಇಳಿ ವಯಸ್ಸಿನಲ್ಲಿಯೂ ಬೀದಿಗಿಳಿದು ಹೋರಾಟ ನಡೆಸುವ ದೊರೆಸ್ವಾಮಿ ನಾಡಿನ ಆಸ್ತಿಯಾಗಿದ್ದಾರೆ. ಅವರ ಹೋರಾಟಗಳು ಹಾಗೂ ಚಳವಳಿಗಳಿಂದ ಶೋಷಿತರಿಗೆ ಎಷ್ಟೋ ವಿಷಯಗಳಲ್ಲಿ ನ್ಯಾಯ ದೊರೆತಿದೆ ಎಂದರು. ಹಿರಿಯ ನಟ ಮುಖ್ಯಮಂತ್ರಿ ಚಂದ್ರು ಅವರು ಮಾತನಾಡಿ, ದೊರೆಸ್ವಾಮಿ ಅಂತಹ ಹಿರಿಯ ವಿರುದ್ಧ ಹೇಳಿಕೆ ನೀಡಿರುವ ಯತ್ನಾಳ್ ಕೂಡಲೇ ಕ್ಷಮೆ ಕೇಳಬೇಕು. ಮುಂದೆ ಇಂತಹ ಹೇಳಿಕೆಗಳು ನೀಡದಂತೆ ಎಚ್ಚರ ವಹಿಸಬೇಕು. ಇಲ್ಲದಿದ್ದಲ್ಲಿ ಮುಂದಿನ ದಿನಗಳಲ್ಲಿ ಮತ್ತಷ್ಟು ತೀವ್ರವಾದ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಪ್ರತಿಭಟನೆಯಲ್ಲಿ ಮಾಜಿ ಸಚಿವ ಬಿ.ಟಿ.ಲಲಿತಾ ನಾಯಕ್, ಸಿಪಿಎಂ ಮುಖಂಡ ಜಿ.ಎನ್.ನಾಗರಾಜ್, ನಿತ್ಯಾನಂದಸ್ವಾಮಿ, ಕೆ.ಎಸ್. ವಿಮಲಾ, ಸುರೇಂದ್ರರಾವ್, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್, ಗಾಂಧೀ ಸ್ಮಾರಕ ನಿಧಿಯ ವೂಡೇ ಪಿ.ಕೃಷ್ಣ ಸೇರಿದಂತೆ ಮತ್ತಿತರರಿದ್ದರು.

ಶಾಸಕ ಯತ್ನಾಳ್ ಬಂಧನಕ್ಕೆ ಆಗ್ರಹ :

ನಾಡಿನ ಸಾಕ್ಷಿಪ್ರಜ್ಞೆ, ಸ್ವತಂತ್ರ ಹೋರಾಟಗಾರ, ಶತಾಯುಶಿ ಹೆಚ್.ಎಸ್.ದೊರೆಸ್ವಾಮಿಯವರ ಕುರಿತು ಶಾಸಕ ಯತ್ನಾಳ್ ಅವಮಾನಕರವಾಗಿ ಮಾತನಾಡಿರುವುದನ್ನು ರೈತ ಸಂಘಟನೆಗಳು ಖಂಡಿಸುತ್ತವೆ ಮತ್ತು ದೇಶದ ಸಂವಿಧಾನಬದ್ಧ ಶಾಸಕ ಸ್ಥಾನದಲ್ಲಿ ಮುಂದುವರೆಯಲು ಯಾವುದೇ ನೈತಿಕ ಹಕ್ಕಿಲ್ಲ, ಆದ್ದರಿಂದ ಯತ್ನಾಳ್ ನಾಡಿನ ಜನತೆಯ ಮುಂದೆ ಕ್ಷಮೆ ಯಾಚಿಸಬೇಕು ಮತ್ತು ಇವರನ್ನು ಶಾಸಕತ್ವದಿಂದ ವಜಾಮಾಡಬೇಕು ಮತ್ತು ಸ್ವತಂತ್ರ ಹೋರಾಟಗಾರರ ಬಗ್ಗೆ ಅವಹೇಳನಕಾರಿ ಮಾತುಗಳನ್ನಾಡಿರುವ ಯತ್ನಾಳರನ್ನು ಬಂಧಿಸಲು ಒತ್ತಾಯಿಸುತ್ತೇವೆ.

ಭೂಮಿ ಗುತ್ತಿಗೆ ಕಾಯ್ದೆ ಸುಟ್ಟು ರೈತ ಸಂಘದಿಂದ ಪ್ರತಿಭಟನೆ

ಅಂಕೋಲಾ : ಮಾದರಿ ಕೃಷಿ ಭೂಮಿ ಗುತ್ತಿಗೆ ಕಾಯ್ದೆ – 2016 ವಾಪಸ್ಸಿಗೆ ಆಗ್ರಹಿಸಿ ಕರ್ನಾಟಕ ಪ್ರಾಂತ ಸಂಘದ ತಾಲೂಕು ಸಮಿತಿಯಿಂದ ಗುರುವಾರ ತಹಶೀಲ್ದಾರ ಕಛೇರಿ ಎದುರು ಕಾಯ್ದೆಯ ಪ್ರತಿಯನ್ನು ಸುಟ್ಟು ಪ್ರತಿಭಟನೆ ನಡೆಸಲಾಯಿತು.

ಜಿಲ್ಲಾ ಸಮಿತಿ ಅಧ್ಯಕ್ಷ ಶಾಂತಾರಾಮ ನಾಯಕ ಮಾತನಾಡಿ, 'ಮಾದರಿ ಕೃಷಿ ಭೂಮಿ ಗುತ್ತಿಗೆ ಕಾಯ್ದೆ – 2016'ರ ಮೂಲಕ ದೇಶದ ಅಸಂಖ್ಯಾತ ರೈತರು ಮತ್ತು ಕೃಷಿ ಕೂಲಿಕಾರರನ್ನು ಸರ್ವನಾಶ ಮಾಡಿ 'ಕೃಷಿ ಉತ್ಪಾದನೆ' ಮತ್ತು 'ಮಾರುಕಟ್ಟೆ'ಯನ್ನು ಸಂಪೂರ್ಣವಾಗಿ ಬಹುರಾಷ್ಟ್ರೀಯ ಕಂಪನಿಗಳಿಗೆ ಒಪ್ಪಿಸಲು ಹೊರಟಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ರೈತ ವಿರೋಧಿ ನೀತಿಗಳನ್ನು ಖಂಡಿಸಿ, ಯಾವುದೇ ಕಾರಣಕ್ಕೂ ರಾಜ್ಯದಲ್ಲಿ ಈ ಕಾಯ್ದೆಯನ್ನು ಜಾರಿ ಮಾಡಬಾರದೆಂದು ಒತ್ತಾಯಿಸಿ ಇಂದು ರಾಜ್ಯಾದ್ಯಂತ ಕರ್ನಾಟಕ ಪ್ರಾಂತ ರೈತ ಸಂಘದಿಂದ 'ಮಾದರಿ ಕೃಷಿ ಭೂಮಿ ಗುತ್ತಿಗೆ ಕಾಯ್ದೆ – 2016'ನ್ನು ಸುಟ್ಟು ಪ್ರತಿಭಟಿಸಿ ಈ ಮನವಿಯನ್ನು ಸರಕಾರಕ್ಕೆ ನೀಡಲಾಗುತ್ತಿದೆ ಎಂದರು.

ತಾಲೂಕು ಅಧ್ಯಕ್ಷ ಗೌರೀಶ ನಾಯಕ ಮಾತನಾಡಿ, ಈ ಕಾಯ್ದೆಯಿಂದ ಕೃಷಿ ಉತ್ಪಾದನೆ, ಕೃಷಿ ಮಾರುಕಟ್ಟೆ ಬಹುರಾಷ್ಟ್ರೀಯ ಕಂಪನಿಗಳ ಸ್ವಾಧೀನಕ್ಕೆ ಹೋಗಿ, ಒಂದು ಕಡೆ ರೈತರು, ಮತ್ತೊಂದು ಕಡೆ 'ಗ್ರಾಹಕರ'ನ್ನು ವಿಪರೀತವಾಗಿ ಶೋಷಣೆ ಮಾಡಲಾಗುತ್ತದೆ. ಮಾತ್ರವಲ್ಲ ಭೂಮಿಯ ಫಲವತ್ತತೆ, ಪರಿಸರವನ್ನು ನಾಶ ಮಾಡಲಾಗುತ್ತದೆ. ಈಗಾಗಲೇ ಇಂತಹ ಅನೇಕ ಕೆಟ್ಟ ಅನುಭವಗಳು ನಮ್ಮ ಮುಂದಿವೆ ಈ ಹಿನ್ನೆಯಲ್ಲಿ ರೈತ ವಿರೋಧಿ, ದೇಶ ವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸಲೇಬೇಕಿದೆ ಎಂದರು.

ತಾಲೂಕು ಕಾರ್ಯದರ್ಶಿ ಸಂತೋಷ ನಾಯ್ಕ, ಉಪಾಧ್ಯಕ್ಷ ಸುಧಾಕರ ಜಾಂಬಾವಳಿಕರ, ಸಮಿತಿ ಸದಸ್ಯರಾದ ವೆಂಕಟರಮಣ ಗೌಡ, ದೇವಿದಾಸ ನಾಯರ, ಉದಯ ನಾಯ್ಕ ಹೊಸಗದ್ದೆ, ಉದಯ ನಾಯ್ಕ ಬೇಲೆಕೇರಿ, ಆರ್.ಎಸ್. ಹುಲಸ್ವಾರ, ರಾಜಗೋಪಾಲ ಶೇಟ್, ಶಂಕರ ಹುಲಸ್ವಾರ, ಚಂದನ ನಾಯ್ಕ, ಮಹಾದೇವ ಗೌಡ ಮುಂತಾದವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ತಹಶೀಲ್ದಾರರ ಪರವಾಗಿ ಶಿರಸ್ತೇದಾರ ಪಿ.ಬಿ. ಗೌಡ ಮನವಿ ಸ್ವೀಕರಿಸಿದರು.

ಕೆ.ಎಂ. ದೊಡ್ಡಿಯಲ್ಲಿ ಪ್ರತಿಕೃತಿ ದಹನ

ಭಾರತದಲ್ಲಿನ ಹೈನೋದ್ಯಮ, ಕುಕ್ಕುಟೋದ್ಯಮವನ್ನು ನಾಶಮಾಡಲು ಅಮೇರಿಕದ ಉತ್ಪನ್ನಗಳಿಗೆ ತೆರಿಗೆ ಕಡಿತದ ರಿಯಾಯ್ತಿಗಳನ್ನು ನೀಡಲು ಅಗತ್ಯ ವಾಣಿಜ್ಯ ಒಪ್ಪಂದ ಮಾಡಿಕೊಳ್ಳಲು ಆಗಮಿಸಿದ ಅಮೆರಿಕ "ಅಧ್ಯಕ್ಷ ಡೋನಾಲ್ಡ್ ಟ್ರಂಪ್ ವಾಪಸ್ ಹೋಗು" ಎಂಬ ಘೋಷಣೆಗಳೊಂದಿಗೆ ಆತನ ಪ್ರತಿಕೃತಿಯನ್ನು ಕೆ.ಎಂ. ದೊಡ್ಡಿಯಲ್ಲಿ ದಹನಮಾಡಿ ಪ್ರತಿಭಟಿಸಲಾಯಿತು. ಸಿಪಿಐ(ಎಂ) ಪಕ್ಷದ ರಾಜ್ಯ ಕೇಂದ್ರದ ಸದಸ್ಯ ನಿತ್ಯಾನಂದಸ್ವಾಮಿ, ಜಿಲ್ಲಾ ಸಂಘಟನಾ ಸಮಿತಿಯ ಕಾರ್ಯದರ್ಶಿ ಪುಟ್ಟಮಾದು, ಸಿಐಟಿಯು ಮುಖಂಡರಾದ ಕುಮಾರಿ, ರೈತ ಸಂಘದ ಆನಂದ, ಯಶವಂತ, ಕೂಲಿಕಾರರ ಸಂಘದ ಹನುಮೇಶ್, ಬಸವರಾಜ್ ಕೆ. ಮೊದಲಾದವರು ಭಾಗವಹಿಸಿದ್ದರು.

ರಾಯಚೂರಿನಲ್ಲಿ ಟ್ರಂಪ್ ಭೂತ ದಹನ

ಅಖಿಲ ಭಾರತ ಕಿಸಾನ್ ಸಭಾ ಮತ್ತು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘಗಳ ಕರೆಯ ಮೇರೆಗೆ ರಾಯಚೂರ್‌ನಲ್ಲಿ ರೈತ ಹಾಗೂ ಕೂಲಿಕಾರ ಸಂಘಗಳ ಆಶ್ರಯದಲ್ಲಿ ಅಮೇರಿಕ ಅಧ್ಯಕ್ಷ ಟ್ರಂಪ್ ಪ್ರತಿಕೃತಿಯನ್ನು ಸುಟ್ಟು ಹಾಕಲಾಯಿತು. ರೈತ ಸಂಘದ ಮುಖಂಡ ಕೆ.ಜಿ. ವೀರೇಶ್ ಹಾಗೂ ಕೂಲಿಕಾರರ ಸಂಘದ ಮುಖಂಡ ಕರಿಯಪ್ಪ ಅಚ್ಚೊಳ್ಳಿ ನೇತೃತ್ವ ವಹಿಸಿದ್ದರು.

ಭೂಮಿ ಗುತ್ತಿಗೆ ಕಾಯ್ದೆ ಜಾರಿಗೆ ವಿರೋಧ

ಮಳವಳ್ಳಿ, ಫೆ.27: ಕೃಷಿ ಭೂಮಿಯನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಗುತ್ತಿಗೆ ನೀಡುವ ಕಾಯ್ದೆಯನ್ನು ವಿರೋಧಿಸಿ ಕರ್ನಾಟಕ ಪ್ರಾಂತ ರೈತ ಸಂಘದ ವತಿಯಿಂದ ಗುರುವಾರ ಪಟ್ಟಣದ ತಾಲೂಕು ಕಚೇರಿ ಎದುರು ಕಾಯ್ದೆ ಪ್ರತಿಯನ್ನು ಸುಟ್ಟು ಪ್ರತಿಭಟನೆ ನಡೆಸಲಾಯಿತು.

ಸಂಘಟನೆಯ ತಾಲೂಕು ಅಧ್ಯಕ್ಷ ಭರತ್‌ರಾಜ್ ಮಾತನಾಡಿ, ಕೃಷಿ ಭೂಮಿ ಗುತ್ತಿಗೆ ಕಾಯ್ದೆಯನ್ನು ಜಾರಿಗೊಳಿಸುವ ಮೂಲಕ ರೈತರನ್ನು ಬಹು ರಾಷ್ಟ್ರೀಯ ಕಂಪನಿಗಳಿಗೆ ಗುಲಾಮರನ್ನಾಗಿಸಲು ಸರಕಾರ ಹೊರಟಿದೆ ಎಂದು ಕಿಡಿಕಾರಿದರು.

ಕಾರ್ಪೊರೇಟ್ ಕಂಪೆನಿಗಳ ಅಡಿಯಾಳಾಗಿ ಕೆಲಸ ಮಾಡುತ್ತಿರುವ ಪ್ರಧಾನಿ ನರೇಂದ್ರಮೋದಿ 'ಕೃಷಿಕರ ವಿರೋಧಿ ಕಾಯ್ದೆಯನ್ನು ಜಾರಿಗೊಳಿಸಿ ರಾಜ್ಯ ಸರಕಾರದ ಮೇಲೆ ಒತ್ತಡ ಹಾಕಿ ರೈತ ಸಮುದಾಯವನ್ನು ನಾಶಮಾಡಲು ಹೊರಟಿದೆ ಎಂದರು. ಇದೇ ವೇಳೆ ಕಾಯ್ದೆ ಪ್ರತಿಯನ್ನು ಪ್ರತಿಭಟನಾ ನಿರತರು ಸುಟ್ಟುಹಾಕಿ ಕಾಯ್ದೆಯನ್ನು ಹಿಂಪಡೆಯಬೇಕೆಂದು ಆಗ್ರಹಿಸಿದರು. ಬಳಿಕ ಶಿರಸ್ತೇದಾರ್ ಕುಮಾರ್ ಅವರಿಗೆ ಮನವಿ ನೀಡಲಾಯಿತು.

ಕೃಷಿ ಭೂಮಿ ಗುತ್ತಿಗೆ ಕಾಯ್ದೆ ವಿರೋಧಿಸಿ ಪ್ರತಿಭಟನೆ

ಮಂಡ್ಯ, ಫೆ.27: ಕೃಷಿ ಭೂಮಿಯನ್ನು ಬಹುರಾಷ್ಟ್ರೀಯ ಕಂಪೆನಿಗಳಿಗೆ ಗುತ್ತಿಗೆ ನೀಡುವ ಮಾದರಿ ಕೃಷಿ ಭೂಮಿ ಗುತ್ತಿಗೆ ಕಾಯ್ದೆ 2016 ಅನ್ನು ರಾಜ್ಯ ಸರಕಾರ. ಜಾರಿ ಮಾಡಿ ರೈತರನ್ನು ಗುಲಾಮಗಿರಿಗೆ ನೂಕಲು ಹೊರಟಿದೆ ಎಂದು ಆರೋಪಿಸಿ ಕರ್ನಾಟಕ ಪ್ರಾಂತ ರೈತ ಸಂಘದ ಮತ್ತು ಕೂಲಿಕಾರರ ಸಂಘದ ಕಾರ್ಯಕರ್ತರು ಗುರುವಾರ ನಗರದಲ್ಲಿ ಪ್ರತಿಭಟನೆ ನಡೆಸಿದರು.

ಕಾರ್ಪೊರೇಟ್ ಬಹುರಾಷ್ಟ್ರೀಯ ಕಂಪೆನಿಗಳ ಅಡಿಯಾಳಾಗಿ ಕೆಲಸ ಮಾಡುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರು, ತಮ್ಮ ಅನುಕೂಲಕ್ಕಾಗಿ ಕೃಷಿಕರ ವಿರೋಧಿ ಕಾಯ್ದೆಯನ್ನು ಜಾರಿಗೊಳಿಸಿ ರಾಜ್ಯ ಸರಕಾರದ ಮೇಲೆ ಒತ್ತಡ ಹಾಕಿ ಕೃಷಿ ಅವಲಂಬಿತ ಸಮುದಾಯವನ್ನು ನಾಶ ಮಾಡಲು ಹೊರಟಿದ್ದಾರೆ ಎಂದು ದೂರಿದರು.

ನಮ್ಮಲ್ಲಿ ಶೇ.85ರಷ್ಟು ಹೆಚ್ಚಿನ ರೈತರು ಸಣ್ಣ ಅತಿಸಣ್ಣ ರೈತರಾಗಿರುವ ಕಾರಣ ಈ ಭೂಮಿ ಹಿಡುವಳಿಗಳು ಆಧುನಿಕ ಕೃಷಿಗೆ ಯೋಗ್ಯವಲ್ಲ. ಇವರ ಹತ್ತಿರ ಕೃಷಿಗೆ ತೊಡಗಿಸಲು ಬೇಕಾದ ಬಂಡವಾಳವೂ ಇಲ್ಲ. ಬಹುರಾಷ್ಟ್ರೀಯ ಕಂಪೆನಿಗಳಿಗೆ ಕೃಷಿ ಭೂಮಿಯನ್ನು ಗುತ್ತಿಗೆ ಕೊಡಲು ರಾಜ್ಯ ಸರಕಾರ ತುದಿಗಾಲ ಮೇಲೆ ನಿಂತಿದೆ ಎಂದು ಅವರು ಕಿಡಿಕಾರಿದರು.

ಈಗಾಗಲೇ ಸಂಕಷ್ಟದಲ್ಲಿರುವ ರೈತರ ದೌರ್ಬಲ್ಯವನ್ನು ದುರುಪಯೋಗಪಡಿಸಿಕೊಂಡು ರಿಯಲ್ ಎಸ್ಟೇಟ್ ಮಾಫಿಯಾದವರು, ಅಕ್ರಮವಾಗಿ ಹಣಗಳಿಸಿರುವ ರಾಜಕಾರಣಿಗಳು, ಅಧಿಕಾರಿಗಳು ರೈತರ ಭೂಮಿಯನ್ನು ಕೊಂಡುಕೊಂಡಿದ್ದಾರೆ. ಆ ರೈತರು ತಮ್ಮದೇ ಜಮೀನಿನಲ್ಲಿ ಜೀತಗಾರರಾಗಿದ್ದಾರೆ ಎಂದು ಅವರು ಆತಂಕ ವ್ಯಕ್ತಪಡಿಸಿದರು.

ಬಹುರಾಷ್ಟ್ರೀಯ ಕಂಪನಿಗಳಿಗೆ ಕೃಷಿ ಭೂಮಿಯನ್ನು ಗುತ್ತಿಗೆ ನೀಡುವ ನಿರ್ಧಾರ ಕೈಬಿಡಬೇಕು. ರೈತರಿಗೆ ಅಗತ್ಯವಿರುವ ನೀರಾವರಿ, ಸಾಲ ಸೌಲಭ್ಯ, ಉತ್ತಮವಾದ ಬಿತ್ತನೆ ಬೀಜ, ಗೊಬ್ಬರ, ಮಾರುಕಟ್ಟೆ, ಬೆಂಬಲ ಬೆಲೆ ನೀಡಬೇಕು. ಬಗರ್ ಹುಕುಂ ಸಾಗುವಳಿದಾರರಿಗೆ ಹಕ್ಕುಪತ್ರ ನೀಡಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಸಂಘದ ಜಿಲ್ಲಾಧ್ಯಕ್ಷ ಎಂ.ಪುಟ್ಟಮಾದು, ಟಿ.ಎಲ್. ಕೃಷ್ಣೇಗೌಡ, ಬಿ. ಹನುಮೇಶ್ ಮತ್ತಿತರರು ಭಾಗವಹಿಸಿದ್ದರು.

ಬೈಂದೂರು: ಉದ್ಯೋಗ ಖಾತ್ರಿ ಕೆಲಸಕ್ಕೆ ಚಾಲನೆ

ಬೈಂದೂರು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಕೃಷಿಕೂಲಿಕಾರರಿಗೆ ಕೈಗೊಂದು ಕೆಲಸ, ಊರಿಗೊಂದು ಆಸ್ತಿ ಹಿನ್ನೆಲೆಯಲ್ಲಿ ಬೈಂದೂರು, ಮಯ್ಯಾಡಿ ಬಸವನ ಕೆರೆ ತೋಡು ಹೂಳೆತ್ತುವ ಅಭಿವೃದ್ಧಿ ಕಾಮಗಾರಿಯನ್ನು ಬೈಂದೂರು ಗ್ರಾಮ ಪಂಚಾಯತ್ ಅಧ್ಯಕ್ಷೆ ಭಾಗೀರಥಿ ರವರು ಚಾಲನೆ ನೀಡಿ, ಉದ್ಯೋಗ ಖಾತ್ರಿ ಕೆಲಸಗಾರರಿಗೆ ಗ್ರಾಮ ಪಂಚಾಯತ್ ವತಿಯಿಂದ ಸಂಪೂರ್ಣ ಸಹಕಾರ ನೀಡುವುದಾಗಿ ಹೇಳಿ, ಕೂಲಿಕಾರರನ್ನು ಅಭಿನಂದಿಸಿದರು. ಈ ಸಂದರ್ಭದಲ್ಲಿ ಪಂಚಾಯತ್ ಸದಸ್ಯ ಭಾಸ್ಕರ ನಾಯ್ಕ್, ಕಾರ್ಯದರ್ಶಿ ಶಿವನಗೌಡ ತಡಹಾಳ, ಪಂಚಾಯತ್ ಸಿಬ್ಬಂದಿ ಉಪಸ್ಥಿತರಿದ್ದರು. ಉದ್ಯೋಗ ಖಾತ್ರಿ ಯೋಜನೆಯಡಿ ಕೂಲಿಕಾರರು ಕೆಲಸಕ್ಕೆ ಬರುವಂತೆ ಪ್ರೇರೆಪಿಸಿ ಸಹಕರಿಸಿದ ಕೂಲಿಕಾರರ ಸಂಘದ ವೆಂಕಟೇಶ ಕೋಣಿ, ನಾಗರತ್ನ ಹಾಜರಿದ್ದರು.

ಸಿಎಎ, ಎನ್‌ಆರ್‌ಸಿ, ಎನ್‌ಪಿಆರ್ ವಿರೋಧಿಸಿ ಮನೆ–ಮನೆ ಅಭಿಯಾನ: ಸೀತಾರಾಂ ಯೆಚೂರಿ



ಬೆಳಗಾವಿ: 'ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ), ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ) ಮತ್ತು ರಾಷ್ಟ್ರೀಯ ಜನಸಂಖ್ಯಾ ನೋಂದಣಿ (ಎನ್‌ಪಿಆರ್) ವಿರೋಧಿಸುವಂತೆ ಜನರಲ್ಲಿ ಜಾಗೃತಿ ಮೂಡಿಸಲು ಮಾರ್ಚ್ 1ರಿಂದ 23ರವರೆಗೆ ದೇಶದಾದ್ಯಂತ ಮನೆ–ಮನೆಗಳಿಗೆ ತೆರಳಿ ಅಭಿಯಾನ ನಡೆಸಲಾಗುವುದು' ಎಂದು ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ತಿಳಿಸಿದರು.

ಇಲ್ಲಿ ಫೆ. 25 ರಂದು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ಅಭಿಯಾನದಲ್ಲಿ ಸಿಪಿಎಂ ಸೇರಿದಂತೆ 20ಕ್ಕೂ ಹೆಚ್ಚು ಎಡಪಕ್ಷಗಳು ಪಾಲ್ಗೊಳ್ಳಲಿವೆ. ಜನಗಣತಿಗೆ ವಿರೋಧವಿಲ್ಲ. ಆದರೆ, ಎನ್‌ಆರ್‌ಸಿಗೆ ಪ್ರಬಲ ವಿರೋಧವಿದೆ. ಎನ್‌ಆರ್‌ಸಿಯಿಂದ ಸಂವಿಧಾನಕ್ಕೆ ಬಂದೊದಗಿರುವ ಅಪಾಯ ತಿಳಿಸಿಕೊಡಲಾಗುವುದು' ಎಂದು ಹೇಳಿದರು.

'ಗಣತಿ ವೇಳೆ ಇತರ ಪ್ರಶ್ನೆಗಳಿಗೆ ಉತ್ತರಿಸಿ. ಆದರೆ, ಎನ್‌ಸಿಆರ್ ಕುರಿತ ಪ್ರಶ್ನೆಗಳಿಗೆ ಉತ್ತರಿಸಬೇಡಿ ಎಂದು ತಿಳಿಸಲಾಗುವುದು. ಎನ್‌ಪಿಆರ್ ಮಾಹಿತಿ ಪಡೆಯುವ ವೇಳೆ ಎನ್‌ಆರ್‌ಸಿ ಬಗ್ಗೆಯೂ ಕೇಳುತ್ತಾರೆ. ಗೊಂದಲವಿದ್ದರೆ ಹಾಗೂ ತಾಳೆ ಆಗದಿದ್ದರೆ ಎನ್‌ಆರ್‌ಸಿಯಲ್ಲಿ ಹೆಸರು ಸೇರಿಸುವುದಿಲ್ಲ. ಆಗ, ದಾಖಲೆಗಳನ್ನು ಪ್ರಸ್ತುತಪಡಿಸಬೇಕಾಗುತ್ತದೆ. ಅಲೆಮಾರಿಗಳು, ದಲಿತರು, ಬಡವರು ಹಾಗೂ ಆದಿವಾಸಿಗಳಿಗೆ ದಾಖಲೆಗಳು ಇರುವುದಿಲ್ಲ. ಈ ರೀತಿಯ ಜನರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಅವರಿಗೆ ಬಹಳ ತೊಂದರೆಯಾಗುತ್ತದೆ' ಎಂದು ತಿಳಿಸಿದರು.

ಇತರ ರಾಜ್ಯಗಳೂ ಮಾಡಲಿ:

'ಎನ್‌ಆರ್‌ಸಿಗೆ 13 ರಾಜ್ಯಗಳು ವಿರೋಧ ವ್ಯಕ್ತಪಡಿಸಿವೆ. ನಮ್ಮ ರಾಜ್ಯದಲ್ಲಿ ಅವಕಾಶ ಕೊಡುವುದಿಲ್ಲ ಎಂದು ಹೇಳಿವೆ. ಈ ದಿಟ್ಟತನವನ್ನು ಇತರ ರಾಜ್ಯಗಳೂ ತೋರಿಸಬೇಕು' ಎಂದು ಒತ್ತಾಯಿಸಿದರು.

'ಕೇಂದ್ರವು, ಧರ್ಮದ ಆಧಾರದ ಮೇಲೆ ಪೌರತ್ವ ನೀಡಲು ನಿರ್ಧರಿಸಿ ಸಿಎಎ ಮಾಡಿದೆ. ಇದು, ಸಂವಿಧಾನ ವಿರೋಧಿಯಾದುದು. ಈಗಾಗಲೇ ಕಾನೂನುಗಳಿವೆ. ಹೊಸ ಕಾನೂನಿನ ಅಗತ್ಯವಿಲ್ಲ. ಸಿಎಎ, ಎನ್‌ಆರ್‌ಸಿ, ಎನ್‌ಪಿಆರ್ ಪ್ರತ್ಯೇಕವಾಗಿ ನೋಡಬಾರದು. ಇವೆಲ್ಲವೂ ಒಂದೇ ಪ್ಯಾಕೇಜ್ ಆಗಿವೆ. ಕೋಮುವಾದಿ ಹಿಂದುತ್ವ ಬಲಗೊಳಿಸುವ ಹುನ್ನಾರ ಅಡಗಿದೆ' ಎಂದು ದೂರಿದರು.

ಸಿನಿಮಾ ಒಂದು ಶಿಕ್ಷಣವಾದಾಗ



ಮನುಷ್ಯ ಚಿರಕಾಲ ಪಯಣಿಗನಾಗಿರುತ್ತಾನೆ. ಎಲ್ಲೆಡೆ ಎದುರಾಗುವುದೇ ಶಿಕ್ಷಣ. ಮನುಷ್ಯನಿಗೆ ಎಲ್ಲಾ ಮೂಲಗಳಿಂದಲೂ ಸಿಗುವಂತಹುಗಳೆಲ್ಲವನ್ನು ಶಿಕ್ಷಣದ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಹೀಗಾಗಿಯೇ ಅನ್ಯಭಾಷೆ ಅಲ್ಪ ತಿಳುವಳಿಕೆಯ ನಮ್ಮಂತಹ ಕನ್ನಡ ಬಲ್ಲವರಿಗೆ ಜಗತ್ತಿನ ನಾನಾ ದೇಶಗಳ, ಭಾಷೆಗಳ ಸಿನಿಮಾವೂ ಸಹ ಜಾಗತಿಕ ಶಿಕ್ಷಣವೆಂಬಂತೆ ತೋರ್ಪಡಿಸುತ್ತವೆ.

ಸಿನಿಮಾ ಎಂಬುದು ಬರೀ ಏಕ ಮಾಧ್ಯಮದ ಶಿಕ್ಷಣವಾಗಿ ಪರಿಣಮಿಸುವುದಿಲ್ಲ. ಬದಲಾಗಿ ಅವು ಸ್ಥಳೀಯತೆಯ ವಾಸ್ತವತೆಯೊಂದಿಗೆ ಸುತ್ತಲಿನ ಪ್ರದೇಶದ ಭಾಷೆ, ಸಂಸ್ಕೃತಿ, ಜನಾಂಗ, ಕಣ್ಣೋಟ ಎಲ್ಲವನ್ನು ಒಳಗೊಂಡ ವೈವಿಧ್ಯತೆಯ ಸಿದ್ಧ ಮಾದರಿ ಶಿಕ್ಷಣ ಎಂಬಂತೆ ರೂಪುಪಡೆದು ನಮ್ಮ ಕಣ್ಣೆದುರು ಪ್ರದರ್ಶಿತಗೊಳ್ಳುತ್ತವೆ.

ನನ್ನಂತಹವನಿಗೆ ಸಿನಿಮಾ ಎಂಬ ಮಾಧ್ಯಮ ಎಂದಿಗೂ ಶಿಕ್ಷಣವಾಗಿಯೇ ಪರಿಣಮಿಸುತ್ತದೆ. ಈ ಬಾರಿಯ ಬೆಂಗಳೂರು ಅಂತರಾಷ್ಟ್ರೀಯ ಚಿತ್ರೋತ್ಸವವು ಸಹ ಒಂದು ಶಿಕ್ಷಣ ಕೇಂದ್ರವಾಗಿಯೇ ಕಂಡು ಬಂದಿತು. ಇಲ್ಲಿ ಭಾಷೆ ತಿಳಿಯದ ಅನ್ಯ ಭಾಷೆಯ ಸಿನಿಮಾಗಳನ್ನು ನೋಡಲೆತ್ನಿಸಿದಾಗ ಎದುರಾಗುವುದು ಇವುಗಳು ಎಷ್ಟೊಂದು ವಾಸ್ತವ ಸನ್ನಿವೇಶವನ್ನು ನಮ್ಮ ಎದುರಿಗೆ ಇಡುತ್ತಿದೆ ಎಂದು ಭಾವಿಸುತ್ತೇನೆ.



ಫೆಬ್ರವರಿ 26 ರಿಂದ ಮಾರ್ಚ್ 04ರ ವರೆಗೆ ಒಂದು ವಾರಗಳ ಕಾಲ ಹತ್ತಾರು ಪರದೆಗಳಲ್ಲಿ, ನೂರಾರು ಸಿನಿಮಾಗಳು ಪ್ರದರ್ಶನಗೊಂಡವು. ದೊಡ್ಡ ದೇಶಗಳ ಚಿಕ್ಕ ಸಿನಿಮಾಗಳು, ಚಿಕ್ಕ ದೇಶಗಳ ದೊಡ್ಡ ಸಿನಿಮಾಗಳು ತಿರುವು ಮುರುವು ಮಾಡಿದರೆ ಹೇಗಾಗಬಹುದೆಂದು ಅನ್ನಿಸಿದ್ದು ನಿಜ. ಈ ಬಾರಿ ಇರಾನ್, ಅಫ್ಘಾನಿಸ್ತಾನ್, ಬಾಂಗ್ಲಾದೇಶ, ಸ್ಪೇನ್, ಟ್ಯುನೇಷಿಯಾ, ಫ್ರಾನ್ಸ್, ಲೆಬನಾನ್, ಖಜಕಿಸ್ತಾನ್, ಥಾಯಿಲೆಂಡ್ ಇತ್ಯಾದಿ ದೇಶಗಳಿಂದ ಆಯ್ಕೆಗೊಂಡ ಸಿನಿಮಾಗಳು ಸ್ಥಳೀಯ ಪರಿಸರದ ವಾಸ್ತಾವ ಸನ್ನಿವೇಶವನ್ನು ಕಟ್ಟಿಕೊಡುತ್ತದೆ. ಬದಲಾದ ಮನುಷ್ಯ ಬದುಕಿನ ಸಂಬಂಧಗಳನ್ನು ಅನಾವರಣಗೊಳಿಸುತ್ತದೆ.

ದೂರದೂರಿನ ಪುಟ್ಟದೇಶದೊಂದರ ಸಿನಿಮಾದ ಯಾವುದೋ ಒಂದು ತುಣುಕು ನಮ್ಮ ನಡುವಿನ ವಾಸ್ತವತೆಯನ್ನು ಅರಿವಿಗೆ ತರುತ್ತದೆ. ಒಂದು ಸಣ್ಣ ಘಟನೆಯೊಂದನ್ನು ಚಿತ್ರದ ಮೂಲಕ ನೋಡಲೆತ್ನಿಸಿದಾಗ ಮಾತ್ರ ವಾಸ್ತವತೆಯನ್ನು ಸಮಗ್ರವಾಗಿ ತಿಳಿಯಲು ಸಾಧ್ಯವಾಗುವಂತೆ ಸಿನಿಮಾಗಳು ಎದುರಾಗುತ್ತವೆ.

ಹೀಗೆ ನಾನು ಎದುರುನೋಡಿದ್ದು ಸದಾ ಯುದ್ಧಪ್ರದೇಶದ ಸಿನಿಮಾಗಳಲ್ಲಿಯೂ ಅವರೊಳಗಿನ ವಾಸ್ತವತೆಯ ಮೂಲಕ ವ್ಯವಸ್ಥೆಯ ವಿರುದ್ಧದ ತಮ್ಮ ಧ್ವನಿ ಎಂಬಂತೆ, ಮನುಷ್ಯನಿಗಾಗಿಯೇ ರೂಪುಗೊಂಡ ಕಾನೂನುಗಳು ಸಹ ಕೆಲವೊಮ್ಮೆ ಲೋಪದೋಷಗಳಿಂದ ಕೂಡಿರುತ್ತವೆ ಎಂಬಂತಹ ಧ್ವನಿಯಾಗಿ, ತನ್ನದಲ್ಲದ ಬದುಕಿನ ಅರೆ ಕ್ಷಣಗಳಲ್ಲಿ ಎದುರುಗೊಳ್ಳುವ ಅಸಹಾಯತೆಯ ವಿರುದ್ಧದ ಧ್ವನಿಯಾಗಿ ರೂಪುಗೊಳ್ಳುವಂತೆ ಸಿನಿಮಾಗಳು ಸೃಷ್ಟಿಸಿಕೊಂಡಿರುತ್ತವೆ.

ಯಾವುದೇ ವೈಭವೀಕರಣವಾಗಲಿ, ಹೀರೋಯಿಸಂ ಆಗಲಿ, ಕೇವಲ ಕನಸಿನ ಲೋಕಕ್ಕೆ ಕೊಂಡೊಯ್ಯದೆ ಇರುವ ಸ್ಥಿತಿಯನ್ನು ಯಥಾವತ್ತಾಗಿ ಉಣಬಡಿಸುವುದು ನಿಜವಾದ ಸಿನಿಮಾ ಆಗುತ್ತದೆ. ಬರೀ ಇರುವುದನ್ನು ಹಾಗೆಯೇ ಚಿತ್ರಿಸಿದರೂ ಸಹ ಸುತ್ತಲಿನ ಪ್ರಪಂಚಕ್ಕೂ ಸಿನಿಮಾಗೂ ವ್ಯತ್ಯಾಸವಿರುವುದಿಲ್ಲ. ಜೀವನಕ್ಕೆ ಹತ್ತಿರವಾದುದ್ದನ್ನೆ ಸೃಷ್ಟಿಸಿಕೊಂಡು ಅದರೊಳಗೆ ಹೊಸತನ್ನು ರೂಪುಗೊಂಡಾಗ ಮಾತ್ರ ಕಲಿಕೆ ಮಾಧ್ಯವಾಗಿ ಸಿನಿಮಾ ಬೆಳೆವಣಿಗೆ ಪಡೆದುಕೊಳ್ಳುತ್ತದೆ.

ಈಗಲೂ ಭಾರತದ ಸಿನಿಮಾ ಜಗತ್ತು ಕೆಲವು ಸಿದ್ಧ ಸೂತ್ರಗಳನ್ನು ಬದಿಗಿಟ್ಟು, ವಾಸ್ತವಿಕ ನೆಲೆಗಟ್ಟಿನಲ್ಲಿ ರೂಪುಗೊಂಡರೆ ಭಾರತದಂತಹ ದೊಡ್ಡ ದೇಶದಲ್ಲಿಯೂ ಸಿನಿಮಾವೂ ಸಹ ಒಂದು ಶೈಕ್ಷಣಿಕ ಮಾಧ್ಯಮವಾಗಿ ರೂಪುಗೊಳ್ಳಲು ಸಾಧ್ಯ. ದೇಶದ ಸಿನಿಮಾ ವಿಭಾಗ ವಾಸ್ತವತೆಯಿಂದ ಅದೆಷ್ಟು ದೂರ ಕ್ರಮಿಸಿದೆ ಎಂದರೆ ಆ ಜಗತ್ತು ನಮಗೆ ಸಾಧ್ಯವಿಲ್ಲವೆಂಬಂತೆ ಭ್ರಮೆಗಳನ್ನು ಸೃಷ್ಟಿಸಲಾಗುತ್ತದೆ.

ಸಿನಿಮಾಗಳು ಇಂದು ಬಂಡವಾಳದ ವ್ಯವಹಾರವಾಗಿ ಮಾತ್ರ ಭಾರತದಲ್ಲಿ ತಯಾರಾಗುತ್ತಿವೆ. ಈ ನಡುವೆ ಸಿನಿಮಾದೊಂದಿಗೆ ಜೊತೆಗೂಡಿರುವ ಚಿಕ್ಕ ಪರದೆ ಮತ್ತು ದೊಡ್ಡ ಮಾಧ್ಯಮವಾಗಿರುವ ಕಿರುತೆರೆಯೂ ಸಹ ಅದೆಷ್ಟು ಮನುಷ್ಯ ಸಂಬಂಧಗಳಿಂದ ದೂರ ಸರಿದಿದೆ ಎಂದರೆ ತನ್ನದಲ್ಲದ ಸ್ಥಳೀಯತೆಗೆ ಒಗ್ಗೂಡುವಂತೆಯೂ ಮಾಡಲಾಗುತ್ತಿದೆ. ಬಂಡವಾಳ ಕೇಂದ್ರೀತ ಮಾಧ್ಯಮವಾಗುತ್ತಿರುವ ಇವುಗಳ ಒಳಗೆ ನುಸುಳಿಕೊಂಡಿರುವ ಏಕಸ್ವಾಮ್ಯ ಉದ್ಯಮವೂ ಸಹ ಎಂಬುದು ದೇಶದ ವೈವಿಧ್ಯತೆಯನ್ನು ಹಾಳು ಮಾಡುತ್ತಿರುವುದನ್ನು ಕಾಣಬಹುದು.

ಅದರ ನಡುವೆಯೂ ಸಹ ಇತ್ತೀಚಿನ ಕೆಲವು ವರ್ಷಗಳಲ್ಲಿ ಜನಮಾನಸದ ವಾಸ್ತವತೆಯನ್ನು ಚಿತ್ರಿಸುವ ಸಿನಿಮಾವಾಗಿಯೂ ಎದುರಾಗಿರುವುದು ಸುಳ್ಳಲ್ಲ. ಇವುಗಳು ಮತ್ತಷ್ಟು ಹೆಚ್ಚು ರೂಪುಗೊಳ್ಳಬೇಕಿರುವುದು ಇಂದಿನ ಅನಿವಾರ್ಯ ಮತ್ತು ಅಗತ್ಯ.

ದೇಶದ ವಿವಿಧ ರಾಜ್ಯಗಳ ಸಿನಿಮಾಗಳು ವಾಸ್ತವಿಕ ಚಿತ್ರಣವನ್ನು ಅನಾವರಣಗೊಳಿಸಿದರೂ ಸಹ ಅವುಗಳ ಕಡೆ ಕೆಲವೊಮ್ಮೆ ಗಮನ ಕೇಂದ್ರೀಕರಿಸಲು ಸಾಧ್ಯವಾಗಿರುವುದಿಲ್ಲ ಅಥವಾ ಅವು ಜಾಗತಿಕಗೊಳ್ಳದಂತೆ ತಡೆಹಿಡಿದಿರುವ ಸಾಧ್ಯತೆಯೂ ಹೆಚ್ಚಾಗಿದ್ದಾಗ ನಮಗೆ ಎದುರಾಗಲು ಹೇಗೆ ಸಾಧ್ಯ. ಹೀಗಾಗಿಯೇ ಕೆಲವೊಮ್ಮೆ ಚಿತ್ರೋತ್ಸವಗಳಲ್ಲಿ ಪ್ರದರ್ಶನಗೊಳ್ಳುವ ಚಿತ್ರಗಳು ವಾಸ್ತವತೆಯನ್ನು ಬಿಂಬಿಸುತ್ತದೆ. ಹೀಗಾಗಿ ಯಾವುದೋ ಒಂದು ಸಿನಿಮಾವನ್ನು ಕೇಂದ್ರೀಕರಿಸಿಕೊಳ್ಳದಂತೆ ವಿವಿಧತೆಯ ಶಿಕ್ಷಣವನ್ನು ನಮಗೆ ಒದಗಿಸುತ್ತದೆ.

– ವಿನೋದ ಶ್ರೀರಾಮಪುರ





JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**